ರಂಜನೆ ಬೋಧನೆ ಪ್ರಬೋಧನೆ

# ಲಂಕೇಶ್

26 ಅಕ್ಟೋಬರ್ 2016 ಪುಟ 20 ರೂ. 15/-




## ಜಿಗ್ನೇಶ್ ಮೇವಾನಿ ಭಾಷಣ




# ಹುಂಡಿ ಹಣಕ್ಕಾಗಿ ಬೊಬ್ಬೆ

# ಅಮ್ಮನ ವ್ಯಾಧಿ ಎಂಥದ್ದು?






## ಬಳ್ಳಾರಿ: ರೈತರ 'ತುಂಗೆ' ಕಾರ್ಖಾನೆಗಳಿಗೆ 'ಭದ್ರ'



## ಚಿತ್ರದುರ್ಗ ಸೌಭಾಗ್ಯ-ಬಸವರಾಜನ್ ದಾಂಪತ್ಯದಲ್ಲಿ ಬಿರುಕು?

# ಸರಕಾರಿ ಶಾಲೆ ಉಳಿಸುವ ಪ್ರಯೋಗದ ಕೆಲವು ಅನುಭವಗ




ಅಲ್ಲಿಂದ ಇಲ್ಲಿಂದ ಅಂಕಿ-ಅಂಶಗಳನ್ನು ಹೆಕ್ಕಿ, ಸರ್ಕಾರವನ್ನು ಬೈದು ಬರೆಯುವ ಲೇಖನಗಳನ್ನೇ ಈ ಅಂಕಣದಲ್ಲಿ ಓದಿಓದಿ ಕೆಲವು ಸ್ನೇಹಿತರು ಸಿಟ್ಟು ಮಾಡಿಕೊಂಡಿದ್ದಾರೆ. ಸದಾಕಾಲ ನಕಾರಾತ್ಮಕ ಸಂಗತಿಗಳನ್ನೇ ಬರೆಯುವುದು ಏಕೆ ಎಂದೂ ಕೆಲವರು ಕೇಳಿದ್ದಾರೆ. ವಾಸ್ತವದಲ್ಲಿ ಬರೆಯಬೇಕೆಂದುಕೊಳ್ಳುವ ಎಷ್ಟೋ ಸಂಗತಿಗಳನ್ನು ಬರೆಯಲು ಆಗುವುದಿಲ್ಲ. ಉದಾಹರಣೆಗೆ ಜಿಎಸ್‌ಟಿ ಎಂಬ ಮಹಾ ಮೋಸ ಮತ್ತು ಸಕಲ ಪಕ್ಷಗಳೂ ಒಟ್ಟು ಸೇರಿ ದೇಶದ ಜನಸಾಮಾನ್ಯರ ಮೇಲೆ ಮಾಡಿದ ದಾಳಿಯ ಕುರಿತು ವಿವರವಾಗಿ ನಾಲ್ಕು ಕಂತುಗಳಲ್ಲಿ ಬರೆಯಬೇಕೆಂದು ತೀರ್ಮಾನಿಸಿಯಾಗಿತ್ತು. ಅಷ್ಟರಲ್ಲಿ ಕಾವೇರಿ ವಿವಾದ ಬಂದಿತು. ಈಗೇನು ಮಾಡುವುದು? ಈ ರೀತಿಯ ಕೆಲವು ಕಷ್ಟಗಳು ಪ್ರತೀವಾರ ಅಂಕಣ ಕೆತ್ತುವ ಅರೆಕಾಲಿಕ ಬರಹಗಾರರಾದ ನಮ್ಮಂಥವರಿಗೆ ಇರುತ್ತದೆ. ಅದೇನೇ ಬಂದರೂ ಈ ವಾರ ಸಕಾರಾತ್ಮಕವಾದದ್ದನ್ನೇ ಬರೆಯ ಬೇಕೆಂದು ಆಲೋಚಿಸಿದೆ ಮತ್ತು ಸರ್ಕಾರೀ ಶಾಲೆ ಉಳಿಸುವ ಪ್ರಯತ್ನದಲ್ಲಿ ನಮಗೆ ಸ್ವಾರಸ್ಯಕರವಾಗಿ ಕಂಡ ಕೆಲವು ಅನುಭವಗಳ ಕುರಿತು ಬರೆಯಲು ಗಟ್ಟಿಯಾದ ತೀರ್ಮಾನ ಮಾಡಿಯಾಗಿದೆ.

## ಖಾಸಗಿ ಶಾಲೆಗಳಿಂದ ಬಂದ ಹೇನು


ಊರಿನ ಶಾಲೆ ಉಳಿಸಲೇಬೇಕೆಂದು ಶಾಲೆಯ ಸುತ್ತಲಿನ ಸಮುದಾಯವೇ ಪ್ರಯತ್ನಪಟ್ಟು ಯಶಸ್ವಿಯಾದ ಉತ್ತಮ ಉದಾಹರಣೆಗಳಲ್ಲಿ ಮದ್ದೂರು ತಾಲೂಕಿನ ಮೆಣಸಗೆರೆಯೂ ಒಂದು. ಒಂದು ದಿನ ಮೆಣಸಗೆರೆಯ ಮಹೇಶ್ ಅವರು ಫೋನ್ ಮಾಡಿದರು. 'ಸಾರ್, ಒಂದು ಸಮಸ್ಯೆಯಾಗಿದೆ. ನಿಮ್ಮಿಂದ ಸಲಹೆ ಬೇಕಿತ್ತು', 'ಹೇಳಿ ಮಹೇಶ್ ಅವರೇ', 'ನಮ್ಮ ಶಾಲೆಯ ಮಕ್ಕಳ ತಲೆಯಲ್ಲಿ ತುಂಬಾ ಹೇನು ಆಗಿದೆ, ಏನು ಮಾಡುವುದು ಅಂತ ಗೊತ್ತಾಗ್ತಿಲ್ಲ', 'ಹೇನು ಇಲ್ಲದಂತೆ ಮಾಡುವ ಔಷಧಗಳು, ಶಾಂಪೂ ಎಲ್ಲಾ ಇವೆಯಲ್ಲಾ, ಅವನ್ನು ಹಾಕಿ ನೋಡಬೇಕಿತ್ತು', 'ಸಾರ್ ಅದನ್ನು ಮಾಡಿದೆವು. ನಾಲ್ಕು ತಿಂಗಳ ಕೆಳಗೆ ಎಲ್ಲಾ ಮಕ್ಕಳಿಗೂ ಔಷಧ ಹಾಕಿದ ಮೇಲೆ ಹೇನುಗಳು ಇರಲಿಲ್ಲ, ಆದರೆ, ಈಗ ಮತ್ತೆ ಎಲ್ಲಾ ಮಕ್ಕಳ ತಲೆಯಲ್ಲೂ ಹೇನು ಕಾಣಿಸಿಕೊಂಡಿವೆ. ಏನು ಮಾಡೋದು?'

ಹೀಗೇಕಾಯ್ತು ಎನ್ನುವುದನ್ನು ಪತ್ತೆ ಮಾಡುವುದು ಕಷ್ಟವಲ್ಲ, ಎಂಬಿಬಿಎಸ್ ಕೋರ್ಸಿನ ಭಾಗವಾಗಿ ಸಮುದಾಯ ವೈದ್ಯಶಾಸ್ತ್ರವನ್ನೂ ಓದಿಲ್ಲವೇ? ಕಾರಣ ಮತ್ತು ಪರಿಹಾರ ಕೂಡಲೇ ಹೊಳೆಯಿತು. ಆದರೆ, ಅದನ್ನು ಜಾರಿ ಮಾಡುವುದು ಅಷ್ಟು ಸುಲಭವಿರಲಿಲ್ಲ. 'ನೀವು ನಿಮ್ಮ ಶಾಲೆಯ ಮಕ್ಕಳಿಗೆ ಮಾತ್ರ ಔಷಧಿ ಕೊಟ್ಟಿರಲ್ಲವೇ?', 'ಹೌದು', 'ನಿಮ್ಮೂರಲ್ಲಿ ಎಲ್ಲಾ ಮಕ್ಕಳೂ ಸರ್ಕಾರೀ ಶಾಲೆಗೇ ಬರ್‍ತಾರಾ?', 'ಇಲ್ಲಾ ಸಾರ್. ನಮ್ಮೆಲ್ಲಾ ಪ್ರಯತ್ನದ ನಂತರ ಕೆಲವು ಮಕ್ಕಳು ಈಗಲೂ ಖಾಸಗಿ ಶಾಲೆಗಳಿಗೆ ಹೋಗುತ್ತಾರೆ. ಆದರೂ ಹೆಚ್ಚಿನ ಮಕ್ಕಳು ನಮ್ಮ ಶಾಲೆಗಳಿಗೇ ಬರುತ್ತಾರೆ'. 'ಸಮಸ್ಯೆ ಇಲ್ಲೇ ಇದೆ. ನೀವು ಸರ್ಕಾರೀ ಶಾಲೆಯ ಮಕ್ಕಳಿಗೆ ಮಾತ್ರ ಔಷಧಿ ಕೊಟ್ಟಿದ್ದೀರಿ. ಅವರ ಮನೆಯಲ್ಲಿನ ಇತರರಿಗೆ ಮತ್ತು ಊರಿನ ಇತರ ಮಕ್ಕಳಿಗೆ ಹೇನಿನ ಔಷಧಿ ಕೊಟ್ಟಿಲ್ಲ, ನಿಮ್ಮ ಶಾಲೆಯ ಮಕ್ಕಳ ತಲೆಯಲ್ಲಿದ್ದ ಹೇನುಗಳು ಸತ್ತವು. ನಂತರ, ಈ ಮಕ್ಕಳ ಜೊತೆಯಲ್ಲಿ ಆಟವಾಡುವ ಇತರ ಮಕ್ಕಳ ತಲೆಯಿಂದ ಅವು ಮತ್ತೆ ಈ ಮಕ್ಕಳ ತಲೆಗೇರಿದ್ದಾವೆ', 'ಈಗೇನ್ಮಾಡೋದು ಸಾರ್', 'ಊರಿನ ಎಲ್ಲರ ತಲೆಗೂ ಹೇನಿನ ಔಷಧಿ ಕೊಡಬೇಕು'. 'ಹಹಹ್ಹಾ'.

ಖಾಸಗಿ ಶಾಲೆಗಳ ಮಕ್ಕಳಿಂದಲೇ ಬಂದಿರಬೇಕೆಂದೇನೂ ಇಲ್ಲ, ಮನೆಯ ಇತರ ಕುಟುಂಬ ಸದಸ್ಯರಿಂದ ಬಂದಿರುವ ಸಾಧ್ಯತೆಯೇ ಹೆಚ್ಚು, ಆದರೂ ನಾವು ಸರ್ಕಾರೀ ಶಾಲೆಗಳ ಮಕ್ಕಳ ಪಕ್ಷಪಾತಿಗಳಾದ್ದರಿಂದ ಈ ರೀತಿ ಆಡಿಕೊಂಡೆವು. ಶಾಲೆ ಸರಿಮಾಡುತ್ತೇನೆಂದು ಹೊರಟವರು, ಇಡೀ ಊರನ್ನೇ ಸರಿ ಮಾಡುತ್ತಾ ಹೋಗುತ್ತಾರೆ. ಮೆಣಸಗೆರೆ ಮಹೇಶ್ ಶಾಲೆಯ ಶಿಕ್ಷಕರೇನೂ ಅಲ್ಲ; ಶಾಲೆಯ ಕೆಲಸಕ್ಕೆ ಅವರಿಗೆ ಯಾರೂ ಸಂಬಳವನ್ನೂ ಕೊಡುವುದಿಲ್ಲ. ಮುಂದಿನ ಸಾರಿ ಸಿಕ್ಕಾಗ ಹೇನುಗಳು ಹೋದವಾ ಇಲ್ಲವಾ ಕೇಳುತ್ತೇನೆ.

## ಖಾಸಗಿ ಶಾಲೆ ಮಾಡಲು ಹೋದವರು ಸರ್ಕಾರೀ ಶಾಲೆ ಉಳಿಸುವ ಆಂದೋಲನ ಸೇರಿಕೊಂಡಿದ್ದು

ಚಿಕ್ಕನಾಯಕನಹಳ್ಳಿ ತಾಲೂಕಿನ ಬೋರನಕಣಿವೆ ಸುತ್ತಲಿನ ಕೆಲವು ಉದ್ಯಮಶೀಲ ಮನೋಭಾವದ ಯುವಕರಿಗೆ ಇದ್ದಕ್ಕಿದ್ದಂತೆ ಒಂದು ಅಸಾಧ್ಯ ಐಡಿಯಾ ಹೊಳೆಯಿತು. ಯುವರಾಜ್, ಮಂಜುನಾಥ್, ಗುರು, ಶಿವಣ್ಣ, ದೇವರಾಜು, ಮಧು ಇತ್ಯಾದಿ ಸ್ನೇಹಿತರಲ್ಲಿ ಕೆಲವರಿಗೆ ಎಲ್ಲರಂತೆ ಮದುವೆಯಾಗಿ ಮಕ್ಕಳಾದವು. ಈ ಮಕ್ಕಳನ್ನು ಶಾಲೆಗಳಿಗೆ ಸೇರಿಸಬೇಕೆಂದು ಹೊರಟರು. ಲೋಕ ತಿರುಗಿ ನೋಡಿದ್ದ ಇವರು ಯಥಾಪ್ರಕಾರ ಖಾಸಗಿ ಶಾಲೆಗಳಿಗೆ



ಸೇರಿಸಬೇಕೆಂದು ವಿಚಾರಿಸಿದರು. ಕಳಪೆ ಖಾಸಗಿ ಶಾಲೆಗಳೇ ಇಷ್ಟೊಂದು ಹಣ ಕೇಳ್ತಾರಲ್ಲಾ, ನಾವೆಲ್ಲರೂ ಅದಕ್ಕಿಂತ ಸ್ವಲ್ಪ ಹೆಚ್ಚು ಹಣವನ್ನು ಹಾಕಿದರೆ, ನಾವೇ ಒಂದು ಖಾಸಗಿ ಶಾಲೆಯನ್ನು ತೆಗೆಯಬಹುದಲ್ಲವೇ ಎಂಬುದೇ ಆ ಐಡಿಯಾ. ಅದೃಷ್ಟವಶಾತ್ ಅವರು ಬಿಇಓ ಕಚೇರಿಗೆ ಹೋಗಲಿಲ್ಲ. ಹೋಗಿದ್ದರೆ, ಇಷ್ಟು ಹೊತ್ತಿಗೆ ಇವರಿಂದ ಪಡೆಯಬೇಕಾದಷ್ಟು ಕಾಣಿಕೆ ಪಡೆದು ಇಷ್ಟು ಹೊತ್ತಿಗೆ ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಇನ್ನೊಂದು ಖಾಸಗಿ ಶಾಲೆ ಆರಂಭವಾಗಿರುತ್ತಿತ್ತು. ಇವರು ಹೈಸ್ಕೂಲಿನಲ್ಲಿ ತಮಗೆ ಅತ್ಯಂತ ಪ್ರಿಯರಾಗಿದ್ದ ಆರ್‌ಕೆ (ರಾಮಕೃಷ್ಣಪ್ಪ) ಸಾರ್ ಅವರನ್ನು ಹೋಗಿ ಭೇಟಿಯಾದರು. ಯಾರಾದರೂ ಕಂಡ ತಕ್ಷಣವೇ ಅವರಿಗೆ ದುರ್ಬೋಧನೆ ಮಾಡಿ, ಅವರು ಓಡಿಹೋಗುವಂತೆ ಮಾಡುವ ಗುಣ ಆರ್‌ಕೆ ಸರ್ ಅವರಲ್ಲಿಲ್ಲ, ಹಾಗಾಗಿ ಅವರು 'ಆಯ್ತಪ್ಪ ಮಾಡಿ. ಅದಕ್ಕೆ ಮುಂಚೆ ಶಾಲೆ ಯಾವ ಥರ ಮಾಡಬಹುದು ಎನ್ನುವುದು ಅರ್ಥಮಾಡಿಕೊಳ್ಳಲಿಕ್ಕೆ ನನ್ನ ಜೊತೆ ಸ್ವಲ್ಪ ಬನ್ನಿ. ನಿಮಗೆ ಒಳ್ಳೇ ಐಡಿಯಾ ಬರುತ್ತೆ' ಅಂದರು. 'ಇದೂ ಒಳ್ಳೆಯದೇ' ಎಂದುಕೊಂಡ ಶಿಷ್ಯರು 'ಸ್ವಲ್ಪ' ಅವರ ಜೊತೆ ತಿರುಗಿದರು. ಸಮಾನ ಶಿಕ್ಷಣಕ್ಕಾಗಿ ಜನಾಂದೋಲನದ ಕಾಯಿಲೆಯನ್ನು ಸ್ವಯಂಪ್ರೇರಿತವಾಗಿ ಅಂಟಿಸಿಕೊಂಡಿದ್ದ ಆರ್‌ಕೆ ಅವರಿಂದ ಸೋಂಕು ಅವರ ಶಿಷ್ಯರಿಗೂ ತಗುಲಿತು. ಇದೀಗ ಬೋರನಕಣಿವೆಯ ಪ್ರದೇಶದ ಹೊಯ್ಸಳಕಟ್ಟೆ, ದಸೂಡಿ, ದಬ್ಬಗುಂಟೆ ಮೂರು ಕ್ಲಸ್ಟರ್‌ಗಳ 33 ಶಾಲೆಗಳಿಗೂ ಸೋಂಕು ತಗುಲಿದೆ. ಈಗಾಗಲೇ ಆ ಭಾಗದ ಶಿಕ್ಷಕರ ಮತ್ತು ಹಿರಿಯ ವಿದ್ಯಾರ್ಥಿಗಳ ಸಮಾವೇಶ ಆಗಿದೆ. ಚಿಕ್ಕನಾಯಕನಹಳ್ಳಿ ತಾಲೂಕಿನ ಇತರೆಡೆಗಳಿಗೂ ಇದನ್ನು ಹಬ್ಬಿಸುವ ಕೆಲಸವನ್ನು ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರೂ, ಕಸಾಪ ತಾಲ್ಲೂಕು ಅಧ್ಯಕ್ಷರೂ ಆದ ಎನ್‌ಐ (ಎನ್.ಇಂದಿರಮ್ಮ) ಮೇಡಂ ಮಾಡುತ್ತಿದ್ದಾರೆ. ಆರ್‌ಕೆ ಸರ್ ಪಕ್ಕದ ಜಿಲ್ಲೆಗಳಿಗೆ ಸೋಂಕು ಹಬ್ಬಿಸುತ್ತಿದ್ದಾರೆ.

## ಮಕ್ಕಳಿಗಾಗಿ ರಿಸ್ಕು ತೆಗೆದುಕೊಂಡ ಮೇಡಂಗಳು ಮತ್ತು ಎಸ್‌ಡಿಎಂಸಿ

ಒಮ್ಮೆ ನಾನು ಮತ್ತು ಸಮಾನ ಶಿಕ್ಷಣಕ್ಕಾಗಿ ಜನಾಂದೋಲನದ ರಾಜ್ಯ ಸಮಿತಿಯ ಮಲ್ಲಿಗೆ ಮೈಸೂರು ಬೆಂಗಳೂರು ರೈಲಿಗೆ ಮಂಡ್ಯದಲ್ಲಿ ಹತ್ತಿದೆವು. ರೈಲು ಸಾಕಷ್ಟು ಖಾಲಿಯಿದ್ದರೂ ಗದ್ದಲವೋ ಗದ್ದಲ. ಏನೆಂದರೆ, ಸುಮಾರು 50ರ ಸಂಖ್ಯೆಯಲ್ಲಿದ್ದ ಶಾಲಾಮಕ್ಕಳು ಬಹಳ ಜೋರಾಗಿ ಹಾಡು ಹೇಳುವುದು, ಮಾತಾಡುವುದು ಇತ್ಯಾದಿ ಮಾಡುತ್ತಿದ್ದರು. ಒಬ್ಬ ಮಧ್ಯ ವಯಸ್ಕ ಪ್ರಯಾಣಿಕನಿಗೆ ಸಿಕ್ಕಾಪಟ್ಟೆ ಸಿಟ್ಟು ಬಂದಿತು. ಆತ ಮಕ್ಕಳಿಗೆ ಗದರಿದ. ಎಷ್ಟು ಜೋರಾಗಿ ಗದರಿದನೆಂದರೆ, ಆ ಮಕ್ಕಳ 10 ಪಟ್ಟು ಜೋರಾಗಿ. ಮಕ್ಕಳು ನಿಜಕ್ಕೂ ಹೆದರಿಬಿಟ್ಟರು. ಕೆಲವರಂತೂ ಅಳಲು ಶುರು ಮಾಡಿದರು. ನಮಗೂ ಸಿಟ್ಟು ಬಂದು ಆತನಿಗೆ ಜಾಡಿಸಬೇಕೆಂದುಕೊಳ್ಳುವಷ್ಟರಲ್ಲಿ ಆ ಮಕ್ಕಳ ತಂದೆ ಮತ್ತು ತಾಯಿಯೆಂದು ನಾವು ಭಾವಿಸಿದ ಇಬ್ಬರು ಬಂದು, ಜಗಳಕ್ಕೆ ನಿಂತರು. ಆ ಮಕ್ಕಳು ನಿನಗೇನು ತೊಂದರೆ ಕೊಟ್ಟಿದ್ದವು, ಈ ರೀತಿ ಗದರಲು ನಿನಗೇನು ಹಕ್ಕಿದೆ ಎಂದು ಸರಿಯಾಗಿ ದಬಾಯಿಸಿದರು. ನಾವೂ ಅವರಿಗೆ ಸಾಥ್ ಕೊಟ್ಟೆವು. ಅವರಿಗೆ ತಮ್ಮ ಮಕ್ಕಳ ಹಕ್ಕಿನ ಬಗ್ಗೆ ಸ್ಪಷ್ಟವಾದ ಅರಿವು ಮತ್ತು ದೃಷ್ಟಿಕೋನವಿತ್ತು. ಆಗ ಸಮಯ ರಾತ್ರಿ 8.30. ಇನ್ನು ಸ್ವಲ್ಪ ಹೊತ್ತಿನಲ್ಲಿ ಅವರಿಗೆಲ್ಲ ಊಟ ಕೊಟ್ಟು ಮಲಗಿಸುತ್ತೇವೆ; ಈಗ ಅವರು ಮಾಡುತ್ತಿದ್ದುದು ಮಕ್ಕಳು ಸಹಜವಾಗಿ ನಡೆದುಕೊಳ್ಳುವ ರೀತಿ ಎಂಬುದು ಅವರ ಭಾವನೆಯಾಗಿತ್ತು.

ನಂತರ ನಮಗೆ ಗೊತ್ತಾಗಿದ್ದೇನೆಂದರೆ, ಅವರು ಅಪ್ಪನೂ ಆಗಿರಲಿಲ್ಲ; ಆಕೆ ಅಮ್ಮನೂ ಆಗಿರಲಿಲ್ಲ. ಆಕೆ ಶಿಕ್ಷಕಿ ಮತ್ತು ಆತ ಎಸ್‌ಡಿಎಂಸಿ ಸದಸ್ಯರಾಗಿದ್ದರು. ಅವರು ತಮ್ಮ ಶಾಲೆಯ ಮಕ್ಕಳಿಗೆ ಮೈಸೂರು ತೋರಿಸಲು ಕರೆದುಕೊಂಡು ಬಂದಿದ್ದರು. ಶಾಲೆಯ ಬಗ್ಗೆ ವಿಚಾರಿಸಿದೆವು. ಅದು ಖಚಿತವಾಗಿ ನಾವು ಯಾವ ರೀತಿಯಲ್ಲಿ ಸರ್ಕಾರೀ ಶಾಲೆ ಇರಬೇಕೆಂದುಕೊಂಡು ಹೋರಾಟ ಮಾಡುತ್ತಿದ್ದೆವೋ, ಅದೇರೀತಿಯ ಶಾಲೆಯಾಗಿತ್ತು. ಅವರು ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನವರು. ಅಂದು ನಾವು ಬರೆದುಕೊಂಡ ಅವರ ಹೆಸರು ಮತ್ತು ಫೋನ್ ನಂಬರ್‌ಗಳು ಕಳೆದುಹೋಗಿವೆ. ಅವರು ಸರ್ಕಾರೀ ಶಾಲೆ ಉಳಿಸಿ ಆಂದೋಲನದ ಸಂಘಟನೆಯಲ್ಲಿಲ್ಲ, ಆದರೆ ಈ ಚಳವಳಿಯಲ್ಲಿ ಇದ್ದೇ ಇದ್ದಾರೆ. ಆ ದಿನ ಆ ರೈಲಿನಲ್ಲಿ ಅವರು ಮಕ್ಕಳಿಗೆ ತೋರುತ್ತಿದ್ದ ಕಾಳಜಿ ತೆಗೆದುಕೊಳ್ಳಲೇಬೇಕಾದ ಒತ್ತಡವನ್ನು ಯಾವ ಸರ್ಕಾರೀ ನಿಯಮವೂ ಅವರ ಮೇಲೆ ಹೇರಿರುವುದಿಲ್ಲ. 'ನಮಗ್ಯಾಕೆ ಈ ರಿಸ್ಕು' ಎಂಬ ಭಾವನೆ ಅವರಲ್ಲಿ ಎಳ್ಳಷ್ಟೂ ಇರಲಿಲ್ಲ.

## ಕೆ.ಆರ್.ಪೇಟೆಯ ಪ್ರಯೋಗ ಅಷ್ಟೊಂದು ಯಶಸ್ವಿಯಾದದ್ದು ಹೇಗೆ?

ಹೋರಾಟಗಾರರು 'ಪುರಾಣ ಹೇಳುವುದಕ್ಕೆ, ಬದನೆಕಾಯಿ ತಿನ್ನುವುದಕ್ಕೆ' ಎಂದು ಭಾವಿಸಿದರೆ, ಅದು ಇಂದಲ್ಲ ನಾಳೆ ನೆಲ ಕಚ್ಚುತ್ತದೆ. ಸಮಾನ ಶಿಕ್ಷಣದ ಹೋರಾಟದಲ್ಲಿ ಆರಂಭದಿಂದಲೂ ತೊಡಗಿಕೊಂಡಿದ್ದ ಕೆ.ಆರ್.ಪೇಟೆಯ ಕೆ.ಎಂ.ವಾಸು ಮತ್ತು ನನ್ನ ತಮ್ಮ ಮಗನನ್ನು ಒಂದು ಸರ್ಕಾರೀ ಶಾಲೆಗೆ ಸೇರಿಸಿದ್ದಲ್ಲದೇ, ಶಾಲೆಯನ್ನು ಸೊಗಸು ಮಾಡಲು ಟೊಂಕಕಟ್ಟಿ ನಿಂತರು. ಈ ಬಗ್ಗೆ ಹಿಂದೆಯೇ ಇದೇ ಅಂಕಣದಲ್ಲಿ ಬರೆದಿರುವುದರಿಂದ ವಿಸ್ತರಿಸುವುದಿಲ್ಲ. ಆದರೆ, ಆ ನಂತರ ಸಾಕಷ್ಟು ಬದಲಾವಣೆಯಾಗಿದೆ.

ಇದರ ಮೂಲ ಪ್ರೇರಕಶಕ್ತಿ ಇವರಾದರೂ, ಇಂದು ಅದು ಶತಮಾನದ ಮಾದರಿ ಶಾಲೆಯಾಗಲು ಹತ್ತು ಹಲವು ಕಾರಣಗಳಿವೆ. ನಾಗೇಶ್, ಪದ್ಮೇಶ್ ಎಂಬ ಶಿಕ್ಷಕರ, ನೌಕರರ ಸಂಘಟನೆಯಲ್ಲಿ ಸಕ್ರಿಯರೂ, ಪ್ರಭಾವಿಗಳೂ ಆದ ಸರ್ಕಾರೀ ನೌಕರರೂ ಸೇರಿದಂತೆ ಇನ್ನೂ ಹಲವರು ತಮ್ಮ ಮಕ್ಕಳನ್ನು ಅದೇ ಶಾಲೆಗೆ ಸೇರಿಸಿದರು. ಇವರಿಗೆ ಬೆನ್ನೆಲುಬಾಗಿ ಅಸಿಸ್ಟೆಂಟ್ ಕಮೀಷನರ್ ಎಚ್.ಎಲ್.ನಾಗರಾಜು ಈ ಸರ್ಕಾರೀ ಅಧಿಕಾರಿಯದ್ದೇ ಒಂದು ವರಸೆ. ... ಕೆಲಸ ಮಾಡಬೇಕೆನ್ನುವ ಇಚ್ಛೆಯೊಂದಿದ್ದರೆ, ... ಮತ್ತು ಅಧಿಕಾರವನ್ನು ಹೇಗೆ ಅದಕ್ಕೆ ... ಬಗ್ಗಿಸಬಹುದೆನ್ನುವುದಕ್ಕೆ ಇವರಲ್ಲಿ ಸಾವಿರ ಉಪಾ... ಅಂತಹ ಎಲ್ಲಾ ಉಪಾಯಗಳ ಜೊತೆಗೆ ... ಶತಮಾನದ ಶಾಲೆಯ ಉನ್ನತೀಕರಣ ಸಮಿತಿಯ ... ಕೆಲಸ ಮಾಡಿದ್ದಾರೆ. ಸುಮಾರು 130 ಮ... ಸರ್ಕಾರೀ ಶಾಲೆಯಲ್ಲಿ ಈಗ 600ಕ್ಕೂ ಹೆಚ್ಚು ಮ... ರಾಜ್ಯದ ಉದ್ದಗಲಕ್ಕೂ ನಾವೂ ಹೇಳಿಕೊಂಡು ... ಇದೊಂದು ಉದಾಹರಣೆಯೂ ಆಗಿದೆ.

## ಎಲ್ಲರಿಗೂ ಬೇಕಾಗಿರುವ ಮೇ... ಯಾರಿಗೂ ಬೇಡವಾದ ಸಹೋದ...

ಇನ್ನೊಬ್ಬರು ಮೇಷ್ಟರಿದ್ದಾರೆ. ಇವರದ್ದು ಹಾ... ಕೆಲಸ ಮಾಡುತ್ತಿರುವುದು ಕನ್ನಡದ ಗಂಧವೇ... ಆಂಧ್ರದ ಗಡಿಭಾಗದಲ್ಲಿರುವ ಗೌರಿಬಿದನೂರು ... ಮೂಲೆಯ ಹಳ್ಳಿ. ಆ ಶಾಲೆಯಲ್ಲಿ ಕಂ... ಪ್ರೊಜೆಕ್ಟರ್, ಯುಪಿಎಸ್ ಇನ್ನೂ ಏನೇನು... ಎಲ್ಲವೂ ಇದೆ. ಎಲ್ಲಕ್ಕಿಂತ ಮುಖ್ಯವಾಗಿ ಇ... ಬಳಸಿ, ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳಲು ... ಶಿಕ್ಷಕರಿದ್ದಾರೆ. ಅವರ ಹೆಸರು ನಾಗೇಶ್. ... ನಾಗೇಶ್ ತಮ್ಮೂರಿನ ಶಾಲೆಗೆ ಬಂದರೆ ಚೆನ್ನಾ... ಎಂದು ಸುತ್ತಲಿನ ಹಲವು ಹಳ್ಳಿಯ ಜನರು ... ಜನಪ್ರತಿನಿಧಿಗಳು ಬಯಸುತ್ತಿದ್ದಾರೆ. ಆದರೆ ... ತಾಲೂಕು ಕೇಂದ್ರಕ್ಕೆ ಬಂದು ವಾಸಿಸಬೇಕು, ದೊ... ದೊಡ್ಡ ಶಾಲೆಗೆ ಹೋಗಬೇಕು ಎಂಬ ... ಇರಾದೆಯೂ ನಾಗೇಶ್‌ಗಿಲ್ಲ. ವಿಶ್ವ ... ಮಾದರಿಯಾಗಿರುವುದು ಅವರಿಗೆ ತೊಡಕಾ... ಸ್ಥಳೀಯ ಶಿಕ್ಷಕರ ಸಂಘಕ್ಕೆ ಇವರ ಮೇಲೆ ... ಬಂದಂತಿದೆ. ಯಾಕೆಂದು ನೀವು ಅವರನ್ನೇ ಕೇ...

## ಸುಧಾರಣಾ ಕಾರ್ಯಕ್ರಮವು ಹೋ... ಬಿರುಸು ಪಡೆದುಕೊಂಡಿದ್ದು

ಸರ್ಕಾರೀ ಶಾಲೆಯನ್ನು ಸ್ಥಳೀಯ ಸಮುದಾ... ಸೇರಿ 'ಉದ್ಧಾರ' ಮಾಡುವ ಕಾರ್ಯಕ್ರಮಕ್ಕೆ ... ಕ್ರಾಂತಿಕಾರಿಗಳಿಂದ ತೀವ್ರ ವಿರೋಧ ಬಂತು ... 500 ಶಾಲೆಗಳನ್ನು 'ದಾನಿಗಳ ಔದಾರ್ಯದ ... ಕಟ್ಟಲು ಹೊರಟಿದ್ದೀರಿ. ಕರ್ನಾಟಕದಲ್ಲಿ ... ಶಾಲೆಗಳಿವೆ. ಅದಕ್ಕೆ ಬೇಕಾದ ಸರ್ಕಾರದ ... ಬದಲಾವಣೆಗೆ ನಮ್ಮ ಹೋರಾಟ ಮಾಡಬೇಕು ... ಅವರ ಅನಿಸಿಕೆಯಾಗಿತ್ತು, ಅವರ ನಿಲುವು ಸರಿಯಿ... ಅದರಲ್ಲಿ ನಮಗೂ ತಕರಾರು ಇರಲಿಲ್ಲ, ಆದರೆ, ... ನೀತಿಯ ದಿಕ್ಕು ಬದಲಾವಣೆ ಮಾಡುವ ಹ... ಶುರುವಾಗುವಷ್ಟರಲ್ಲೇ ಶಾಲೆಗಳ ಸಂಖ್ಯೆ 42,00... ಇನ್ನು ಸ್ವಲ್ಪ ಕಾಲದಲ್ಲಿ ಉಳಿಸುವ ಹೋರಾಟ ... ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ... ಶಾಲೆಗಳನ್ನು 'ಸಮುದಾಯದ ಸಹಭಾಗಿತ್ವದ ... ನೆಲೆ'ಯಲ್ಲಿ ಉಳಿಸಿಕೊಳ್ಳುವ ಪ್ರಯತ್ನ ಮಾಡೋ... ಅದೇ ಒಂದು ಹೋರಾಟವಾಗಿ ಪರಿವರ್ತನೆಯ... ಎಂದು ನಾವು ಹೇಳಿದೆವು. ಅವರಿಗೆ ಮನವರಿಕೆ ... ಸಾಧ್ಯತೆ ಇರಲಿಲ್ಲ, ಮನವರಿಕೆ ಮಾಡಿಕೊಡಲೇ ... ತುರ್ತು ನಮಗೂ ಇರಲಿಲ್ಲ.

ಮೇಲೆ ಕಾಣಿಸಿರುವ ಬೋರನಕಣಿವೆ ಸುತ್ತಲಿನ ... ಶಿಕ್ಷಣ ಕಾರ್ಯಕರ್ತರಿಗೆ ಅಂತಹದೊಂದು ... ಎದುರಾಯಿತು. ಅವರು ಯಾವ ಶಾಲೆ... ಉಳಿಸಿಕೊಳ್ಳಲಿಕ್ಕೋಸ್ಕರ ಹೆಚ್ಚಿನ ಶಿಕ್ಷಕರ ನಿಯೋ... ಪ್ರಯತ್ನ ಪಡುತ್ತಿದ್ದರೋ, ಅವೇ ಶಾಲೆಗಳಿಂದ '... ಹೆಸರಿನಲ್ಲಿ ಶಿಕ್ಷಕರನ್ನು ಕಿತ್ತು ಹಾಕುವ ಕೆಲಸಕ್ಕೆ ... ಮುಂದಾಯಿತು. ಇವರು ಹೋಗಿ ಅಧಿಕಾರಿಗಳ... ನೋಡಿದರು. ಕೆಲಸ ಆಗಲಿಲ್ಲ, ಮೂವತ್ತ... ಶಾಲೆಗಳಿಗೆ ಬೀಗ ಹಾಕಿ ಧರಣಿ ಕೂತರು. ... ಜನಪ್ರತಿನಿಧಿಗಳೂ ಒಳಗೊಂಡಂತೆ, ಸಂಘ... ಪ್ರತಿನಿಧಿಗಳ ನೇತೃತ್ವದಲ್ಲಿ ಪೋಷಕರು ಧರಣಿಯ... ಹಗಲು ಮತ್ತು ರಾತ್ರಿ 5 ದಿನಗಳ ಕಾಲ ಈ ... ನಡೆಯಿತು. ಅಧಿಕಾರಿಗಳು ಮಣಿದರು.

## ಇದೇ ನಿಜವಾದ ಭಾರತ ಎಂದ ಪ್ರಶಸ್ತಿ ಪುರಸ್ಕೃತ ಮೇಷ್ಟ್ರು

ರಾಜೇಂದ್ರ ಬುರಡೀಕಟ್ಟಿ ಎಂಬ ಶಿಕ್ಷಕ...

# ಜಿಗ್ನೇಶ್ ಮೇವಾನಿಯೊಂದಿಗೆ ಕಳೆದ ಸಮಯ



ಕಂಡಹಾಗೆ

• ಗೌರಿ ಲಂಕೇಶ್


editorlankesh@gmail.com

'ಚಲೋ ಉಡುಪಿ' ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ದಲಿತ, ದಮನಿತ, ಅಲ್ಪಸಂಖ್ಯಾತ, ಪ್ರಗತಿಪರ, ಎಡಪಂಥೀಯ, ಜಾತ್ಯತೀತ ಸಂಘಟನೆಗಳು ಮತ್ತು ಜನರು ಒಗ್ಗೂಡಿ ಆಯೋಜಿಸಿದ್ದ ಈ ಕಾರ್ಯಕ್ರಮ ಕರ್ನಾಟಕದ ಮಟ್ಟಿಗೆ ಒಂದು ಐತಿಹಾಸಿಕ ಕಾರ್ಯಕ್ರಮವಾಗಿತ್ತು ಎಂಬುದರ ಬಗ್ಗೆ ಯಾವ ಸಂಶಯವೂ ಈಗ ಉಳಿದಿಲ್ಲ.

ಹೊಸ ತಲೆಮಾರಿನ ಹೋರಾಟಗಾರರಾದ ಭಾಸ್ಕರ್ ಪ್ರಸಾದ್, ಹುಲಿಕುಂಟೆ ಮೂರ್ತಿ, ವಿಕಾಸ್ ಆರ್ ಮೌರ್ಯ, ಗೌರಿ, ಹರ್ಷಕುಮಾರ್ ಕುಗ್ವೆ, ನಂದಕುಮಾರ್, ಅಖಿಲಾ, ಅನಂತ ನಾಯ್ಕ್, ರಾಜಶೇಖರ ಮೂರ್ತಿ ತರಹದವರು ರೂಪಿಸಿ, ನಡೆಸಿದ ಒಂದು ವಾರದ ಜಾಥಾ ಮತ್ತು ಸಮಾವೇಶ ಎಲ್ಲರಲ್ಲೂ ಭವಿಷ್ಯದ ಬಗ್ಗೆ ಹುಮ್ಮಸ್ಸನ್ನು ಮೂಡಿಸಿದೆ. ಉಡುಪಿಯಲ್ಲಿ ಜರುಗಿದ ಸಮಾವೇಶದ ಹೈಲೈಟ್ ಜಿಗ್ನೇಶ್ ಮೇವಾನಿ ಎಂಬ ದಲಿತ ಯುವಕನ ಭಾಷಣ. ಅದರ ಪೂರ್ಣಪಾಠವನ್ನು ಈ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ.

35ರ ಹರೆಯದ ಜಿಗ್ನೇಶ್ ಮೊದಲು ಬಯಸಿದ್ದು ಪತ್ರಿಕಾವೃತ್ತಿಯನ್ನು. ಕೆಲಕಾಲ ಪತ್ರಕರ್ತನಾಗಿ ದುಡಿದ ಜಿಗ್ನೇಶ್‌ಗೆ ಈ ವೃತ್ತಿಯಿಂದ ಸಮಾಜದಲ್ಲಿ ಬದಲಾವಣೆ ಶೀಘ್ರದಲ್ಲಿ ಸಾಧ್ಯವಿಲ್ಲ ಎನಿಸಿತು. ಆಗ ಆತ ಆಯ್ಕೆ ಮಾಡಿಕೊಂಡಿದ್ದು ವಕೀಲ ವೃತ್ತಿಯನ್ನು. ಆದರೆ ಕಳೆದ ಎಂಟು ವರ್ಷಗಳಿಂದ ಆತ ಭಾಗಿಯಾಗಿರುವುದು ದಲಿತರ ಪರ ಹೋರಾಟಗಳಲ್ಲಿ.

ಸಣಕಲು ದೇಹದ ಜಿಗ್ನೇಶ್ ಅದ್ಭುತ ವಾಗ್ಮಿ. ಕನ್ಹಯ್ಯ ಕುಮಾರನಂತೆ ಜನರಿಗೆ ಸುಲಭವಾಗಿ



ಅರ್ಥವಾಗುವಂತೆ ಮಾತನಾಡಬಲ್ಲ ಚಾತುರ್ಯ ಜಿಗ್ನೇಶನಲ್ಲೂ ಇದೆ. ಅದಕ್ಕೆ ಬೇಕಾದ ಓದು ಮತ್ತು ಚಿಂತನೆಯ ಆಳವೂ ಇದೆ. ಹೇಳಬೇಕಿದ್ದನ್ನು ಅಗತ್ಯಬಿದ್ದಾಗ ಗಟ್ಟಿಯಾಗಿಯೂ, ಅವಶ್ಯಕತೆ ಇದ್ದಾಗ ಸೂಕ್ಷ್ಮವಾಗಿಯೂ ಹೇಳುವ ಕಲೆ ಆತನಿಗೆ ಕರಗತವಾಗಿದೆ. ಜೊತೆಗೆ ಸೈದ್ಧಾಂತಿಕ ಸ್ಪಷ್ಟತೆಯೂ ಆತನಲ್ಲಿದೆ. ಇಷ್ಟೆಲ್ಲ ಇರುವ ಜಿಗ್ನೇಶ್ ಸದಾ ಭಾರಿ ಸೀರಿಯಸ್ ಆಗಿರುವ ವ್ಯಕ್ತಿಯಲ್ಲ, ತುಂಟತನ, ತಮಾಷೆ ಕೂಡ ಅವನಲ್ಲುಂಟು!

ಜಿಗ್ನೇಶ್ ಹುಟ್ಟಿದ್ದು ಚಮ್ಮಾರ ಸಮುದಾಯದಲ್ಲಿ. ಮೀಸಲಾತಿಯಿಂದಾಗಿ ಆತನ ತಂದೆಗೆ ಸರ್ಕಾರಿ ಕಚೇರಿಯಲ್ಲಿ ಒಂದು ಸಣ್ಣ ಕೆಲಸ ಸಿಕ್ಕಿತು. ಆತನ ತಂದೆ ಮತ್ತು ತಾಯಿ ಜಿಗ್ನೇಶ್ ಮತ್ತು ಆತನ ಸಹೋದರನಿಗೆ ಸರಿಯಾದ ವಿದ್ಯೆ ಮತ್ತು ಸಿದ್ಧಾಂತವನ್ನು ಹೇಳಿಕೊಟ್ಟಿದ್ದರಿಂದ ಇವತ್ತು ಆತ ಭಾರತದ ಎಲ್ಲಾ ದಲಿತ ಮತ್ತು ದಮನಿತ ವರ್ಗಗಳ ಪಾಲಿಗೆ ಆಶಾಕಿರಣವಾಗಿ ಹೊಮ್ಮಿದ್ದಾನೆ, ಅವರೆಲ್ಲರ ಪರ ಹೋರಾಡುವ ನಾಯಕನಾಗಿ ರೂಪುಗೊಂಡಿದ್ದಾನೆ.


ಉಡುಪಿ ಸಮಾವೇಶ ನಡೆದ ಮಾರನೆ ದಿನ ಬೆಂಗಳೂರಿನಲ್ಲಿ ಜಿಗ್ನೇಶನ ಜೊತೆ ಒಂದು ಸಂವಾದ ಕಾರ್ಯಕ್ರಮವನ್ನೂ ಯುವ ಹೋರಾಟಗಾರರು ಹಮ್ಮಿಕೊಂಡಿದ್ದರು. ಕಳೆದ ಐದು ತಿಂಗಳುಗಳಿಂದ ಸತತವಾಗಿ ಗುಜರಾತ್ ಹೋರಾಟದಲ್ಲಿ ಸಕ್ರಿಯವಾಗಿರುವ ಮತ್ತು ಅಹಮದಾಬಾದಿನಿಂದ ಬೆಂಗಳೂರಿಗೆ ಬಂದು, ಇಲ್ಲಿಂದ ಉಡುಪಿಗೆ ಹೋಗಿ, ಮತ್ತೆ ರಾತ್ರಿ ಪ್ರಯಾಣಿಸಿ ಬೆಂಗಳೂರಿಗೆ ವಾಪಸ್ಸಾಗಿದ್ದರಿಂದ ಆತನಿಗೆ ಸಹಜವಾಗಿಯೇ ಸುಸ್ತಾಗಿತ್ತು. ಸಂವಾದ ಕಾರ್ಯಕ್ರಮವನ್ನು ನಡೆಸಿಕೊಡುವ ಜವಾಬ್ದಾರಿಯನ್ನು ನನಗೆ ವಹಿಸಲಾಗಿತ್ತಾದ್ದರಿಂದ "ಸಾಧ್ಯವಾದಷ್ಟೂ ಚುಟುಕಾಗಿ ಇದನ್ನು ನಡೆಸಿಕೊಡಿ. ನನ್ನ ಬೆನ್ನು ತುಂಬಾ ನೋಯುತ್ತಿದೆ" ಎಂದು ಜಿಗ್ನೇಶ್ ವಿನಂತಿಸಿಕೊಂಡ.

ಸಂವಾದ' ಶುರುವಾಗುವ ಮುನ್ನ ಜಿಗ್ನೇಶ್ ತಾನು ಹೇಗೆ ಮತ್ತು ಯಾಕೆ ದಲಿತ ಪರ ಹೋರಾಟದಲ್ಲಿ ಭಾಗಿಯಾದೆ, ಯಾವ ಕಾರಣಕ್ಕೆ ಉನಾ ಪ್ರಕರಣ ನಡೆದ ನಂತರ 'ದನದ ಬಾಲ ನೀವೇ ಇಟ್ಟುಕೊಳ್ಳಿ, ನಮ್ಮ ಭೂಮಿ ನಮಗೆ ಕೊಡಿ' ಎಂಬ ಹಕ್ಕೊತ್ತಾಯವನ್ನು ಮಂಡಿಸಿದೆ, 'ಚಲೋ ಉನಾ'ಕ್ಕೆ ಸಿಕ್ಕ ಪ್ರತಿಕ್ರಿಯೆಗಳನ್ನು ವಿವರಿಸಿದ.

ಇವತ್ತು ನಮ್ಮ ದೇಶದ ಮಾಧ್ಯಮಗಳು ಕಾರ್ಪೊರೇಟ್ ಕಂಪನಿಗಳ ಸ್ವತ್ತಾಗಿರುವುದರಿಂದ ಮತ್ತು ಅವು ಬಂಡವಾಳಶಾಹಿ ಮತ್ತು ಕೋಮುವಾದಿಗಳ ಮುಖವಾಣಿಗಳಾಗಿರುವುದರಿಂದ ದಲಿತ ಮತ್ತು ದಮನಿತರ ಸ್ಥಿತಿಗತಿ, ಆಶಯ, ಹೋರಾಟ ಇತ್ಯಾದಿಗಳನ್ನು ಬಿಂಬಿಸುವ ಮಾಧ್ಯಮವನ್ನು ಯಾಕೆ ಸ್ಥಾಪಿಸಬಾರದು ಎಂಬ ಪ್ರಶ್ನೆ ಬಂತು.

ಆ ಪ್ರಶ್ನೆಗೆ ಜಿಗ್ನೇಶ್ ಉತ್ತರಿಸುತ್ತಾ "ಹೌದು, ಇವತ್ತು ಅಂಬಾನಿಯದ್ದೇ ಹಲವಾರು ಮಾಧ್ಯಮಗಳಿವೆ. ನಾವು ಪರ್ಯಾಯ ಮಾಧ್ಯಮ ಶುರು ಮಾಡಬೇಕಿದೆ. ಅದು ತುಂಬಾ ಮುಖ್ಯವೂ ಆಗಿದೆ. ಆದರೆ ಅದಕ್ಕೆ ನಾವು ಅಂಬಾನಿ ಅಂತಹವರ ಬಳಿ ಹಣ ಪಡೆದು ಶುರು ಮಾಡಲು ಸಾಧ್ಯವಿಲ್ಲ. ಸದ್ಯಕ್ಕೆ ನಮ್ಮ ವಿಷಯಗಳು ಮಾಧ್ಯಮದಲ್ಲಿ ಪ್ರಚಾರ ಪಡೆಯುತ್ತಿಲ್ಲ ಎಂಬುದೂ ಸರಿಯೇ. ಅದಕ್ಕಾಗಿಯೇ ನಾವು 'ಚಲೋ ಉನಾ' ತರಹದ ಚಳವಳಿ ಹುಟ್ಟಲು ಕಾರಣವಾದ ಸಾಮಾಜಿಕ ಜಾಲತಾಣಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಬೇಕು. 'ದಲಿತ ಕ್ಯಾಮೆರಾ' ತರಹದ ಪರ್ಯಾಯ ಮಾಧ್ಯಮವನ್ನು ಬಳಸಿಕೊಳ್ಳಬೇಕು, ಬೆಂಬಲಿಸಬೇಕು" ಎಂದ.

ಇನ್ನೊಂದು ಪ್ರಶ್ನೆ ಹೀಗಿತ್ತು: "ನೀವು 'ದನದ ಬಾಲ ನೀವೇ ಇಟ್ಟುಕೊಳ್ಳಿ, ನಮ್ಮ ಭೂಮಿ ನಮಗೆ ಕೊಡಿ' ಎಂದು ಹೇಳಿದ್ದೀರಿ. ಆದರೀಗ ಕೃಷಿಯೇ ಕಷ್ಟದಲ್ಲಿದೆ. ಇಂತಹ ಪರಿಸ್ಥಿತಿಯಲ್ಲಿ ಭೂರಹಿತ ದಲಿತರಿಗೆ ಭೂಮಿ ಕೊಟ್ಟರೆ ಅವರು ಹೇಗೆ ಉದ್ಧಾರವಾಗುತ್ತಾರೆ? ಜೊತೆಗೆ ದನದ ಚರ್ಮ ಸುಲಿಯುವುದಿಲ್ಲ ಎಂದರೆ ದಲಿತರಿಗೇ ಆದಾಯ ಕೊರತೆ ಆಗುವುದಿಲ್ಲವೇ?"



ಅದಕ್ಕೆ ಜಿಗ್ನೇಶ್ ಕೊಟ್ಟ ಉತ್ತರ ಹೀಗಿತ್ತು: "ನಾನು ದಲಿತರ ಪರವಾಗಿ ಹೋರಾಟ ಮಾಡುವ ಮುನ್ನ ವಕೀಲನಾಗಿ ಕೈಗೆತ್ತಿಕೊಂಡಿದ್ದೇ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದ ರೈತರ ಸಂಕಷ್ಟಗಳನ್ನು. ರೈತರ ಸ್ಥಿತಿ ಇವತ್ತು ಕೆಟ್ಟದಾಗಿ ಇರುವುದೇನೋ ನಿಜ. ಆದರೆ ಏನೂ ಇಲ್ಲದ ಜನರು ಇಂದು ಅದಕ್ಕಿಂತ ಹೀನಾಯ ಸ್ಥಿತಿಯಲ್ಲಿದ್ದಾರೆ. ಭೂಮಿ ಅನ್ನುವುದು ಒಂದು ಸ್ವಾಭಿಮಾನದ ಪ್ರಶ್ನೆ. ಭೂಮಿ ಇದ್ದವರ ಮೇಲೆ ಹಲ್ಲೆಗಳು ಆಗುವುದು ಕಡಿಮೆ. ಭೂಮಿ ಹೊಂದಿರುವ ದಲಿತರ ಮಕ್ಕಳು ಭೂಮಾಲಿಕರ ಹೊಲಗಳಲ್ಲಿ ಕೂಲಿ ಮಾಡುವುದರಿಂದ ತಪ್ಪಿಸಿಕೊಂಡು ವಿದ್ಯೆ ಪಡೆಯಲು ಸಾಧ್ಯವಾಗುತ್ತದೆ. ಭೂಮಿ ಕೇವಲ ಮಣ್ಣಿನ ಪ್ರಶ್ನೆ ಅಲ್ಲ, ಭೂಮಿ ಒಂದು ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನದ ಪ್ರಶ್ನೆ. ಈ ಕಾರಣಕ್ಕೇ ಇಂದು ಭೂಮಿ ದಲಿತರಿಗೆ ತುರ್ತಾಗಿ ಬೇಕಾಗಿದೆ ಮತ್ತು ಭೂಮಿಯನ್ನು ದಲಿತರು ಪಡೆದನಂತರ ಅದನ್ನು ಹೇಗೆ ಲಾಭದಾಯಕವಾಗಿ ಮಾಡಬಹುದು ಎಂದು ಚಿಂತಿಸಬೇಕು. ಪರ್ಯಾಯದ ಕೃಷಿ ರೀತಿಯನ್ನು ಅವಲಂಬಿಸಬೇಕು. ಇನ್ನು ದನದ ಚರ್ಮ ಸುಲಿಯದಿದ್ದರೆ ಅದರಿಂದ ದಲಿತರಿಗೆ ದೊಡ್ಡ ಪೆಟ್ಟಿಲ್ಲ, ಯಾಕೆಂದರೆ ಅದೇ ಅವರಿಗೆ ಪ್ರಮುಖವಾದ ಆದಾಯದ ಮೂಲವಲ್ಲ, ಅದು ಹೆಚ್ಚೆಂದರೆ ಒಂದು ಉಪಕಸುಬು."

ಇನ್ನೊಂದು ಪ್ರಶ್ನೆ: "ಸಮತಾವಾದ ಸಾಧಿಸಲು ಒಂದು ವಾದದಿಂದ ಸಾಧ್ಯವೇ? ಇಲ್ಲವಾದರೆ ಸಮಾನತೆ ಸಾಧಿಸಲು ಯಾವ ಯಾವ ವಾದ ಜೊತೆಗೂಡಬೇಕು?"

ಜಿಗ್ನೇಶ್ ಉತ್ತರ: "ನಾನು ಅಂಬೇಡ್ಕರ್ ವಾದದಲ್ಲಿ ನಂಬಿಕೆ ಇಟ್ಟವನು. ಅಂಬೇಡ್ಕರ್ ಅವರ ಜಾತಿವಿನಾಶ ನೀತಿ ಅತ್ಯಂತ ಮುಖ್ಯವಾದದ್ದು. ಜಾತಿವಿನಾಶಕ್ಕಾಗಿ 'ಜೈ ಭೀಮ್' ಅನ್ನುವವರನ್ನು ನಾವು ಬೆಂಬಲಿಸಬೇಕು. ಜೊತೆಗೆ ಎಡಪಂಥೀಯರು 'ವಿಮೋಚನೆಗಾಗಿ ವಿಶ್ವ ಕಾರ್ಮಿಕರೇ ಒಂದಾಗಿ' ಅಂದರೆ ಅದನ್ನೂ ನಾವು ಬೆಂಬಲಿಸಬೇಕು. ಇದರ ಜೊತೆ ಸಮಾನತೆಯ ಸಾಧನೆಗಾಗಿ ಗಂಭೀರವಾಗಿರುವ ಮಹಿಳಾವಾದ, ಸರ್ವೋದಯ ಎಲ್ಲವನ್ನು ಒಳಗೊಳ್ಳಬೇಕು ಅಥವಾ ಇನ್ನೊಂದು ಹೊಸ ಸಿದ್ಧಾಂತವು ಹುಟ್ಟಿದರೂ ಅದನ್ನೂ ಒಪ್ಪಿಕೊಳ್ಳಬೇಕು. ಎಡಪಂಥಿಯರು ಹಲವಾರು ತಪ್ಪುಗಳನ್ನು ಮಾಡಿದ್ದಾರೆ, ಈಗಲೂ ಅಲ್ಲಿನ ದಲಿತ ಪ್ರಾತಿನಿಧ್ಯದ ಬಗ್ಗೆ ಪ್ರಶ್ನೆಗಳು ಇವೆ. ಹಾಗೆಂದ ಮಾತ್ರಕ್ಕೆ ದಲಿತಪರವಾಗಿ ಎಡಪಂಥೀಯರು ದನಿ ಎತ್ತಿದಾಗ ನಾವು ಅವರನ್ನು ವಿರೋಧಿಸುವ ಬದಲು ಅವರೊಂದಿಗೆ ಕೈಜೋಡಿಸಬೇಕು. ಹೀಗೆ ಎಲ್ಲರೂ ಸಮಾನತೆಗಾಗಿ ಜತೆಯಾಗಿ ನಡೆಯಬೇಕು."

ಇನ್ನೂ ಬಹಳಷ್ಟು ಜನ ಪ್ರಶ್ನೆಗಳನ್ನು ಕೇಳಲು ಸಿದ್ಧರಿದ್ದರು. ಆದರೆ ಜಿಗ್ನೇಶನಿಗೆ ಸುಸ್ತಾಗಿದ್ದರಿಂದ ಮತ್ತು ಆತ ಇನ್ನೊಂದು ಕಾರ್ಯಕ್ರಮಕ್ಕೆ ಹೋಗಬೇಕಿದ್ದರಿಂದ ಸಂವಾದ ಕಾರ್ಯಕ್ರಮವನ್ನು ಅಂತ್ಯಗೊಳಿಸಲಾಯಿತು.

ಅಲ್ಲಿಯತನಕ ನಾನು ಜಿಗ್ನೇಶನೊಂದಿಗೆ ಸಮಯ ಕಳೆಯಲು ಸಾಧ್ಯವಾಗಿರದಿದ್ದರಿಂದ ಸಂಜೆ ಏಳು ಗಂಟೆಯಿಂದ ಆತ ಹನ್ನೊಂದು ಗಂಟೆಗೆ ವಿಮಾನ ಏರುವತನಕ ಆತನನ್ನು ನನ್ನ ಸುಪರ್ದಿಗೆ ವಹಿಸಿದ್ದರು. "ಮೀನು ತಿನ್ನುತ್ತೀಯಾ?" ಎಂದು ಕೇಳಿದೆ. "ತಿನ್ನುತ್ತೀನಿ" ಅಂದ. ನಾನು ಮತ್ತು ಹರ್ಷ ಆತನನ್ನು ಶಿವಾನಂದ ಸರ್ಕಲ್‌ನಲ್ಲಿರುವ 'ಸೀ ರಾಕ್' ಹೋಟೆಲ್‌ಗೆ ಕರೆದುಕೊಂಡು ಹೋದೆವು. "ನೀನಿನ್ನೂ ಯಾಕೆ ಮದುವೆ ಆಗಿಲ್ಲ?" ಎಂದು ನಾನು ಕೇಳಿದಾಗ "ನನಗೆ ಹೆಣ್ಣು ಕೊಡುವವರೇ ಇಲ್ಲ!" ಎಂದ. "ಸುಳ್ಳು ಹೇಳಬೇಡ. ನೀನು ಇವತ್ತು ಇಡೀ ದೇಶದ ದಲಿತರ ಕಣ್ಮಣಿ. ನಿನಗೆ ಹೆಣ್ಣು ಕೊಡಲು ನಾ ಮುಂದು, ತಾ ಮುಂದು ಅಂತ ಅದೆಷ್ಟೋ ಜನರು ಬಂದಿರಬೇಕು" ಎಂದೆ.

"ಹಾಗೇನಿಲ್ಲ! ನಾನೂ ನೋಡುತ್ತಿದ್ದೇನೆ. ನನ್ನ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಇಷ್ಟೆಲ್ಲಾ ಸುದ್ದಿ ಇದ್ದರೂ ಯಾರೊಬ್ಬರೂ ತಮ್ಮ ಮಗಳನ್ನು ನನಗೆ ಕೊಡುವುದಕ್ಕಾಗಲಿ, ಯಾವೊಬ್ಬ ಯುವತಿಯೂ ನನ್ನ ಕೈಹಿಡಿಯಲಿಕ್ಕಾಗಲಿ ಮುಂದೆ ಬಂದಿಲ್ಲ" ಅಂತ ನಕ್ಕ. ಆದರೆ ಆಮೇಲೆ ಗೊತ್ತಾಯಿತು ಆತ ಹೇಳಿದ್ದೆಲ್ಲ ತಮಾಷೆಗಾಗಿ ಅಂತ, ಯಾಕೆಂದರೆ ಆತನಿಗೆ ಒಬ್ಬ ಗರ್ಲ್ ಫ್ರೆಂಡ್ ಇದ್ದಾಳೆ.

"ನಿನ್ನ ಹೋರಾಟಕ್ಕೆ ನಿನ್ನ ಅಪ್ಪ-ಅಮ್ಮನ ಬೆಂಬಲ ಇದೆಯಾ?" ಎಂದು ಹರ್ಷ ಕೇಳಿದ. "ಅವರ ಸಂಪೂರ್ಣ ಬೆಂಬಲ ನನಗಿದೆ. ಕಳೆದ ಎಂಟು ವರ್ಷಗಳಿಂದ ನಾನು ಒಂದು ನಯಾಪೈಸೆಯನ್ನೂ ದುಡಿದಿಲ್ಲ, ಆದರೂ ಅವರು ನನ್ನ ಪರ ನಿಂತಿದ್ದಾರೆ."

"ನಿನ್ನ ಅಮ್ಮ ನಿನ್ನ ಹೋರಾಟದಲ್ಲಿ ಭಾಗಿ ಆಗಿದ್ದಾರಾ?" ಎಂದು ನಾನು ಕೇಳಿದೆ.

"ಆಕೆಯೇ ನಮ್ಮ ಜೊತೆ ಕೈಜೋಡಿಸಿದ ಮೊದಲ ಮಹಿಳೆ. ನನಗೆ ಮೊದಮೊದಲು ನಮ್ಮ ಹೋರಾಟದಲ್ಲಿ ಮಹಿಳೆಯರಿಲ್ಲ ಎಂಬ ಆತಂಕ ಇತ್ತು, ಆದರೆ ಯಾವಾಗ ನನ್ನನ್ನು ಮೋದಿಯ ಹುಟ್ಟುಹಬ್ಬದ ದಿನದಂದು ಬಂಧಿಸಲಾಯಿತೋ ಅವತ್ತು ಮಹಿಳೆಯರು ನಮ್ಮ ಹೋರಾಟಕ್ಕೆ ದೊಡ್ಡ ಸಂಖ್ಯೆಯಲ್ಲಿ ಹರಿದುಬಂದರು. ನಾನು ಬಿಡುಗಡೆ ಹೊಂದಿದಾಗ ಆ ಮಹಿಳೆಯರೆಲ್ಲರೂ ಬಂದು ನನ್ನ ಮೈಮುಟ್ಟಿ 'ಮಗ, ಚೆನ್ನಾಗಿದ್ದೀಯ? ನಿನಗೆ ಪೊಲೀಸರಿಂದ ಸಮಸ್ಯೆ ಆಯಿತಾ? ಅವರು ನಿನಗೆ ತೊಂದರೆ ಕೊಟ್ಟರಾ?' ಎಂದೆಲ್ಲ ವಿಚಾರಿಸಿದರು."

ಅಷ್ಟುಹೊತ್ತಿಗೆ ನಾನು ಆರ್ಡರ್ ಮಾಡಿದ್ದ ಮೀನೂಟ ಬಂತು. ಜೊತೆಗೆ ಗುಜರಾತ್‌ನಲ್ಲಿ ಆತನೊಂದಿಗೆ ದಲಿತರ ಪರವಾದ ಹೋರಾಟದಲ್ಲಿ ಭಾಗಿ ಆಗಿರುವ ನಾಲ್ವರು ಯುವತಿಯರೂ ನಮ್ಮನ್ನು ಸೇರಿಕೊಂಡರು. ಅಂಜಲ್ ಫ್ರೈ ಅನ್ನು ಚಪ್ಪರಿಸಿಕೊಂಡು ತಿಂದ ಜಿಗ್ನೇಶ್ "ಯಾರು ನಿನ್ನ ಬಗ್ಗೆ ಏನೇ ಹೇಳಲಿ, ನಿನಗೆ ಎಷ್ಟೇ ಶಾಪ ಹಾಕಲಿ, ನೀನು ನನಗೆ ಇಷ್ಟು ರುಚಿಕರವಾದ ಮೀನೂಟ ಕೊಡಿಸಿದ್ದರಿಂದ ನೀನೆಂದೂ ನರಕಕ್ಕೆ ಹೋಗಲ್ಲ" ಎಂದು ಹಾರೈಸಿದ.

ಹೊಟ್ಟೆ ತುಂಬ ಊಟ ಮಾಡಿದ ನಂತರವೂ ಆತ ಇನ್ನಷ್ಟು ಸಮಯ ನಮ್ಮೊಂದಿಗೆ ಕಳೆಯಲು ಇಷ್ಟಪಟ್ಟಿದ್ದರಿಂದ ವಿಮಾನ ನಿಲ್ದಾಣಕ್ಕೆ ಹೊರಡಲು ಆತ ಸಿದ್ಧವೇ ಇರಲಿಲ್ಲ. "ನೀನು ಹೀಗೆ ಲೇಟ್ ಮಾಡಿದರೆ ಫ್ಲೈಟ್ ಮಿಸ್ ಆಗುತ್ತೆ. ಆಗ ನಾನು ನಿನ್ನನ್ನು ಬೆಂಗಳೂರಿನಲ್ಲೇ ಬಂಧಿಯಾಗಿಡುತ್ತೇನೆ. ಸಣಕಲ ಆದ ನೀನು ಒಂದಿಷ್ಟು ಮೈತುಂಬಿಸಿಕೊಂಡ ನಂತರವೇ ನಿನ್ನನ್ನು ಗುಜರಾತ್‌ಗೆ ಕಳುಹಿಸುವುದು" ಎಂದೆ. "ಏನು ಮಾಡೋದು? ಕಳೆದ ಐದು ತಿಂಗಳಲ್ಲಿ ನಾಲ್ಕು ಕೆಜಿ ಕಡಿಮೆ ಆಗಿದ್ದೇನೆ" ಎಂದು ಆತ ಲೊಚಗುಟ್ಟಿದ.

ಟ್ರಾಫಿಕ್ ಜಾಮ್ ಇಲ್ಲದಿದ್ದರಿಂದ ಒಂಭತ್ತು ಮೂವತ್ತಕ್ಕೆ ವಿಮಾನ ನಿಲ್ದಾಣ ತಲುಪಿದೆವು. "ಹೋ, ಇನ್ನಷ್ಟು ಸಮಯ ಇದೆ. ಇನ್ನೊಂದು ಅರ್ಧ ಗಂಟೆ ಕಾರ್‌ನಲ್ಲಿ ಹರಟುತ್ತಾ ಕೂರಬಹುದು" ಎಂದು ಜಿಗ್ನೇಶ್ ಸಂತೋಷಗೊಂಡ. "ಇಲ್ಲ ಮರಿ, ಇದು ಡ್ರಾಪ್ ಅಂಡ್ ಲೀವ್ ಜೋನ್. ಇಲ್ಲಿ ಕಾರ್ ಪಾರ್ಕ್ ಮಾಡುವಂತಿಲ್ಲ" ಎಂದಾಗ "ನನ್ನನ್ನು ನೀನು ಓಡಿಸುತ್ತಿದ್ದೀಯ" ಎಂದು ಗೊಣಗಿದ.


ನಾನು ಆತನಿಗಾಗಿ ಖರೀದಿಸಿದ್ದ ಶರ್ಟ್, ಟಿ-ಶರ್ಟ್ ಮತ್ತು ಪ್ಯಾಂಟ್ ಇದ್ದ ಕವರ್ ಕೊಟ್ಟು "ಇದು ನಿನ್ನ ಬೆಂಗಳೂರು ಅಮ್ಮನಾದ ನನ್ನಿಂದ ನಿನಗೆ ಗಿಫ್ಟ್" ಅಂದೆ. ಜಿಗ್ನೇಶ್ ಎಂತಹ ತಮಾಷೆಯ ಹುಡುಗ ಅಂದರೆ, "ಓಹೋ, ಶರ್ಟು, ಪ್ಯಾಂಟು ಎಲ್ಲ ಇದೆ. ಆದರೆ ಕಾಚಾ ಇಲ್ಲವಲ್ಲಾ?" ಅಂತ ನಕ್ಕ. "ಸಾಧ್ಯವಾದಷ್ಟು ಬೇಗ ನಾನು ಮತ್ತೆ ಇಲ್ಲಿಗೆ ಬರುತ್ತೇನೆ. ಭೂರಹಿತರಿಗೆ ಭೂಮಿ ಕೊಡಿಸುವ ಹೋರಾಟ ಮುಂದುವರಿಯಲೇ ಬೇಕು" ಎನ್ನುತ್ತಾ ಜಿಗ್ನೇಶ್ ಹೊರಟ.

ಮಾರನೆ ಬೆಳಗ್ಗೆ ನಾನಿನ್ನೂ ನಿದ್ದೆ ಮಾಡುತ್ತಿದ್ದಾಗ ಜಿಗ್ನೇಶನಿಂದ ನನಗೆ ಒಂದು ಮೆಸೇಜ್ ಬಂತು. "ಹಲೋ, ಗುಡ್ ಮಾರ್ನಿಂಗ್. ಈಗತಾನೆ ಎದ್ದು ನೀನು ಕೊಟ್ಟ ಬಟ್ಟೆಗಳನ್ನು ಹಾಕಿಕೊಂಡು ನೋಡಿದೆ. ನನಗೆ ಪ್ರಿಯವಾದ ನೀಲಿ ಬಣ್ಣದ ಬಟ್ಟೆಗಳನ್ನೇ ನನಗೆ ಕೊಟ್ಟಿದ್ದಿಯಾ. ನಿನಗೆ ತುಂಬಾ ತುಂಬಾ ಥ್ಯಾಂಕ್ಸ್. ನೀನು ನಿನ್ನೆಯ ಸಂಜೆಯನ್ನು ಇವತ್ತಿನ ಬೆಳಗ್ಗೆಯನ್ನು ನನ್ನ ಪಾಲಿಗೆ ಸಂತೋಷಮಯವಾಗಿಸಿದ್ದೀಯ. ಆದಷ್ಟು ಬೇಗ ನೀನು ಕೊಟ್ಟಿರುವ ಬಟ್ಟೆಯನ್ನು ತೊಟ್ಟು, ಅದರ ಫೋಟೋ ತೆಗೆದು ನಿನಗೆ ಕಳುಹಿಸುತ್ತೇನೆ" ಎಂದಿದ್ದ ಮೆಸೇಜ್‌ನಲ್ಲಿ.

ಮತ್ತೆ ಸಂಜೆ ಫೋನ್ ಮಾಡಿ ಸ್ವಲ್ಪ ಸಮಯ ನನ್ನೊಂದಿಗೆ ಹರಟಿದ. "ನಾನು ಅಂಬೇಡ್ಕರ್‌ವಾದಿ ಆದ್ದರಿಂದ ಮಾತ್ರ ನನಗೆ ನೀಲಿ ಬಣ್ಣ ಇಷ್ಟ ಎಂದಲ್ಲ, ಅದರ ಹೊರತಾಗಿಯೂ ನೀಲಿ ನನ್ನ ಅಚ್ಚುಮೆಚ್ಚಿನ ಬಣ್ಣ. ಕರ್ನಾಟಕದ ಮಿತ್ರರು ಹೋರಾಟದ ಮುಂದಿನ ಹೆಜ್ಜೆಗಳನ್ನು ರೂಪಿಸಲಿ. ನಾನಂತೂ ಈ ಹೋರಾಟಕ್ಕೆ ಕಟಿಬದ್ಧನಾಗಿದ್ದೇನೆ. ಸದ್ಯದಲ್ಲೇ ಮತ್ತೆ ಅಲ್ಲಿಗೆ ಬರುತ್ತೇನೆ" ಎಂದ.

ಆದಷ್ಟು ಬೇಗ ಜಿಗ್ನೇಶನನ್ನು ಮತ್ತೆ ಭೇಟಿ ಆಗುವ ಆಸೆ ನನ್ನೊಬ್ಬಳದ್ದು ಮಾತ್ರವಲ್ಲ, 'ಚಲೋ ಉಡುಪಿ'ಯಲ್ಲಿ ಭಾಗವಹಿಸಿದ ಎಲ್ಲ ಮಿತ್ರರದ್ದೂ ಆಗಿದೆ. ■





# ಅಮ್ಮನ ವ್ಯಾಧಿ ಎಂಥಾದ್ದು?

ಚೆನ್ನೈನ ಅಪೋಲೋ ಆಸ್ಪತ್ರೆಯ ಐಸಿಯುನ ಬಾಗಿಲು ತೆರೆಯುವುದೇ ಅಪರೂಪ. ಬಾಗಿಲಿಗೆ ಹೆಣೆದ ಗಾಜಿನ ರಂಧ್ರದಿಂದಲೇ ನೋಡಬೇಕು. ತಮಿಳುನಾಡಿನ ಉಸ್ತುವಾರಿ ಗವರ್ನರ್ ವಿದ್ಯಾಸಾಗರ ರಾವ್ ಮುಖ್ಯಮಂತ್ರಿಗಳು ಬದುಕಿರುವುದನ್ನು ಖಾತರಿಪಡಿಸಿಕೊಳ್ಳಲೆಂದೇ ಅಪೋಲೋಗೆ ಬಂದಾಗಲೂ ತೀವ್ರ ನಿಗಾದ ಒಳಕ್ಕೆ ಬಿಡಲೇ ಇಲ್ಲವಂತೆ. ಗಾಜಿನ ರಂಧ್ರದಿಂದಲೇ ನೋಡಿ ಬಂದರಂತೆ. ಅದೇನು ಕಂಡರೋ ಅವರಿಗೇನೆನಿಸಿತೋ, "ಮುಖ್ಯಮಂತ್ರಿಗಳು ಫೈನ್, ನೋ ಪ್ರಾಬ್ಲಂ...." ಎಂದಷ್ಟೇ ಹೇಳಿದರಂತೆ!

ಇದು ಕೇವಲ ತಮಿಳುನಾಡಿನ ರಾಜ್ಯಪಾಲರಿಗಾದ ಅನುಭವವಷ್ಟೇ ಅಲ್ಲ, ಪಕ್ಕಾ ದ್ರಾವಿಡವಾದಿ ವೈಕೋ, ಪೆರಿಯಾರ್ ಉಗ್ರ ಸೀಮನ್, ಡಿಎಂಕೆ ನಾಯಕ ಸ್ಟಾಲಿನ್, ಕೇಂದ್ರ ಮಂತ್ರಿ ವೆಂಕಯ್ಯ ನಾಯ್ಡು ಮುಂತಾದವರದ್ದೂ ಇದೇ ಕತೆ. ಅಪೋಲೋದ ಐಸಿಯುನ ಬಾಗಿಲಿನ ಗಾಜಿನ ರಂಧ್ರದಿಂದಷ್ಟೇ ನೋಡಿ ಬರಬೇಕು. ಅದರಿಂದ ಕಂಡಿದ್ದಷ್ಟೇ ಅವರ ಸೌಭಾಗ್ಯ!


ಇಡೀ ಅಪೋಲೋ ಆಸ್ಪತ್ರೆಯ ಸುತ್ತಾ ಅರ್ಧ ಕಿ.ಮೀ ರಸ್ತೆಗುಂಟ ಪೊಲೀಸರ ನಾಕಾಬಂಧಿ. ಅಪೋಲೋ ಆಸ್ಪತ್ರೆಯೇನಾದರೂ ದೂರದಿಂದ ಕಂಡರೆ ಅದೇ ಅವರ ಪುಣ್ಯ. ಅಣ್ಣಾ ಡಿಎಂಕೆಯ ಸಹಸ್ರಾರು ಕಾರ್ಯಕರ್ತರು ಅಮ್ಮನ ದರುಶನಕ್ಕೆಂದು ಅಪೋಲೋ ದಿಕ್ಕನ್ನು ಹಿಡಿದು ಪ್ರತಿನಿತ್ಯ ಎಡತಾಕುತ್ತಲೇ ಇದ್ದಾರೆ. ತಮಿಳುನಾಡಿನ ಮೂಲೆಮೂಲೆಗಳಲ್ಲೂ ಅಮ್ಮನ ಆರೋಗ್ಯಕ್ಕಾಗಿ ವಿಶೇಷ ಪೂಜೆ, ವ್ರತ ನೇಮಾದಿಗಳ ವರದಿಗಳನ್ನು ಪ್ರತಿನಿತ್ಯ ತಮಿಳು ಚಾನಲ್ಲುಗಳು ಬಿತ್ತರಿಸುತ್ತಲೇ ಇವೆ. ಸುಪ್ರೀಂಕೋರ್ಟ್ ವಿಶೇಷ ಪೀಠ ಪ್ರತಿನಿತ್ಯ ತಮಿಳುನಾಡಿಗೆ 6,000 ಕ್ಯೂಸೆಕ್ಸ್ ನೀರು ಬಿಡುವಂತೆ ನೀಡಿದ ತೀರ್ಪಿನ ಮರುದಿನ ಅಂದರೆ ಸೆಪ್ಟೆಂಬರ್ 22ರಂದು ಜಯಲಲಿತಾ ಇದ್ದಕ್ಕಿದ್ದಂತೆ ಎಚ್ಚರತಪ್ಪಿ ಬಿದ್ದರೆಂಬ ಸುದ್ದಿಯೇ ಕೊನೆ. ಅದರ ಮರುದಿನದಿಂದ ತಮಿಳುನಾಡಿನ ಸಮಸ್ತ ಆಗುಹೋಗುಗಳೆಲ್ಲ ಅಪೋಲೋ ಆಸ್ಪತ್ರೆಗೆ ಸ್ಥಳಾಂತರವಾಗಿತ್ತು...

ಇದ್ದಕ್ಕಿದ್ದಂತೆ ಅಮ್ಮನಿಗೇನಾಯಿತು. ಅದರಲ್ಲೂ ಕಾವೇರಿ ತೀರ್ಪಿನ ಭರ್ಜರಿ ಗೆಲುವಿನ ಖುಷಿಯನ್ನೂ ಪಡಲಾಗದ ಹಾಗೆ ಅಮ್ಮನನ್ನು ಹೆಡೆಮುರಿ ಕಟ್ಟಿದ ಆ ವ್ಯಾಧಿಯಾದರೂ ಯಾವುದು? ಅಮ್ಮ ಸಾವುಬದುಕಿನ ನಡುವೆ ಸೆಣಸಾಡುತ್ತಿರುವುದಾದರೂ ಏಕೆ? ಬದುಕಿದ್ದೇ ಸುಳ್ಳಾ? ಅಥವಾ ವೆಂಟಿಲೇಟರ್‌ಗಳ ಆಧಾರದ ಮೇಲಷ್ಟೇ ಉಸಿರಾಡುತ್ತಿರಬಹುದಾ? ಏಕೆ ಅವರ ಅನಾರೋಗ್ಯದ ಕುರಿತಂತೆ ಈ ಪಾಟಿ ಮುಗುಮ್ಮು? ಇತ್ಯಾದಿ ತಮಿಳುನಾಡಿನಾದ್ಯಂತ ಹುಟ್ಟಿಕೊಂಡ ವದಂತಿಗಳು, ಪುಕಾರು, ಗಾಳಿಸುದ್ದಿಗಳ ಭರಾಟೆಯ ನಡುವೆ ಕರ್ನಾಟಕದಿಂದ ಪ್ರತಿನಿತ್ಯ ಹರಿಯಬೇಕಿದ್ದ ಆರು ಸಾವಿರ ಕ್ಯೂಸೆಕ್ಸ್ ಯಾವ ಲೆಕ್ಕಕ್ಕೂ ಇರಲಿಲ್ಲ!

## ಲಂಡನ್‌ನಿಂದ ಬಂದವರು

ಅಪೋಲೋ ಆಸ್ಪತ್ರೆಯ ಚೆನ್ನೈನ ಮುಖ್ಯಸ್ಥರ ಹೆಸರು ಸುಬ್ಬಯ್ಯ ವಿಶ್ವನಾಥನ್. ಸೆಪ್ಟೆಂಬರ್ 24ಕ್ಕೆ ಅಂದರೆ ಅಮ್ಮ ದಾಖಲಾದ ಎರಡನೇ ದಿನಕ್ಕೆ ಆಸ್ಪತ್ರೆ ವತಿಯಿಂದ ವಿಶೇಷ ಹೇಳಿಕೆ ಹೊರಡಿಸಬೇಕಾಯಿತು. ಅವರ ಪ್ರಕಾರ ಅಮ್ಮ ತೀವ್ರ ಜ್ವರ ಮತ್ತು ನಿರ್ಜಲೀಕರಣ (ದ್ರವ ಹೀನತೆ)ದಿಂದ ಬಳಲುತ್ತಿದ್ದಾರೆ ಮತ್ತು ಬೇರೆ ಯಾವುದೇ ಅಪಾಯವಿಲ್ಲ!

ಈ ಎಲ್ಲದರ ನಡುವೆಯೇ ಗಮನಿಸಬೇಕಾದ ವಿಶೇಷ ಅಂಶವೆಂದರೆ ಅಪೋಲೋ ಮುಖ್ಯಸ್ಥ ವಿಶ್ವನಾಥನ್ ಮೇಲಿಂದ ಮೇಲೆ ಹೇಳುವ ಒಂದೇ ಮಾತು "ಅವರನ್ನು ಬೇರೆ ಯಾವುದೇ ದೇಶಕ್ಕೊಯ್ದು ಚಿಕಿತ್ಸೆ ಕೊಡಿಸುವಂಥ ಯಾವುದೇ ಪರಿಸ್ಥಿತಿ ಉದ್ಭವಿಸಿಲ್ಲ...!"



Date : 29.9.2016

PRESS RELEASE

The Honourable Chief Minister who was admitted in the Apollo Hospital, Greams Road, Chennai for fever has responded well to the treatment. Necessary evaluation tests are being carried out. The Honourable Chief Minister has been advised few days stay in the hospital for recuperative treatment.

Issued by : Apollo Hospitals, Chennai.

SUBBIAH VISWANATHAN
CHIEF OPERATING OFFICER


ಎಂಜಿಆರ್

ವಿಶ್ವನಾಥನ್ ಪದೇ ಪದೇ ವಿದೇಶಕ್ಕೊಯ್ದು ಚಿಕಿತ್ಸೆ ನೀಡಬೇಕಾದ ಯಾವುದೇ ಅನಿವಾರ್ಯತೆಯಿಲ್ಲ ಎಂದು ಹೇಳುವುದಕ್ಕೂ ಕಾರಣವಿದೆ. ಅದು ಕಳೆದ ಒಂದೂವರೆ ವರ್ಷದಿಂದ ಜಯಲಲಿತಾ ಅನಾರೋಗ್ಯದ ಕುರಿತಂತೆ ಮೇಲಿಂದ ಮೇಲೆ ಕೇಳಿಬಂದ ವದಂತಿಗಳು. ಕಳೆದ ತಮಿಳುನಾಡು ಚುನಾವಣೆಯಲ್ಲಿ ಜಯಲಲಿತಾ ಭಾರೀ ಅಂತರದಿಂದಲೇ ಗೆದ್ದು ಮುಖ್ಯಮಂತ್ರಿಯಾದರಾದರೂ ಅದರ ಸಂಭ್ರಮಕ್ಕೆ ಯಾವುದೇ ಅವಕಾಶವಿರಲಿಲ್ಲ. ಪ್ರಮಾಣವಚನಕ್ಕೂ ಅಮ್ಮ ಹೆಚ್ಚು ಹೊತ್ತು ಕೂರಲಾಗಲಿಲ್ಲ. ಇಪ್ಪತ್ತೇ ನಿಮಿಷಕ್ಕೆ ಕಾಟಾಚಾರದ ಶಾಸ್ತ್ರ ಮುಗಿಸಿದಂತೆ ಬಳಲಿದಂತೆ ತೆವಳುತ್ತಾ ನಡೆದುಹೋದರು.

ಅದೇ ಹೊತ್ತಿಗೆ ಅಂತರ್ಜಾಲದ ರೆಡಿಫ್ ಡಾಟ್ ಕಾಮ್ ಎಂಬ ಸುದ್ದಿ ಜಾಲವೊಂದರಲ್ಲಿ 'ಜಯಲಲಿತಾ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದಾರೆಂದೂ ಈ ಬಗ್ಗೆ ಚೆನ್ನೈನ ಮೀಡಿಯಾ ಗೊತ್ತಿದ್ದೂ ಅನಾರೋ[illegible] ಮುಚ್ಚಿಟ್ಟಿದೆಯೆಂದೂ' ವಿಶೇಷ ಸುದ್ದಿಯೊಂದನ್ನು ಪ್ರಕ[illegible] ಇದಕ್ಕೆ ಮುಖ್ಯಮಂತ್ರಿ ಕಚೇರಿ ಅದ[illegible] ತಲೆಕೆಡಿಸಿಕೊಂಡಿತೆಂದರೆ ಮುಖ್ಯಮಂತ್ರಿ [illegible] ತೇಜೋವಧೆಯೆಂದು ರೆಡಿಫ್ ಡಾಟ್ ಕಾಮ್ [illegible] ಮಾನನಷ್ಟ ಮೊಕದ್ದಮೆ ಹೂಡಲಾಯ್ತು. ಇದರ [illegible] 'ದಿ ನ್ಯೂಸ್ ಮಿನಿಟ್' ಎಂಬ ಮತ್ತೊಂದು ಸುದ್ದಿ ಜಾ[illegible] "ಅಮ್ಮನಿಗೆ ಅತ್ಯಗತ್ಯವಾಗಿ ಲಿವರ್ ಟ್ರಾನ್ಸ್‌ಪ[illegible] ಆಗಲೇಬೇಕು ಮತ್ತದು ಸಿಂಗಾಪೂರ್‌ನಲ್ಲಷ್ಟೇ ಸಾ[illegible] ಎಂಬ ಮತ್ತೊಂದು ವರದಿ ಪ್ರಕಟಗೊಂಡಿತ್ತು.

## ಲೀವರ್? ಕಿಡ್ನಿ...?


ಇವೆರಡು ಸುದ್ದಿಜಾಲಗಳಲ್ಲದೆ ತೆಹಲ್ಕಾ [illegible] ಬೇರೆಯದೇ ವಿಶೇಷ ಬಾಣವೊಂದನ್ನು ಬಿಟ್ಟಿತ್ತು. [illegible] ಅಮ್ಮನ ಕಿಡ್ನಿ ವೈಫಲ್ಯ. ಅಮ್ಮನ ಎರಡೂ ಕಿ[illegible] ವಿಫಲಗೊಂಡ ಫಲವಾಗಿ ದಿನಬಿಟ್ಟು ದಿನ [illegible] ಡಯಾಲಿಸಿಸ್‌ಗೆ ಒಳಪಟ್ಟಿದ್ದೇ ಅನಾರೋ[illegible] ಮೂಲವೆಂದೂ ಸದ್ಯ ಕಿಡ್ನಿ ಟ್ರಾನ್ಸ್‌ಪ್ಲಾಂಟ್ [illegible] ಹೋದರೆ ಅವರು ಬದುಕುಳಿಯುವುದೇ ಕಷ್ಟ[illegible] ತೆಹಲ್ಕಾ ಬ್ರೇಕಿಂಗ್ ನ್ಯೂಸ್ ಬಿತ್ತರಿಸಿದಾ[illegible] ತಮಿಳುನಾಡಿನ ಬಹುತೇಕ ಮೀಡಿಯಾಗಳು ಈ[illegible] ಚಕಾರವೆತ್ತಿರಲಿಲ್ಲ. ಈ ಮಧ್ಯೆಯೇ 'ದಿ ಟೆಲಿ[illegible] ಮತ್ತೊಂದು ಬಾಂಬ್ ಹಾಕಿತ್ತು. ಅಮ್ಮ ಕಿಡ್ನಿ ವೈಫಲ[illegible] ಬಳಲುತ್ತಿದ್ದಾರಲ್ಲದೆ ಅಧಿಕ ರಕ್ತದೊತ್ತಡ [illegible] ಮಧುಮೇಹದ (ಸಕ್ಕರೆ ಕಾಯಿಲೆ) ಫಲವಾಗಿ [illegible] ಹೆಬ್ಬೆರಳಿಗೇ 'ಗ್ಯಾಂಗ್ರೀನ್' ಆಗಿದೆಯೆಂದೂ ಅನಾ[illegible] ಹೀಗೆ ಮುಂದುವರಿಯಿತೆಂದರೆ ಅ[illegible] ಬದುಕುಳಿಯುವುದೇ ಕಷ್ಟವೆಂದು ಬರೆದಿತ್ತು.

ತಮಿಳುನಾಡಿನ ಮೀಡಿಯಾಗಳು ಅದೆಷ್ಟೇ [illegible] ಬಿದ್ದು ಅಮ್ಮನ ಆರೋಗ್ಯವನ್ನು ಮುಚ್ಚಿಟ್ಟಿದ್ದರೂ ರಾ[illegible] ಮಟ್ಟದ ಪತ್ರಿಕೆ, ಸುದ್ದಿಜಾಲಗಳಲ್ಲಿ ದಿನಕೊ[illegible] ಸುದ್ದಿಯಾಗುತ್ತಲೇ ಹೋಯಿತು. 2015ರ ಡಿಸೆ[illegible] ತನಕ ಅಮ್ಮ ಒಂದೇ ಒಂದು ಸಾರ್ವಜನಿಕ ದರ್ಶ[illegible] ಸಿಕ್ಕಿರಲಿಲ್ಲ. 2015ರ ಮೇ ತಿಂಗಳಲ್ಲಿ ಅಕ್ರಮ[illegible] ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಜೈಲಿಂದ ಹೊರ ಬ[illegible] ಕೊನೆ. ಆ ನಂತರದ ಪ್ರಮಾಣವಚನವನ್ನು ಇಪ್ಪತ್ತೇ ನಿ[illegible] ಮುಗಿಸಿದ 'ಅಮ್ಮ' ವಾಪಸ್ಸಾಗುವಾಗ ನಡೆದಾಡುವ[illegible] ಹೆಣಗಾಡುವಷ್ಟು ನಿತ್ರಾಣರಾಗಿದ್ದರು. 2016ರ [illegible] ತನಕ ಅವರು ತಮ್ಮ ಸಚಿವಾಲಯ ಸಿಬ್ಬಂದಿಯ[illegible] ಅಂತ ನಡೆಸಿದ್ದು ಎರಡು ಬಾರಿ ಮಾತ್ರ. ಒಮ್ಮೆ[illegible] ಸಚಿವ ಸಂಪುಟದ ಸಭೆ ನಡೆಸಲು ಸಾಧ್ಯವಾ[illegible] ಒಂದೆರಡು ಬಾರಿ ತಮ್ಮ ಕಚೇರಿಗೆ ಬಂದರಾ[illegible]



ಆಸ್ಪತ್ರೆ ಸುತ್ತ ಪೊಲೀಸ್ ಸರ್ಪಗಾವಲು



ಚೆನ್ನೈನ ಅಪೋಲೋ ಆಸ್ಪತ್ರೆ


ಆಸ್ಪತ್ರೆಯಲ್ಲಿ


ದುಃಖತಪ್ತ ಅಮ್ಮನ ಅಭಿಮಾನಿಗಳ ಹರಕೆಆಕ್ರಂದನ ಇತ್ಯಾದಿ...




# ನಟ ಅಜಿತ್ ಉತ್ತರಾಧಿಕಾರಿ ಅಂದವರ್ಯಾರು?

ಅಮ್ಮ ಆಸ್ಪತ್ರೆಯಲ್ಲಿ ನೆಲೆಗೊಳ್ಳುತ್ತಿದ್ದಂತೆ ಚಿತ್ರವಿಚಿತ್ರ ಚೇಷ್ಟೆಗಳು, ಲೆಕ್ಕಾಚಾರಗಳೆಲ್ಲ ರಾತ್ರೋರಾತ್ರಿ ತಮಿಳು ತಲೆಗಳ ನಡುವೆ ಹೆಡೆಯೆತ್ತುತ್ತಲೇ ಇವೆ. ಈ ಪೈಕಿ ಗಮನಾರ್ಹವೆನಿಸಿದ್ದು ತಮಿಳು ನಟ ಅಜಿತ್ ಅಮ್ಮನ ಉತ್ತರಾಧಿಕಾರಿಯೆಂಬ ಕುಚೇಷ್ಟೆ!

ಕೆಲವರ ಪ್ರಕಾರ ಅಜಿತ್‌ನೇ ತನ್ನ ಉತ್ತರಾಧಿಕಾರಿಯೆಂದು ಅಮ್ಮ ವಿಲ್ ಬರೆದಿಟ್ಟಿದ್ದಾರಂತೆ. ಹಾಗೆಂದು ತಮಿಳು ಚಾನಲ್ಲೊಂದು ಹುಚ್ಚಾಟಕ್ಕಿಳಿಯಿತು. ಅಜಿತ್ ವಿಚಿತ್ರ ಮ್ಯಾನರಿಸಂಗಳ ವಿಕ್ಷಿಪ್ತ ನಟನೆಂಬ ಬಗ್ಗೆ ಎರಡು ಮಾತಿಲ್ಲ. ರಜನಿಕಾಂತ್ ಬಿಟ್ಟರೆ ಅತೀ ಹೆಚ್ಚು ಭಕ್ತಾದಿಗಳಿರುವುದು ಅಜಿತ್ ಮತ್ತು ವಿಜಯ್‌ರಂಥ ಎರಡನೇ ತಲೆಮಾರಿನ ನಟರಿಗೇ. ಹಾಗೆ ನೋಡಿದರೆ ಅಜಿತ್‌ಗಿಂತಲೂ ವಿಜಯ್ ಅಮ್ಮನ ಪಾಲಿಗೆ ಆಪ್ತ. ಆದರೆ ಅಜಿತ್‌ನನ್ನೇ ಅಮ್ಮ ಆಯ್ಕೆ ಮಾಡಿಕೊಳ್ಳಲು ಆತನ ಜನಪರ ಸಿನಿಮಾ ಇಮೇಜ್ ಒಂದೇ ಕಾರಣವೆಂಬುದು ಕುಹಕಿಗಳ ವಾದ.

ಸಿನಿಮಾಗಳಲ್ಲಿ 'ಬಡವರ ಬಂಧು' ಥರದ ಪಾತ್ರ ನಟಿಸುವುದಕ್ಕೂ ತಮಿಳುನಾಡಿನಂಥ ರಾಜ್ಯವೊಂದಕ್ಕೆ ಮುಖ್ಯಮಂತ್ರಿಯಾಗುವುದಕ್ಕೂ ಇರುವ ವ್ಯತ್ಯಾಸ ತಮಿಳು ತಲೆಗಳಿಗೆಲ್ಲಿ ಅರ್ಥವಾಗಲು ಸಾಧ್ಯ? ಇಂಥ ವದಂತಿ ಹಬ್ಬಿಸಿ ಒಂದಷ್ಟು ಟಿಆರ್‌ಪಿ ಗಳಿಸಬಹುದಷ್ಟೇ ಹೊರತು ಇದ್ಯಾವುದೂ ಆಗುಹೋಗುವುದಂತೂ ಅಲ್ಲವಲ್ಲ. ಯಾರ್‍ಯಾರದೋ ತಲೆಗೆ ಏನೇನೋ ಹೊಳೆದಾಕ್ಷಣ ಅದನ್ನು ಅಮ್ಮ ಕೇಳಬೇಕಲ್ಲ. ಅಂಥಾ ಕರುಣಾನಿಧಿ ಮತ್ತಾತನ ಮಕ್ಕಳೆದುರು ಅಣ್ಣಾ ಡಿಎಂಕೆಯಂಥ ದ್ರಾವಿಡ ಪಕ್ಷವೊಂದನ್ನು ಮುನ್ನಡೆಸುವುದೆಂದರೆ ತಮಾಷೆಯೆ?

ನಿತ್ರಾಣವಸ್ಥೆಯಲ್ಲೇ ತೂರಾಡುತ್ತಿದ್ದರು. ಪೋಯೆಸ್ ಗಾರ್ಡನ್ ಬಾಲ್ಕನಿಯ ಸಾರ್ವಜನಿಕ ದರ್ಶನವಂತೂ ಇಲ್ಲವೇ ಇಲ್ಲ. ತೀರ ಇತ್ತೀಚೆಗೆ ಚೆನ್ನೈ ಮೆಟ್ರೋದ ಉದ್ಘಾಟನೆಯನ್ನು ಭಾರೀ ಅದ್ದೂರಿಯಾಗೇ ಸರ್ಕಾರ ಹಮ್ಮಿಕೊಂಡಿತ್ತಾದರೂ ಕೊನೇ ಗಳಿಗೆಯಲ್ಲಿ ಕೈಕೊಟ್ಟ ಅಮ್ಮ ಕೊನೆಗೂ ಮೆಟ್ರೋ ಉದ್ಘಾಟನೆ ಮಾಡಿದ್ದು 'ವೀಡಿಯೋ ಕಾನ್ಫರೆನ್ಸ್'ನ ಮೂಲಕವೇ...!

## ನಿರ್ಜೀವ ಆಕೃತಿ?

ಇದು ಕಳೆದ ಒಂದೂವರೆ ವರ್ಷದಿಂದಲೂ ಜನ ಕಂಡರಿತ ಅಮ್ಮನ ಅನಾರೋಗ್ಯದ ಕೆಲ ಚಿತ್ರಣಗಳಷ್ಟೆ. ನಿಜಕ್ಕೂ ಲೀವರ್ ಟ್ರಾನ್ಸ್‌ಪ್ಲಾಂಟ್‌ನ ಅಗತ್ಯವಿದೆಯೆ? ಅಥವಾ ಕಿಡ್ನಿ ಕಸಿಗೀಡಾಗಲೇಬೇಕಾ? ಕೇವಲ ಜ್ವರ ಅಥವಾ ಜಲಹೀನತೆಯೇ ಆಗಿದ್ದರೆ ಏಕಿಷ್ಟು ನಿಗೂಢ ಮತ್ತು ನಿಸ್ತೇಜ...? ಇತ್ಯಾದಿ ಏನೊಂದಕ್ಕೂ ಉತ್ತರವಿಲ್ಲ. ಅಣ್ಣಾ ಡಿಎಂಕೆಯ ವಕ್ತಾರೆ ಸರಸ್ವತಿ ನೀಡಿದ ಹೇಳಿಕೆಯೇ ವಿಚಿತ್ರವೆನಿಸುತ್ತದೆ. ಆಕೆಯ ಪ್ರಕಾರ 'ಗವರ್ನರ್ ಆಸ್ಪತ್ರೆಗೆ ಭೇಟಿ ಕೊಟ್ಟು ಹಣ್ಣು ಕೊಟ್ಟರಂತೆ. ಮಾತಾಡಿಯೂ ಬಂದರಂತೆ! ದಿನದ ಇಪ್ಪತ್ನಾಲ್ಕು ಗಂಟೆಯಲ್ಲಿ ಅಮ್ಮ 22 ಗಂಟೆಗಳಷ್ಟು ಬಿಡುವಿಲ್ಲದೆ ದುಡಿಯುತ್ತಿದ್ದದ್ದೇ ಅನಾರೋಗ್ಯಕ್ಕೆ ಕಾರಣವಂತೆ. ಸದ್ಯ ಅವರಿಗೆ ವಿಶ್ರಾಂತಿಯ ಅಗತ್ಯವಿದೆಯಾದ್ದರಿಂದ ಬೇರೆ ಯಾವುದೇ ಸಮಸ್ಯೆಯಿಲ್ಲ' ಎಂಬುದು ತಮಿಳುನಾಡು ಎಐಎಡಿಎಂಕೆ ವಕ್ತಾರೆ ಸರಸ್ವತಿಯ ಹೇಳಿಕೆ.


ತಮಾಷೆಯೆಂದರೆ ಈ ವಕ್ತಾರೆ ಸರಸ್ವತಿ ಕೂಡ ಈತನಕ ಅಪೋಲೋ ಆಸ್ಪತ್ರೆಯ ಗೇಟಿನೊಳಕ್ಕೂ ಕಾಲಿಡಲು ಸಾಧ್ಯವಾಗಿಲ್ಲ. ಇಡೀ ಆಸ್ಪತ್ರೆ ಸುತ್ತ ಅದೆಂಥಾ ಸರ್ಪಗಾವಲೆಂದರೆ ದಿನಂಪ್ರತಿ ಬಂದುಹೋಗುತ್ತಿದ್ದ ರೋಗಿಗಳಿಗೂ ಆಸ್ಪತ್ರೆ ಮುಕ್ತವಿಲ್ಲ. ತೀರ ಹೆಚ್ಚೆಂದರೆ ಆಸ್ಪತ್ರೆಯ ಆಂಬುಲೆನ್ಸ್‌ಗಳಷ್ಟೇ ಒಳಹೊಕ್ಕಲು ಸಾಧ್ಯ. ಇನ್ನೂ ಅಪರೂಪವೆಂಬಂತೆ ಗಾಲಿ ಕುರ್ಚಿಯಲ್ಲಿ ಕೂತ ರೋಗಿಗಳಿಗೋ ವಯೋವೃದ್ಧರಿಗೋ ಮಾತ್ರವೇ ಆಸ್ಪತ್ರೆ ಪ್ರವೇಶ. ಇಡೀ ಆಸ್ಪತ್ರೆ ಪೂರ್ತಿಯಾಗಿ ಅಮ್ಮನೇ ಆವರಿಸಿದಂತಿದೆ. ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ, ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ತಿರುನಾವುಕ್ಕರಸು, ತಮಿಳುನಾಡು ಬಿಜೆಪಿ ಅಧ್ಯಕ್ಷೆ ತಮಿಳ್ ಇಸೈ ಸೌಂದರರಾಜನ್ ಮುಂತಾದವರು ಕೂಡ ಐಸಿಯುನ ಒಳಹೊಕ್ಕಲು ಸಾಧ್ಯವಾಗದೇ ಗಾಜಿನ ರಂಧ್ರದ ಮೂಲಕವಷ್ಟೇ ದರ್ಶನ ಪಡೆದು ಬರುತ್ತಿದ್ದಾರೆ.

ಹಾಸಿಗೆಯ ಮೇಲೆ ಆಕೃತಿಯೊಂದು ನಿರ್ಜೀವವಾಗಿ ಬಿದ್ದುಕೊಂಡಂತಿದೆ ಅಮ್ಮನ ಸದ್ಯದ ಐಸಿಯೂ ಪರಿಸ್ಥಿತಿ. ಇದನ್ನು ಸೂಕ್ಷ್ಮವಾಗೇ ಗ್ರಹಿಸಿದ ಡಿಎಂಕೆ ನಾಯಕ ಕರುಣಾನಿಧಿ "ತಮಿಳುನಾಡು ಮುಖ್ಯಮಂತ್ರಿಗಳ ಆರೋಗ್ಯದ ಕುರಿತಂತೆ ಸರ್ಕಾರ ಪಾರದರ್ಶಕವಾಗಿಲ್ಲದ್ದನ್ನು ನೋಡುತ್ತಿದ್ದರೆ ಏನನ್ನೋ ಮುಚ್ಚಿಡುವಂತಿದೆ" ಎಂದದ್ದು ಸುಮ್ಮನೇನಲ್ಲ. 2015ರ ಸೆಪ್ಟೆಂಬರ್ 27ಕ್ಕೆ ಪರಪ್ಪನ ಅಗ್ರಹಾರ ಜೈಲಿಂದ ಹೊರಬಿದ್ದ ಅಮ್ಮನಿಗೆ ಅದೇನಾಯಿತೋ ಬಲ್ಲವರ್‍ಯಾರು?

## ಪೆಥಿಡಿನ್!

ತೆಹಲ್ಕಾ ಮತ್ತು ಟೆಲಿಗ್ರಾಫ್ ಪತ್ರಿಕೆಗಳು ಹೊರಗೆಡಹಿದ ಜಯಲಲಿತಾ ಅನಾರೋಗ್ಯದ ಮರ್ಮವೊಂದು ಇಡೀ ಪರಿಸ್ಥಿತಿಗೇ ಹಿಡಿದ ಕನ್ನಡಿಯೇ? ಗೊತ್ತಾಗುತ್ತಿಲ್ಲ. ಲೀವರ್ ಅಂದರೆ ಪಿತ್ತಕೋಶ ಮತ್ತು ಮೂತ್ರಪಿಂಡಗಳು ವಿಫಲಗೊಳ್ಳಲು ಮುಖ್ಯ ಕಾರಣವೇ ಪೆಥಿಡಿನ್ (Pethidine) ಎಂಬ ನೋವು ನಿವಾರಕ ಮಾತ್ರೆ. ಸಾಮಾನ್ಯವಾಗಿ ಗಾಯದಿಂದಲೋ ಪೆಟ್ಟಿನಿಂದಲೋ ಆದ ದೈಹಿಕನೋವಿಗಿಂತಲೂ ಹೆಚ್ಚಾಗಿ ಮನೋವ್ಯಾಧಿ ಸಂಬಂಧಿ ಮೈಗ್ರೇನ್, ಖಿನ್ನತೆ, ನಿದ್ರಾಹೀನತೆ- ಇತ್ಯಾದಿಗಳಿಗೇ ಪೆಥಿಡಿನ್ ಹೆಚ್ಚು ಬಳಕೆಯಾಗುತ್ತಿದೆ. ಯಾರಿಗೂ ಹೇಳಿಕೊಳ್ಳಲಾಗದ ಮನೋವ್ಯಥೆ, ಏಕಾಂತ, ದುಃಖ, ಕೂಡಿಟ್ಟ ಸಂಪತ್ತೇನಾಗುತ್ತೋ ಎಂಬ ಆತಂಕ, ಯಾರನ್ನೂ ನಂಬಲಾಗದ ಅತಂತ್ರ. ಇತ್ಯಾದಿಗಳೇ ಮನೋವ್ಯಥೆಗೂ ಮನೋಖಿನ್ನತೆಗೂ ನಿದ್ರಾಹೀನತೆಗೂ ವಿನಾಕಾರಣದ ಆತಂಕಕ್ಕೂ ಕಾರಣವಂತೆ.

ಅದು ಜಯಲಲಿತಾರ ಸುದೀರ್ಘ ಬದುಕಿನ ಏಕಾಂತದ ಫಲವೇ? ಯಾರನ್ನೂ ನಂಬಲಾಗದ ಮನಸ್ಥಿತಿಯ ಸಂಕೇತವೇ? ನಂಬಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ದ್ರೋಹವೆಸಗಿದ್ದರ ಫಲಶೃತಿಯೇ? ಜಯಲಲಿತಾ ಧೈರ್ಯವಂತೆ ನಿಜ. ದಿಟ್ಟ ಹೆಣ್ಣುಮಗಳೆಂಬುದೂ ಸತ್ಯ. ತಮಿಳುನಾಡಿಗೆ ಆಕೆ ನೀಡಿದ ಕೊಡುಗೆಯೂ ಅಪಾರ. ಈತನಕ ತಮಿಳುನಾಡು ಕಂಡ ಮುಖ್ಯಮಂತ್ರಿಗಳ ಪೈಕಿ ಆಕೆಯಂಥ ದಿಟ್ಟ ಆಡಳಿತಗಾರ್ತಿಯನ್ನ, ಧೈರ್ಯವಂತೆಯನ್ನು ಮತ್ತೊಬ್ಬರಲ್ಲಿ ಕಾಣಲು ಸಾಧ್ಯವೇ ಇಲ್ಲ. ಸಿನಿಮಾದ ಜನಪ್ರಿಯತೆ ಮತ್ತು ಗ್ಲಾಮರ್ ಜೊತೆಗೆ ಮುಖ್ಯಮಂತ್ರಿಗಿರಿ ಹುಟ್ಟಿಹಾಕುವ ಏಕಾಂತಕ್ಕೆ ಹೇಗೆ ಆಕೆಯ ಗಾಡ್‌ಫಾದರ್ ಎಂಜಿಆರ್ ಬಲಿಯಾದರೋ ಹಾಗೆಯೇ ಜಯಲಲಿತಾ ಕೂಡ ಪೆಥಿಡಿನ್‌ರ ಮೊರೆ ಹೋಗಲೇಬೇಕಾಯಿತೆ?


ಪನ್ನೀರ್ ಸೆಲ್ವಂ



ಚೆನ್ನೈನ ಅಪೋಲೋ ಆಸ್ಪತ್ರೆ ಶುರುವಾಗಿದ್ದು 1984ರಲ್ಲಿ. ಆಗ ತಮಿಳುನಾಡನ್ನಾಳುತ್ತಿದ್ದ ಎಂಜಿಆರ್ ಇಂಥದ್ದೇ ಜೀವನಶೈಲಿ ಮತ್ತು ನಿಗೂಢ ಬದುಕಿನ ಫಲವಾಗಿ ಇದೇ ರೀತಿಯಲ್ಲಿ ಅಪೋಲೋ ಆಸ್ಪತ್ರೆಗೆ ದಾಖಲಾದರು. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆಂದು ಅವರನ್ನು ಅಮೆರಿಕಕ್ಕೆ ಸಾಗಿಸಲಾಯ್ತು. ಅವರದ್ದೂ ಇದೇ ಪೆಥಿಡಿನ್ ಕಾರಣದ ಕಿಡ್ನಿ ವೈಫಲ್ಯವೆ. ಬಹುಶಃ ಅಮೆರಿಕದ ಟೆಕ್ಸಾಸ್‌ನಲ್ಲಿ ಹೆಚ್ಚಿನ ಚಿಕಿತ್ಸೆಯೆಂದು ಹದಿನೈದು ದಿನಗಳ ಕಾಲ ಅವರು 'ಬದುಕಿದ್ದಾರಾ ನಿರ್ಜೀವಗೊಂಡಿದ್ದಾರಾ' ಎಂಬುದನ್ನೇ ಮುಚ್ಚಿಡಲಾಗಿತ್ತು. ಎಂಜಿಆರ್ ಆಸ್ಪತ್ರೆಯಿಂದ ಜೀವಂತ ಹೊರಬರಲೇ ಇಲ್ಲ!

ಈಗಲೂ ಅಷ್ಟೇ. ಅದೇ ಚೆನ್ನೈನ ಅಪೋಲೋ ಆಸ್ಪತ್ರೆ. ಹಳೇ ಗೆಳತಿ ಶಶಿಕಲಾ ನಟರಾಜನ್ ಮತ್ತು ತಮಿಳುನಾಡು ಸರ್ಕಾರದ ಮಾಜಿ ಮುಖ್ಯ ಕಾರ್ಯದರ್ಶಿ ಶೀಲಾ ಬಾಲಕೃಷ್ಣನ್ ಎಂಬಿಬ್ಬರು ಪರಮಾಪ್ತರ ಹೊರತಾಗಿ ಬೇರೆ ಯಾರಿಗೂ ಆಸ್ಪತ್ರೆ ಪ್ರವೇಶವಿಲ್ಲ. ಅಪೋಲೋ ಮುಖ್ಯಸ್ಥ ಸುಬ್ಬಯ್ಯ ವಿಶ್ವನಾಥನ್ ಪ್ರತಿನಿತ್ಯ ಹೇಳಿಕೆಯನ್ನೇನೋ ಹೊರಡಿಸುತ್ತಿದ್ದಾರೆ. ಜ್ವರ ಮತ್ತು ಡೀ ಹೈಡ್ರೇಷನ್‌ನಿಂದಾಗಿ ಅಮ್ಮ ಬಳಲಿದ್ದಾರೆಂದೂ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಸಿಂಗಾಪುರಕ್ಕೋ ಅಥವಾ ಅಮೆರಿಕದ ಟೆಕ್ಸಾಸ್‌ಗೋ ಕರೆದೊಯ್ಯಬೇಕಾದ ಅಗತ್ಯವೇ ಇಲ್ಲವೆಂದೂ ಆಣೆ ಪ್ರಮಾಣ ಮಾಡುತ್ತಾರೆ. ಬಹುಶಃ ವಿದೇಶಕ್ಕೇನಾದರೂ ಒಯ್ದು ಬಿಟ್ಟರೆ ಬೇರೊಬ್ಬ ಮುಖ್ಯಮಂತ್ರಿಯನ್ನು ನೇಮಿಸಬೇಕಾದೀತೆಂಬ ಅಳುಕೂ ಇರಬಹುದೇನೊ!

ಎಷ್ಟೆಂದರೂ ಸತ್ಯವನ್ನು ಮುಚ್ಚಿಡಲಾಗುವುದಿಲ್ಲವಲ್ಲ? ವಿದೇಶಕ್ಕೊಯ್ಯುವುದಕ್ಕೆ ಬದಲಾಗಿ ಅಲ್ಲಿಂದಲೇ ಪರಿಣಿತ ವೈದ್ಯರನ್ನು ಇಲ್ಲಿಗೆ ಕರೆಸಿಕೊಳ್ಳುವುದು ಹೊಸತಂತ್ರ.


ಇದಕ್ಕೆ ಪುರಾವೆಯೆಂಬಂತೆ ಬ್ರಿಟನ್‌ನ ಅಂಗಕಸಿತಜ್ಞ ಡಾಕ್ಟರ್ ರಿಚರ್ಡ್ ಬೀಲ್ಸ್ ವಿಶೇಷ ವಿಮಾನವೊಂದರಲ್ಲಿ ತಮ್ಮದೇ ಪರಿಣಿತರ ತಂಡದೊಂದಿಗೆ ಚೆನ್ನೈನ ಅಪೋಲೋಗೆ ಬಂದಿಳಿದಿದ್ದಾರೆ. Dr. Richard Beale ಯುಕೆಯಿಂದ ವಿಶೇಷ ಚಿಕಿತ್ಸೆಗೆಂದು ಬಂದಿದ್ದನ್ನು ಅಪೋಲೋ ಮುಖ್ಯಸ್ಥ ಸುಬ್ಬಯ್ಯ ವಿಶ್ವನಾಥನ್ ತಮ್ಮ ಹೇಳಿಕೆಯ ಮೂಲಕವೇ ಒಪ್ಪಿಕೊಂಡಾಗಿದೆ.

ಇತ್ತ ತಮಿಳುನಾಡು ರಾಜ್ಯಪಾಲರು ಹೊರಡಿಸಿದ ವಿಶೇಷ ಹೇಳಿಕೆ ಕೂಡ ಸದ್ಯಕ್ಕೆ ಅಮ್ಮ ಆಸ್ಪತ್ರೆಯಿಂದ ಹೊರಬರುವುದು ಕಷ್ಟವೆಂಬುದನ್ನೇ ಸಾರಿ ಹೇಳುತ್ತದೆ. ಅದು ಜಯಲಲಿತಾ ಹೊಂದಿದ್ದ ಗೃಹಖಾತೆ, ಅರಣ್ಯ ಕಂದಾಯ ಇತ್ಯಾದಿ ಇಲಾಖೆಗಳೆಲ್ಲವನ್ನೂ ಜಯಾ ಉತ್ತರಾಧಿಕಾರಿ ಪನ್ನೀರ್‌ಸೆಲ್ವಂರಿಗೆ ವಹಿಸಿಕೊಟ್ಟದ್ದು!

ಅಂದರೆ ಅಮ್ಮನ ಕೋರಿಕೆಯ ಮೇರೆಗೇ ಅವರು ಹೊಂದಿದ್ದ ಖಾತೆಗಳೆಲ್ಲವನ್ನೂ ಪನ್ನೀರ್‌ಸೆಲ್ವಂಗೆ ವಹಿಸಿದ್ದಾರಂತೆ. ಇದರರ್ಥ ಸದ್ಯಕ್ಕೆ ಅಮ್ಮ ಆಸ್ಪತ್ರೆಯಿಂದ ಹೊರಬರುವ ಲಕ್ಷಣಗಳಿಲ್ಲ. ಅದ್ಯಾವತ್ತು ಆಸ್ಪತ್ರೆಯಿಂದ ಹೊರಬೀಳಬಹುದೆಂಬುದಕ್ಕೂ ಉತ್ತರವಿಲ್ಲ. ಜೀವಂತ ಹೊರಬಹುದೆಂಬುದಕ್ಕೂ ಯಾರಲ್ಲೂ ಮಾತುಗಳಿಲ್ಲ. ಎಂಜಿಆರ್ ಅಂತ್ಯದ ಹಾಗೆಯೇ ಅಮ್ಮನ ಅಂತ್ಯವಾಗದಿರಲೆಂದು ಆ ದೇವರಲ್ಲಿ ಪ್ರಾರ್ಥಿಸುವುದರ ಹೊರತಾಗಿ ಬೇರಾವ ದಾರಿಯೂ ತೋಚುತ್ತಿಲ್ಲ...


■ ರಾ. ಸೋಮನಾಥ್




ಶಶಿಕಲಾ ನಟರಾಜನ್



# ಶೀಲಾ ಬಾಲಕೃಷ್ಣನ್ ಎಂಬ 'ಅಮ್ಮಾ ಭಾಗ-2'


ಶೀಲಾ ಬಾಲಕೃಷ್ಣನ್

ಸದ್ಯ ಪನ್ನೀರ್‌ಸೆಲ್ವಂಗೆ ಸಂಪುಟಸಭೆಯ ನಾಯಕತ್ವ ವಹಿಸಿ ತನ್ನೆಲ್ಲಾ ಖಾತೆಗಳನ್ನು ಜಯಾ ವಹಿಸಿಕೊಟ್ಟಿರಬಹುದು. ಹಾಗೆಂದ ಮಾತ್ರಕ್ಕೇ ಪನ್ನೀರ್‌ಸೆಲ್ವಂನನ್ನು ಅಮ್ಮನ ಉತ್ತರಾಧಿಕಾರಿಯೆನ್ನಲಾಗದು. ತಮಿಳು ಪುಂಗವರ್‍ಯಾರೂ ಅದನ್ನು ಒಪ್ಪುವುದೂ ಕಷ್ಟ. ಹಾಗಾದರೆ ಹಳೇ ಗೆಳತಿ ಶಶಿಕಲಾ ನಟರಾಜನ್ನೇ ಅಮ್ಮನ ಉತ್ತರಾಧಿಕಾರಿಯೆ?

ಊಹ್ಞೂಂ, ಸದ್ಯ ಅಮ್ಮನ ಉತ್ತರಾಧಿಕಾರಿಯೆಂದು ಬಹುತೇಕರು ಲೆಕ್ಕ ಹಾಕುತ್ತಿರುವುದು ಶೀಲಾ ಬಾಲಕೃಷ್ಣನ್ ಎಂಬ ಕೇರಳ ಮೂಲದ ನಿವೃತ್ತ ಐಎಎಸ್ ಅಧಿಕಾರಿಣಿಯನ್ನು. 1976ರ ಬ್ಯಾಚಿನ ಐಎಎಸ್ ಅಧಿಕಾರಿಣಿಯಾಗಿ ತಮಿಳುನಾಡಿಗೆ ಕಾಲಿಟ್ಟ ಶೀಲಾ ಬಾಲಕೃಷ್ಣನ್ ಮಹಾಚತುರೆ, ಕಾರ್ಯತಂತ್ರ ನಿಪುಣೆ ಮತ್ತು ಪ್ರಳಯಾಂತಕಿ. ಮೂಲತಃ ಕೇರಳದ ತಿರುವಂತಪುರದ ಈಕೆ ತಮಿಳುನಾಡು ಕೇಡರ್‌ನ ಮತ್ತೊಬ್ಬ ಐಎಎಸ್ ಬಾಲಕೃಷ್ಣನ ಪತ್ನಿ. 1977ರಲ್ಲಿ ತಂಜಾವೂರಿನ ಉಪವಿಭಾಗಾಧಿಕಾರಿಯಾಗಿ ಸೇರಿದ್ದೇ ಕೊನೆ. ಮತ್ತೆಂದೂ ಹಿಂತಿರುಗಿ ನೋಡಲಿಲ್ಲ. 1983ರಲ್ಲಿ ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯಾಗಿ ಮೆರೆದ ಕಾರ್ಯ ಸಾಮರ್ಥ್ಯಕ್ಕೆ ಅದರ ಮರುವರ್ಷವೇ ಕೈಗಾರಿಕಾ ಮತ್ತು ವಾಣಿಜ್ಯ ಖಾತೆಯಂಥ ಪ್ರತಿಷ್ಠಿತ ಇಲಾಖೆಗೆ ಸೆಕ್ರೆಟರಿಯಾದಳು.

2001ರಲ್ಲಿ ಜಯಲಲಿತಾ ಮುಖ್ಯಮಂತ್ರಿಯಾಗಿದ್ದೇ ಶೀಲಾ ಅದೃಷ್ಟ ಖುಲಾಯಿಸಿತು. ಮುಖ್ಯಮಂತ್ರಿಗಳ ವಿಶೇಷಾಧಿಕಾರಿಯಾದಳು. 2006ರಲ್ಲಿ ಡಿಎಂಕೆ ಅಧಿಕಾರಕ್ಕೆ ಬಂದಮೇಲೆ ಸೇಲಂಗೆ ಎತ್ತಂಗಡಿ ಮಾಡಲಾಯಿತಾದರೂ ಅದರ ಮರುವರ್ಷವೇ ಮತ್ತೆ ಚೆನ್ನೈಗೆ ವಾಪಸ್ಸಾಗಿದ್ದಳು. ಹೆಂಡತಿ ಅಮ್ಮನ ಆಪ್ತಳಾದರೆ ಗಂಡ ಬಾಲಕೃಷ್ಣನ್‌ಗೆ ಕರುಣಾನಿಧಿಯೇ ಅಪ್ಪ!


2011ರಲ್ಲಿ ಮತ್ತೆ ಜಯಲಲಿತಾ ಮುಖ್ಯಮಂತ್ರಿಯಾಗಿದ್ದೇ ಶೀಲಾಗೆ ಇನ್ನಿಲ್ಲದ ಡಿಮ್ಯಾಂಡು. 2012ರಲ್ಲಿ ಮುಖ್ಯ ಕಾರ್ಯದರ್ಶಿಯಾಗಿದ್ದ ದೇವೇಂದ್ರ ನಾಥ್ ಸಾರಂಗಿ ನಿವೃತ್ತರಾಗಿದ್ದಾಗ ಸೀನಿಯಾರಿಟಿ ಪ್ರಕಾರ ಗಂಡ ಬಾಲಕೃಷ್ಣನ್ ಮುಖ್ಯ ಕಾರ್ಯದರ್ಶಿಯಾಗಬೇಕಿತ್ತಾದರೂ ಅಮ್ಮ ಆಯ್ಕೆ ಮಾಡಿಕೊಂಡದ್ದು ಶೀಲಾಳನ್ನೇ. 2014ರಲ್ಲಿ ನಿವೃತ್ತಿಯಾಗುವ ತನಕ ಶೀಲಾ ತಮಿಳುನಾಡಿನ ಮುಖ್ಯ ಕಾರ್ಯದರ್ಶಿಯೇ. ನಿವೃತ್ತಿಯಾದ ನಂತರವೂ ಶೀಲಾ ಅಮ್ಮನ ಪಾಲಿಗೆ ಅದೆಷ್ಟು ಆತ್ಮೀಯಳಾಗಿದ್ದಳೆಂದರೆ ಆಕೆಗೆಂದೇ ಮುಖ್ಯಮಂತ್ರಿಗಳ 'ವಿಶೇಷ ಸಲಹೆಗಾರ'ಳೆಂಬ ವಿಶಿಷ್ಟ ಹುದ್ದೆಯೊಂದನ್ನು ಸೃಷ್ಟಿಸಿದ ಅಮ್ಮ ಸದಾ ತಮ್ಮ ಬಳಿಯೆ ಇರುವಂತೆ ನೋಡಿಕೊಂಡರು.

ಬಹುಶಃ ಶಶಿಕಲಾ ನಟರಾಜನ್‌ಗೆ ಪರ್ಯಾಯವಾಗಿ ಅಮ್ಮ ಈಕೆಯನ್ನು ಬೆಳೆಸಿದ್ದರೆ ಅಥವಾ ಶಶಿಕಲಾ ಸೇರಿದಂತೆ ಎಲ್ಲರನ್ನೂ ಶೀಲಾಳೇ ಸಂಭಾಳಿಸುತ್ತಿದ್ದಳೇ, ಜಯಾ ಪಾಲಿಗೆ ಈಕೆಯ ಅತೀದೊಡ್ಡ ಶಕ್ತಿಯಂತಿದ್ದಳೆ. ಇಡೀ ಪಕ್ಷ ಮಾತ್ರವಲ್ಲದೆ ಸರ್ಕಾರವೂ ಸೇರಿದಂತೆ ಸಕಲವನ್ನೂ ನಿಭಾಯಿಸಬಲ್ಲ ಚಾತುರ್ಯ ಈಕೆಗಿದ್ದುದೇ ಅಮ್ಮ ಈಕೆಯನ್ನು ಅಷ್ಟೊಂದು ಅವಲಂಬಿಸಲು ಕಾರಣವಾಯಿತೆ? ಸದ್ಯ ಜಯಾ ಹಾಸಿಗೆ ಹಿಡಿದಿದ್ದರೆ ಅಮ್ಮನ ಬದಲಿಗೆ ಆದೇಶಗಳೆಲ್ಲ ಜಾರಿಯಾಗುತ್ತಿರುವುದು ಶೀಲಾ ಬಾಲಕೃಷ್ಣನ್ನಳ ಮೂಲಕವೇ. ಅಮ್ಮನ ನಂತರ ಅಪ್ಪ ಬರಲು ಬಿಡಬೇಕಲ್ಲ, ಮತ್ತೊಬ್ಬ ಅಮ್ಮನೇ ಆಗಬೇಕು. ಅದಕ್ಕೆ 'ಅಮ್ಮಾ' ಭಾಗ-2 ಎಂಬಂತೆ ರೂಪುಗೊಂಡವಳು ಶೀಲಾ ಬಾಲಕೃಷ್ಣನ್. ಆಡಳಿತ ಗೊತ್ತು ತಲೆಯಲ್ಲಿ ಕ್ರಿಮಿನಲ್ ಐಡಿಯಾ ಸಕತ್ತು...!

ಗಂಡಹೆಂಡಿರ ಜಗಳ ಉಂಡು ಮಲಗೋ ತನಕ ಅನ್ನೋ ಮಾತೊಂದಿದೆ. ಆದರೆ ಅದ್ಯಾಕೋ ಚಿತ್ರದುರ್ಗದ ಈ ಪೊಲಿಟಿಕಲ್ ದಂಪತಿಗಳ ವಿಚಾರದಲ್ಲಿ ಅದು ಮಲಗಿದರೂ ಮುಗಿಯುತ್ತಿಲ್ಲ, ಎದ್ದರೂ ಮುಗಿಯುತ್ತಿಲ್ಲ. ಅಷ್ಟಕ್ಕೂ ಆ ದಂಪತಿ ಜೋಡಿ ಸಾಮಾನ್ಯವಾದದ್ದೇನಲ್ಲ. ಒಂದು ಕಾಲಕ್ಕೆ ಮುರುಘಾ ಮಠದ ಚುಕ್ಕಾಣಿಯನ್ನೇ ಹಿಡಿದು ಕೂತಿದ್ದ, ಚಿತ್ರದುರ್ಗದ ರಾಜಕಾರಣವನ್ನೇ ಅಲ್ಲಾಡಿಸಿದ್ದ, ಈಗಲೂ ಅಧಿಕಾರದ ಚಲಾವಣೆಯಲ್ಲಿರುವ ಜೋಡಿ ಅದು. ನೋ ಡೌಟ್, ಮಾಜಿ ಶಾಸಕ ಬಸವರಾಜು ಮತ್ತವನ ಮಡದಿ ಜಿಲ್ಲಾ ಪಂಚಾಯತ್ ಹಾಲಿ ಅಧ್ಯಕ್ಷೆ ಸೌಭಾಗ್ಯಮ್ಮನದೇ ಈ ಸ್ಟೋರಿ!


ಎಲ್ಲವೂ ನೆಟ್ಟಗಿದ್ದಿದ್ದರೆ ಸೌಭಾಗ್ಯ ಮತ್ತು ಬಸವರಾಜನ್‌ದು ಆದರ್ಶ ರಾಜಕಾರಣ ಜೋಡಿ ಎನ್ನಿಸಿಕೊಳ್ಳಬೇಕಿತ್ತು. ಆದರೆ ಸೌಭಾಗ್ಯಳ ಒಳಗಿರುವ ಅಧಿಕಾರ ದಾಹದ ಮಹತ್ವಾಕಾಂಕ್ಷೆ ಆಕೆಯ ಸಂಸಾರವನ್ನೇ ಛಿದ್ರ ಮಾಡುವ ಹಂತಕ್ಕೆ ತಂದು ನಿಲ್ಲಿಸಿದೆ. ಆಕೆ ಈ ಬಾರಿ ಜಿಲ್ಲಾ ಪಂಚಾಯತ್ ಎಲೆಕ್ಷನ್‌ನಲ್ಲಿ ಗೆದ್ದು, ಮುರುಘಾ ಶರಣರ ಹೈಡ್ರಾಮಾದ ಹೊರತಾಗಿಯೂ ಅಧ್ಯಕ್ಷೆ ಗಾದಿಯೇರಿದ ನಂತರ ಗಂಡ ಬಸವರಾಜ್‌ನಿಂದ ಅಂತರ ಕಾಯ್ದುಕೊಳ್ಳುತ್ತಿದ್ದಾಳೆ ಅನ್ನೋ ಮಾತಿಗೆ ಹಲವು ಪುಷ್ಟಿ ಸಿಗುತ್ತಿವೆ. ಹಾಗೆ ನೋಡಿದರೆ ಸೌಭಾಗ್ಯ ಎಂಬ ಸಾಧಾರಣ ಮಹಿಳೆಗೆ ಪೊಲಿಟಿಕಲ್ ಚಹರೆಯನ್ನು ಒದಗಿಸಿದ್ದೇ ಆಕೆಯ ಗಂಡ ಬಸವರಾಜನ್. ಅದನ್ನೂ ಆತ ಮಾಡಿದ್ದು ತನ್ನ ಸ್ವಾರ್ಥಕ್ಕೋಸ್ಕರ. ಆದರೆ ಈಗ ಅದೇ ಬಸವರಾಜನ್ ಹೆಂಡತಿಯ ದರ್ಬಾರು ಕಂಡು ರೋಸಿಹೋಗಿ ಬೆಂಗಳೂರು ಸೇರಿಕೊಂಡಿದ್ದರೆ ಸೌಭಾಗ್ಯಮ್ಮ ಚಿತ್ರದುರ್ಗದಲ್ಲಿ ವಿಪರೀತ ಮಿನುಗುತ್ತಿದ್ದಾಳೆ. ಬಸವರಾಜನ್ ಬೆಂಗಳೂರು ಸೇರಿಕೊಂಡಿರೋದಕ್ಕೆ ನಾನಾ ಕಾರಣಗಳು ಸುಳಿದಾಡುತ್ತಿವೆಯಾದರೂ ಮೊನ್ನೆ ವಿಧಾನಸೌಧದಲ್ಲಿ ಸೌಭಾಗ್ಯ ವರ್ತಿಸಿದ ರೀತಿ ಹೊಸದೊಂದು ಕತೆಯನ್ನೇ ಹುಟ್ಟುಹಾಕಿದೆ.

ಇತ್ತೀಚೆಗೆ ಈಕೆ ಜಿ.ಪಂ. ಅಧ್ಯಕ್ಷೆ ಆಗಿದ್ದೇ ತಡ ಮಂತ್ರಿ ಆಂಜನೇಯರ ಆಜೂಬಾಜೂ ಈಕೆಯದೇ ಹವಾ. ಅದೂ ಎಷ್ಟರಮಟ್ಟಿಗೆ ಎಂದರೆ ಇತ್ತೀಚೆಗೆ ಬೆಂಗಳೂರಿನ ವಿಧಾನಸೌಧದಲ್ಲಿ, ಸರ್ಕಾರದ ರಾಜ್ಯಮಟ್ಟದ ವಿವಿಧ ಇಲಾಖೆಯ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ. ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ವ್ಯಕ್ತವಾಯಿತು. ಅಂದಿನ ಈ ಸಭೆಯಲ್ಲಿ ಮುಖ್ಯಮಂತ್ರಿ, ಸಂಬಂಧಪಟ್ಟ ಇಲಾಖೆಯ ಮಂತ್ರಿ, ಸರ್ಕಾರದ ಮುಖ್ಯಕಾರ್ಯದರ್ಶಿ ಮತ್ತು ಇಲಾಖೆಯ ಕಾರ್ಯದರ್ಶಿಗಳು ಮಾತ್ರ ಭಾಗವಹಿಸಬಹುದಾಗಿತ್ತು. ಆದರೆ ಅವತ್ತು ಮಂತ್ರಿ ಆಂಜನೇಯರೊಂದಿಗೆ ಸೌಭಾಗ್ಯ ಕೂಡಾ ಸಭೆಗೆ ಎಂಟ್ರಿ ಕೊಟ್ಟಿದ್ದಳು. ಐ.ಎ.ಎಸ್ ಅಧಿಕಾರಿಗಳಿಗೆ ಆಘಾತವಾದರೂ ಮಂತ್ರಿ ಆಂಜನೇಯರ ಮುಖ ನೋಡಿ ಸುಮ್ಮನಾಗಿದ್ದರು. ಸೌಭಾಗ್ಯ ಅಷ್ಟಕ್ಕೇ ಸುಮ್ಮನಾಗದೆ ಅಧಿಕಾರಿಗಳಿಗೆ, ಕಾರ್ಯದರ್ಶಿಗಳಿಗೆ ಸಲಹೆ ನೀಡತೊಡಗಿದ್ದಳು. ಆಗಲೂ ಯಾರೂ ತುಟಿ ಎರಡು ಮಾಡಲಿಲ್ಲ. ಮೀಟಿಂಗ್ ಮುಗಿದನಂತರ, ಮಿನಿಟ್ಸ್ ರೆಕಾರ್ಡ್ ಮಾಡುವವರೆದುರು ಪ್ರತ್ಯಕ್ಷಳಾಗಿ "ನಾನು ಕೊಟ್ಟ ಸಲಹೆಗಳನ್ನು ರೆಕಾರ್ಡ್ ಮಾಡಿದ್ದಿರಾ?" ಎನ್ನುವ ಅಹಂಕಾರದ ಪ್ರಶ್ನೆ ಸೌಭಾಗ್ಯಮ್ಮ ಎಸೆದಾಗಲೇ ಅಧಿಕಾರಿಗಳ ಸಹನೆಯ ಕಟ್ಟೆಯೊಡೆದದ್ದು. "ನೀವು ಮಂತ್ರಿ ಕಡೆಯವರು ಅಂತಾ ಸುಮ್ಮನಿದ್ದೆವು. ನೀವು ಸಭೆಗೆ ಬರುವ ಹಾಗೇ ಇಲ್ಲ, ಇಲ್ಲಿ ಯಾವ ಪ್ರೊಟೋಕಾಲೂ ಇಲ್ಲ, ಇದು ಇಲಾಖೆಯ ಪ್ರಗತಿ ಪರಿಶೀಲನಾ ಸಭೆ, ನೀವ್ಯಾರು?" ಅಂತ ತರಾಟೆಗೆ ತೆಗೆದುಕೊಂಡಿದ್ದರು. ಯಾವಾಗ ಇಂತಹ ಪ್ರಶ್ನೆ ಎದುರಾಯಿತೊ ಆಗ ಸೌಭಾಗ್ಯ ಮೆತ್ತಗೆ ಅಲ್ಲಿಂದ ಕಾಲ್ಕಿತ್ತಳು. ಆದರೆ ಅಷ್ಟರಲ್ಲಾಗಲೆ ಮಂತ್ರಿ ಆಂಜನೇಯರೇಕೆ ಈಕೆಗೆ ಇಷ್ಟೊಂದು ಮಹತ್ವ ಕೊಡುತ್ತಿದ್ದಾರೆ ಅನ್ನೋ ವಿಚಾರವಾಗಿ ಅಂತೆಕಂತೆಗಳು ಹುಟ್ಟಿಕೊಂಡಿದ್ದವು.



## ಚಿತ್ರದುರ್ಗ

# ಸೌಭಾಗ್ಯ-ಬಸವರಾಜನ್ ದಾಂಪತ್ಯದಲ್ಲಿ ಬಿರುಕು?



ಜಿ.ಪಂ. ಚುನಾವಣೆ ನಡೆದು ಸೌಭಾಗ್ಯ ಬಸವರಾಜನ್ ಅಧ್ಯಕ್ಷೆಯಾದ ನಂತರದಲ್ಲಿ ಬಸವರಾಜನ್ ಹೆಂಡತಿಯೊಂದಿಗೆ ಮುನಿಸಿಕೊಂಡು ಬೆಂಗಳೂರು ಸೇರಿರುವುದಕ್ಕೂ, ಜಿಲ್ಲಾ ಉಸ್ತುವಾರಿ ಮಂತ್ರಿ ಆಂಜನೇಯರ ಆಸುಪಾಸಿನಲ್ಲೇ ಸೌಭಾಗ್ಯ ಸುತ್ತಾಡಿಕೊಂಡು ಸ್ಥಳೀಯ ಶಾಸಕರನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದಂತೆ ಜಿಲ್ಲೆಯಲ್ಲಿ ಮೆರೆದಾಡುತ್ತಿರುವುದಕ್ಕೂ ಏನು ಲಿಂಕುಗಳಿವೆಯೋ ಗೊತ್ತಿಲ್ಲ. ಆದರೆ ಸೌಭಾಗ್ಯಳಿಗೆ ಒಂದು ಪೊಲಿಟಿಕಲ್ ಮೈಲೇಜ್ ದಕ್ಕಿಸಿಕೊಡಲು ಬಸವರಾಜನ್ ಮಾಡಿದ ಸಾಲವಿದೆಯಲ್ಲ ಅದನ್ನು ತೀರಿಸುವ ಸಲುವಾಗಿ ಬೆಂಗಳೂರಿನ ಆಸ್ತಿ ಮಾರಾಟ ಮಾಡಲು ಚಿತ್ರದುರ್ಗ ತೊರೆದಿದ್ದಾನೆನ್ನುವುದು ಸದ್ಯದ ಮಟ್ಟಿಗೆ ಕೇಳಿಬರುತ್ತಿರುವ ಮಾತು. ಕಾರಣ ಏನೇ ಇರಬಹುದು, ಬಸವರಾಜನ್ ಚಿತ್ರದುರ್ಗದಲ್ಲಿ ಕಾಣೆಸಿಕೊಂಡು ಇಲ್ಲಿಗೆ ಬರೋಬ್ಬರಿ ಮೂರು ತಿಂಗಳೇ ಸರಿದುಹೋಗಿವೆ. ಆದರೂ ಸೌಭಾಗ್ಯ ಅದೊಂದು ಇಶ್ಶೂವೇ ಅಲ್ಲವೆನ್ನುವಂತೆ ತನ್ನ ಪಾಡಿಗೆ ತಾನು ದರ್ಬಾರು ಮುಂದುವರೆಸಿರೋದನ್ನು ಕಂಡ ಜನ ಇವರಿಬ್ಬರ ನಡುವೆ ಎಲ್ಲವೂ ಸರಿ ಇಲ್ಲ ಅನ್ನೋ ಮಾತು ಹೇಳುತ್ತಿದ್ದಾರೆ.

ಹಾಗೆ ನೋಡಿದರೆ ಈ ಬಸವರಾಜನ್ ಮತ್ತು ಸೌಭ... ಬಸವರಾಜನ್ ದಂಪತಿಗಳು ಚಿತ್ರದುರ್ಗ ಜಿ... ರಾಜಕಾರಣದಲ್ಲಿ ರಾಜಕೀಯ ಆದರ್ಶ ದಂಪತಿಗಳಾಗ... ಲಕ್ಷಣಗಳಿದ್ದವು. ಅಂಥದೊಂದು ಕಾಲವೂ ಇ... 1991ರಲ್ಲಿ ಬಸವರಾಜನ್‌ನೊಂದಿಗೆ ಮದುವೆಯಾಗಿ ಮ... ಅಂಗಳದಲ್ಲಿ ಸಂಸಾರ ಹೂಡಿದ ದಿನದಿಂದಲೇ ... ಅಬ್ಬೇಪಾರಿ ಬದುಕಿನ ಹಪಾಹಪಿಯನ್ನು ಮರೆತೇಬಿಟ್ಟ... ಮುರುಘಾಮಠಕ್ಕೆ ಓರ್ವ ಜಗದ್ಗುರುವಿದ್ದರೂ ಮ... ಆಡಳಿತಾಧಿಕಾರಿ ಬಸವರಾಜನ್‌ನೇ ಮಠದಲ್ಲಿ ಸೂ... ಸುಪ್ರೀಮೋ ಆಗಿಬಿಟ್ಟ. ಮಠದೊಳಗೆ ಗಂಡನ ಸೂ... ಸುಪ್ರೀಮೋ ಖದರು ನೋಡಿ ಸೌಭಾಗ್ಯಳಲ್ಲೂ ಸಾ... ಕನಸುಗಳು ಚಿಗುರತೊಡಗಿದವು.

ಮುರುಘಾಮಠ ವಿರಕ್ತ ಪರಂಪರೆ... ಶೂನ್ಯಪೀಠವಾಗಿದ್ದರೂ ಬಸವರಾಜನ್ ಮತ್ತು ಸೌಭ... ಸಂಸಾರ ರಥ ಮಠದ ಅಂಗಳದಲ್ಲೇ ಬಿ... ಹೊರಳಾಡತೊಡಗಿತು. ಅದು ಸಲ್ಲದು, ನಮ್ಮದು ವಿ... ಪರಂಪರೆಯ ಮಠ ಎನ್ನುವ ಒಂದೇ ಒಂದು ಸೊಲ್ಲ... ಶರಣ ಶಿವಮೂರ್ತಿಗಳ ಎತ್ತದಿದ್ದುದು ದುರಂತವೇ ... ಕಾರಣವಿಷ್ಟೆ, ಹಿಂದಿದ್ದ ಶಿವಮೂರ್ತಿ ಮಲ್ಲಿಕಾಜು... ಜಗದ್ಗುರುಗಳು ತಮ್ಮ ತರುವಾಯ ಉತ್ತರಾಧಿಕಾರಿ ... ನೇಮಕ ಮಾಡಲು ಬಸವರಾಜನ್‌ನನ್ನು ಆ... ಮಾಡಿಟ್ಟುಕೊಂಡಿದ್ದರು. ಅಷ್ಟರಲ್ಲಾಗಲೆ ಆತ ಸೌಭಾ... ಸಹವಾಸಕ್ಕೆ ಬಿದ್ದು ವಿರಕ್ತನಾಗುವ ಯಾವ ಭರವಸೆಯ... ಉಳಿಸಿರಲಿಲ್ಲ. ಹಾಗಾಗಿ ಮುಂದೆ ಯಾರನ್ನು ಉತ್ತರಾಧಿ... ಮಾಡಬೇಕು ಅಂತ ನೀನೇ ನಿರ್ಧರಿಸು ಅನ್ನೋ ಆಯ್ಕೆ... ಬಸವರಾಜನ್‌ಗೆ ಕೊಟ್ಟಿದ್ದರು. ಆಗ ಕಾವಿ ಹಾ... ಒಣಬದುಕು ಬೇಡ, ಆದರೆ ಮಠದ ಆಸ್ತಿ ಅಧಿ... ಬೇಕು ಎಂಬ ಪ್ಲಾನ್ ಹೆಣೆದ ಬಸವರಾಜನ್ ... ಕೈಗೊಂಬೆಯಾಗುವಂತಹ ಆಸಾಮಿಗಾಗಿ ಹುಡು... ನಡೆಸಿದ್ದ. ಆ ಸಂದರ್ಭಕ್ಕೆ ಒದಗಿಬಂದವರೇ ಈ... ಶಿವಮೂರ್ತಿ ಶರಣರು. ತನ್ನನ್ನು ಮಠಾಧಿಪತಿ ಮಾ... ಋಣಕ್ಕೆ ಕಟ್ಟುಬಿದ್ದವರಂತೆ ಆತ ಮಠದಲ್ಲೇ ಸಂ... ಶುರು ಮಾಡಿದರೂ ಶಿವಮೂರ್ತಿ ಶರಣರು ಚಕಾರವೆತ್ತ...

ಇಲ್ಲಿಂದಲೇ ನೋಡಿ ಬಸವರಾಜನ್ ಮತ್ತು ಸೌಭ... ಬಸವರಾಜನ್ ದಂಪತಿಗಳ ನಡುವೆ ರಾಜಕರಣ ಸದ್ದಿ... ಎಂಟ್ರಿ ಕೊಟ್ಟಿದ್ದು. ಮಠದ ಜಗದ್ಗುರು ತಾನಾಗುತ್ತೇನೆ... ಕನಸುಮನಸಿನಲ್ಲೂ ಆಲೋಚಿಸದಿದ್ದ ಶಿವಮೂರ್ತಿಗ... ಬಸವರಾಜನ್ ದಯಪಾಲಿಸಿದ ಪಟ್ಟ ಏರಿದರು. ಅ... ಮಠದ ಪರಂಪರೆಯ ಆಚಾರವಿಚಾರ, ಮಠ ಮತ್ತು ... ಶಿಕ್ಷಣ ಸಂಸ್ಥೆ ಅಪಾರ ಆಸ್ತಿಪಾಸ್ತಿಗಳನ್ನು ನಿರ್ವಹಿ... ಚಾಣಾಕ್ಷತೆಯೇ ಬಂದಿರಲಿಲ್ಲ. ಅದು ಅವರ... ಬಸವರಾಜನ್‌ನ ಕೈಗೊಂಬೆಯಾಗಿಸಲು ಮತ್ತ... ನೆರವಾಯ್ತು. ಒಟ್ಟಿನಲ್ಲಿ ಶಿವಮೂರ್ತಿ ಶರಣರು ನೆಪಮ... ಗದ್ದುಗೆಯಲ್ಲಿದ್ದರೆ ಆಡಳಿತದ ಚುಕ್ಕಾಣಿ ಬಸವರಾ... ಕೈಯಲ್ಲಿ ಬಂಧಿಯಾಗಿತ್ತು.

ಇಂತಹ ವಾತಾವರಣದಲ್ಲಿ ಸೌಭಾಗ್ಯಳೆದೆಯಲ್ಲಿ ನಿಧಾ... ರಾಜಕಾರಣದ ಆಶೆ ತೌಡು ಕುಟ್ಟತೊಡಗಿತು. ಅ... ಆಗಿನ್ನೂ ಬಸವರಾಜನ್‌ಗೆ ರಾಜಕಾರಣ ಮಾಡ... ಇರಾದೆಯಿರಲಿಲ್ಲ. ಆದರೂ ಮಠದ ಪ್ರಭಾವದಿಂ... ತಾನೇ ಕಿಂಗ್‌ಮೇಕರ್ ಎನ್ನುವ ಅಹಂಕಾರವಂತೂ ... ಮಲ್ಲಿಕಾರ್ಜುನ ಶ್ರೀಗಳ ಪರಮ ಶಿಷ್ಯನಾಗಿ ಮ... ಒಕ್ಕರಿಸಿದ್ದ ಬಸವರಾಜನ್ ನಾಡಿನ ಹೇಮಾಹೇ... ರಾಜಕಾರಣಿಗಳನ್ನೇ ನೋಡಿದ್ದ. ವೀರೇಂದ್ರ ಪಾಟೀಲ... ಹಿಡಿದು, ಜೆ.ಹೆಚ್.ಪಟೇಲ್, ರಾಮಕೃಷ್ಣ ಹೆ... ದೇವೇಗೌಡರಂಥವರನ್ನು ಹತ್ತಿರದಿಂದ ಬಲ್ಲವನಾಗಿದ್ದ... ಮಠದ ಆಸುಪಾಸಿನ ರಾಜಕಾರಣ ಹಾಗೂ ಪಕ್ಷಗಳ... ಹತ್ತಿರದಿಂದ ಗಮನಿಸಿದ್ದ. ತನಗೆ ಬೇಕಾದವರಿಗೆ ... ಅಧ್ಯಕ್ಷರವರೆಗೂ ಮುಖಾಮುಖಿಯಾಗಿ ಶಿಫಾರಸ್ಸು ಮ... ಟಿಕೆಟ್ ತರುತ್ತಿದ್ದ. ಇಷ್ಟೆಲ್ಲಾ ಇದ್ದ ಮೇಲೆ ಬಸವರಾಜ...

⏭ 1...

## ಬಿಜ್ಜಳನ ದರ್ಬಾರು


12ನೇ ಶತಮಾನದಲ್ಲಿ ವಚನದ ಮೂಲಕ ಹೊಸದೊಂದು ಜಾತ್ಯತೀತ, ವೈಚಾರಿಕ, ಧಾರ್ಮಿಕ ಆವಿಷ್ಕಾರಕ್ಕೆ ಕೈಹಾಕಿದ ಶರಣ ಪರಂಪರೆ ಕ್ರಾಂತಿಯನ್ನು ಮಾಡುವ ಮೂಲಕ ವೈದಿಕರ ಶತ್ರುಗಳಾದರು. ಹಾಗೆ ಬಿಜ್ಜಳ ರಾಜ ಕೂಡ ವೈದಿಕರ ಪರವಾಗಿದ್ದುದಲ್ಲದೇ, ಶರಣ ಸಂಕುಲವನ್ನು ನಾಶಮಾಡಲು ಹೊರಟ. ಹಾಗಾಗಿಯೇ ಹರಳಯ್ಯ, ಮಧುವರಸರ ಕಣ್ಣು ಕೀಳಿಸಿ ಇಡೀ ಶರಣ ಸಂಕುಲವನ್ನೇ ಕಲ್ಯಾಣ ತೊರೆಯುವಂತೆ ಮಾಡಿದ. ಆ ಸಂದರ್ಭದಲ್ಲೇ ಬಸವಣ್ಣನಂತಹ ಬಸವಣ್ಣ ಕೂಡಾ ಸಿಟ್ಟಾದರು. ಆ ಸಿಟ್ಟು ಹೇಗಿತ್ತೆಂದರೆ, ಭೀಮ ಕವಿ ವಿರಚಿತ ಪುರಾಣದಲ್ಲಿ ಬರುವಂತೆ ಬಸವಣ್ಣನೇ ಬಿಜ್ಜಳನನ್ನು ಕೊಲ್ಲಲು ಮಲ್ಲ, ಬೊಮ್ಮಯ್ಯ, ಜಗದೇವ ಎನ್ನುವವರನ್ನು ನೇಮಕ ಮಾಡಿದರು.

ಇದನ್ನೆಲ್ಲ ಹೇಳುವ ಅಗತ್ಯವಿಲ್ಲ ಎಂದಲ್ಲಾ, ಖಂಡಿತಾ ಇದೆ. ಚಿತ್ರದುರ್ಗದ ಮುರುಘರಾಜೇಂದ್ರ ಮಠವಿದೆಯಲ್ಲ ಅದು ವಿರಕ್ತಮಠ. ಅದು ವೈಚಾರಿಕ ಕ್ರಾಂತಿ ಮಾಡಿದ ಬಸವಣ್ಣನ ಆದರ್ಶಗಳ ತಳಹದಿಯ ಮೇಲೆ ನಿರ್ಮಾಣವಾದ ಮಠ. ಇಂಥಾ ಮಠದ ಆದರ್ಶ, ಸಾತ್ವಿಕ ನೆಲೆಗಟ್ಟನ್ನೇ ಗಾಳಿಗೆ ತೂರಿ ಶರಣ ಸಂಕುಲವನ್ನೇ ನಾಶಮಾಡಹೊರಟ ಮಠದ ಆಡಳಿತಾಧಿಕಾರಿಯಾಗಿದ್ದ ಎಸ್.ಕೆ.ಬಸವರಾಜನ್ ತನ್ನ ಪುತ್ರನಿಗೆ ಬಿಜ್ಜಳ ಅಂತ ನಾಮಕರಣ ಮಾಡಿದ್ದಿದೆಯಲ್ಲಾ ಅದೇ ಅಚ್ಚರಿಯ ಸಂಗತಿ. ಮಠದಲ್ಲೇ ಹುಟ್ಟಿದ ಇವನ ಮಗ ಶರಣ ಸಮುದಾಯವನ್ನೇ ನಾಶ ಮಾಡುವ ಪಾತಕಕ್ಕೆ ಮುಹೂರ್ತ ಫಿಕ್ಸ್ ಮಾಡಿದ್ದ. ಬಿಜ್ಜಳನ ಹೆಸರು ಮಠದೊಳಗಿನ ತೊಟ್ಟಿಲು ತೂಗಿ ನಾಮಕರಣ ಮಾಡುವುದೆಂದರೇನು?

ಬಸವರಾಜನ್ ಮಗ ಹೆಸರಿಗೆ ತಕ್ಕಂತೆ ಬೆಳೆಯುತ್ತಿದ್ದಾನೆ. ಅವನು ತೆಗೆಸಿಕೊಂಡ ಫೋಟೋಗಳನ್ನು ಗಮನಿಸಿ. ವಿದ್ಯೆ ನೈವೇದ್ಯ, ಹಾರ್ಡ್‌ವೇರ್ ಡಿಪ್ಲೊಮಾ ಓದಿದ್ದಾನಾದರೂ ಓದಿನ ಅಗತ್ಯ ಅವನಿಗೆ ಬರುವುದೇ ಇಲ್ಲ. ಅಪ್ಪ ಅಮ್ಮ ಮಾಡಿಟ್ಟ ಮಠದ ಗಂಟು ಮಗನ ಚೆಲ್ಲಾಟಗಳಿಗೆ ನೀರಿನಂತೆ ಹರಿಯುತ್ತಿದೆ. ಐಶಾರಾಮಿ ಮನೆಯಲ್ಲಿ ವಾಸ, ಮಡಿಕೇರಿ-ಊಟಿಯಂತಹ ಸುಂದರ ತಾಣಗಳಲ್ಲಿ ಟ್ರಿಪ್ಪು, ತಿನ್ನಲು ಕೆಂಟುಕಿ ಚಿಕನ್, ಹುಡುಗಿಯರ ಹಿಂಡು, ಬಿಟ್ಟಿ ರೊಕ್ಕ ಶರಣರ ಶ್ರಮ ಸಂಸ್ಕೃತಿಗೆ ಮಸಿ ಬಳಿಯಲು ಎಷ್ಟು ಬೇಕು ಅಷ್ಟೆಲ್ಲಾ ದುರ್ಗುಣ ಬೆಳೆಸಿಕೊಂಡಿದ್ದಾನೆ. ಅಷ್ಟಕ್ಕೂ ಆತ ಖರ್ಚು ಮಾಡುತ್ತಿರುವುದು ಅಪ್ಪ ಬಸವರಾಜನ್ ರಣರಣ ಬೆವರು ಸುರಿಸಿದ ಆಸ್ತಿಯೇನಲ್ಲ, ಮಠದ ಭಕ್ತರ ಗಂಟು!


ಅಂದಹಾಗೆ ಅವನ ಪೂರ್ತಿ ಹೆಸರು ಬಿಜ್ಜಳ ಸೌಭಾಗ್ಯ. ಈ ಹೆಸರು ಮತ್ತು ಸರ್‌ನೇಮ್ ಕೇಳಿದರೇನೇ ಅಚ್ಚರಿಯಾಗುತ್ತದೆ. ಎಲ್ಲರೂ ಕಾಮನ್ನಾಗಿ ತಮ್ಮ ಹೆಸರಿನ ಮುಂದೆ ತಂದೆಯದೋ, ಮನೆತನದ್ದೋ ಹೆಸರು ಇಟ್ಟುಕೊಳ್ಳುವುದು ಮಾಮೂಲಿ. ಇಲ್ಲಿ ಬಿಜ್ಜಳನಿಗೆ ತಾಯಿಯ ಹೆಸರನ್ನೇ ಸರ್‌ನೇಮ್ ಮಾಡಿ ತಾವು ಸ್ತ್ರೀವಾದಿ ಪ್ರಗತಿಪರ ಕ್ರಾಂತಿಕಾರರು ಅನ್ನೋ ಪ್ರದರ್ಶನದ ತೆವಲು ಬಸವರಾಜನ್-ಸೌಭಾಗ್ಯ ದಂಪತಿಗೆ ಇದ್ದಂತಿದೆ. ಅದೇನೇ ಇರಲಿ, ಅಪ್ಪಾ ಅಮ್ಮನ ನಡುವೆ ಬಿರುಕು ಮೂಡಿ ಅಪ್ಪ ಬೆಂಗಳೂರು ಸೇರಿ ಮೂರುನಾಲ್ಕು ತಿಂಗಳಾದರೂ ಮಗ ಬಿಜ್ಜಳನಿಗೆ ಕೊಂಚ ಆತಂಕವಾದರೂ ಕಾಡಿದೆಯಾ ಅಂತಾ ನೋಡಿದರೆ ಖಂಡಿತ ಇಲ್ಲ. ಅದ್ಯಾವುದೂ ಅವನ ಗಮನಕ್ಕಿಲ್ಲ, ಅವನದೇನಿದ್ದರೂ ಮೋಜು ಮಸ್ತಿ. ಇಲ್ಲಿ ಪ್ರಕಟಿಸಿರುವ ಇವನ ಫೋಟೋ ನೋಡಿ ಇವನನ್ನು ತೂಕ ಮಾಡಿ.








ಬಿಜ್ಜಳನ ಮೋಜುಮಸ್ತಿ



# ಬಳ್ಳಾರಿ: ರೈತರ 'ತುಂಗೆ' ಕಾರ್ಖಾನೆಗಳಿಗೆ 'ಭದ್ರ'





ತುಂಗಭದ್ರ ಅಣೆಕಟ್ಟು ಮತ್ತು ಫ್ಯಾಕ್ಟರಿಗಳು

ರಾಜ್ಯದಲ್ಲಿ ಈ ಬಾರಿ ಬರ ಆವರಿಸುತ್ತಿದೆ. ಇದೇ ಸಂದರ್ಭದಲ್ಲಿ ಉತ್ತರ ಕರ್ನಾಟಕದಲ್ಲಿ ಮಹದಾಯಿ ನದಿ ನೀರು ವಿವಾದ, ದಕ್ಷಿಣದಲ್ಲಿ ಕಾವೇರಿ ನದಿ ನೀರು ವಿವಾದಗಳು ಕರ್ನಾಟಕವನ್ನು ಅನ್ಯಾಯದ ಬಾಣಲೆಯಲ್ಲಿ ಬೇಯಿಸುತ್ತಿವೆ. ಜನ ನಿರಂತರ ಹೋರಾಟದಲ್ಲಿದ್ದಾರೆ. ಈ ಆತಂಕಕ್ಕೆ ಇತ್ತೀಚೆಗೆ ತುಂಗಭದ್ರಾ ನದಿಯೂ ಸೇರಿಕೊಳ್ಳುತ್ತಿದೆ. ತುಂಗಭದ್ರ ನದಿ ನೀರಿನ ಪ್ರಮಾಣ ಈ ಬಾರಿ ತುಂಬಾ ಕಡಿಮೆಯಾಗಿದೆ. ಈ ಭಾಗದ ಮೂರು ಜಿಲ್ಲೆಗಳ (ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು) ರೈತರು ಬಿತ್ತನೆ ಮಾಡಿ ಬೆಳೆ ಒಣಗುತ್ತಿರುವುದರಿಂದ ನೀರಿಗಾಗಿ ಬಕಪಕ್ಷಿಯಂತೆ ಕಾಯುತ್ತಿದ್ದಾರೆ. ನೀರಿನ ಕೊರತೆಯೊಡ್ಡಿ ವಾಡಿಕೆಯಂತೆ ಬಿಡಬೇಕಾದ ನೀರು ಬಿಡದೆ ತಡೆದಿರುವ ತುಂಗಭದ್ರ ಆಡಳಿತ ಮಂಡಳಿ ಅಧಿಕಾರಿಗಳು ಮತ್ತು ರಾಜಕಾರಣಿಗಳು ಹಣದಾಸೆಗೆ ಹೊಸಪೇಟೆ ಸುತ್ತಮುತ್ತಲ ಖಾಸಗಿ ಕಾರ್ಖಾನೆಗಳಿಗೆ ಮಾತ್ರ ಭರಪೂರ ನೀರು ಹರಿಸುತ್ತಿದ್ದಾರೆ. ಸಹಜವಾಗಿ ಇದು ರೈತರಲ್ಲಿ ಆಕ್ರೋಶ ಮೂಡಿಸಿದ್ದು ತುಂಗಭದ್ರ ಮಂಡಳಿಯ ವಿರುದ್ಧ ಭಾರೀ ಹೋರಾಟಕ್ಕೆ ಸಜ್ಜಾಗುತ್ತಿದ್ದಾರೆ.

ತುಂಗಭದ್ರ ಜಲಾಶಯದಿಂದ ರಾಜ್ಯದ ರಾಯಚೂರು, ಬಳ್ಳಾರಿ, ಕೊಪ್ಪಳ ಜಿಲ್ಲೆಗಳ 3.5 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರು ಒದಗಿಸಲಾಗುತ್ತದೆ. ಜೊತೆಗೆ ಆಂಧ್ರಪ್ರದೇಶದ ಕರ್ನೂಲ, ಕಡಪ ಮತ್ತು ಅನಂತಪುರ ಜಿಲ್ಲೆಗಳ 1.4 ಲಕ್ಷ ಹೆಕ್ಟೇರ್ ಪ್ರದೇಶದ ಕೃಷಿ ಚಟುವಟಿಕೆಗಳಿಗೆ ಈ ಜಲಾಶಯ ನೀರುಣಿಸುತ್ತದೆ. ನಿಯಮದಂತೆ ಶೇ 65 ಕರ್ನಾಟಕಕ್ಕೆ ಮತ್ತು ಶೇ. 35 ರಷ್ಟು ಆಂಧ್ರಪ್ರದೇಶಕ್ಕೆ ಎಂದು ನಿರ್ಧಾರವಾಗಿತ್ತು. ಜೊತೆಗೆ ಕಾರ್ಖಾನೆಗಳಿಗೆ 2.5 ಟಿಎಂಸಿ ನೀರು ಕೊಡಬೇಕೆಂದು ನಿಯಮ ಹೇಳುತ್ತದೆ. ಅಲ್ಲದೆ ಮತ್ತೊಂದು ಪ್ರಮುಖ ನಿಯಮ, ಕಾರ್ಖಾನೆಗಳು ನೀರಿಗಾಗಿ ಪರ್ಯಾಯ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು ಎಂತಲೂ ಹೇಳುತ್ತದೆ. ಮಳೆ ನೀರು ಸಂಗ್ರಹಿಸಿಟ್ಟುಕೊಳ್ಳುವುದು, ತ್ಯಾಜ್ಯ ನೀರಿನ ಪುನರ್ಬಳಕೆ ಇತ್ಯಾದಿ ಇತ್ಯಾದಿ ಮಾರ್ಗೋಪಾಯಗಳನ್ನೂ ಆ ನಿಯಮ ಉಲ್ಲೇಖಿಸುತ್ತದೆ. ಇದಕ್ಕೆ ಸಾಕಷ್ಟು ಅವಕಾಶಗಳು ಕೂಡ ಈ ಭಾಗದಲ್ಲಿವೆ. ಕೃಷ್ಣ ನದಿ ಮತ್ತು ಆಲಮಟ್ಟಿ ಅಣೆಕಟ್ಟುನಿಂದ ಪ್ರತಿನಿತ್ಯ 5 ಲಕ್ಷ ಕ್ಯೂಸೆಕ್ಸ್ ನೀರು ವ್ಯರ್ಥವಾಗುತ್ತಿದ್ದು ಅದನ್ನು ಈ ಕಾರ್ಖಾನೆಗಳು ತಮ್ಮ ಸ್ವಂತ ಖರ್ಚಿನಲ್ಲಿ ಬಳಸಿಕೊಳ್ಳಬಹುದಾಗಿದೆ. ಆದರೆ ಈ ಕಾರ್ಖಾನೆಗಳು ಇದನ್ನೆಲ್ಲಾ ಮಾಡುತ್ತಿಲ್ಲ, ಬದಲಿಗೆ ಆಡಳಿತ ಮಂಡಳಿಯ ಅಧ್ಯಕ್ಷರು, ಕಾರ್ಯದರ್ಶಿಗಳಿಗೆ ಹಣದ ಆಮಿಷವೊಡ್ಡಿ ರಾಜಕಾರಣಿಗಳನ್ನು ಬುಟ್ಟಿಗೆ ಹಾಕಿಕೊಂಡು ನಿಯಮ ಉಲ್ಲಂಘಿಸಿ 10 ಟಿಎಂಸಿ ನೀರು ಪಡೆಯುತ್ತಿವೆ ಎಂತ ಸ್ವತಃ ರೈತರೇ ಆರೋಪಿಸಿದ್ದಾರೆ.


ಈ ಬಾರಿ ತುಂಗಭದ್ರ ಅಣೆಕಟ್ಟೆಯಲ್ಲಿ ಕೇವಲ 40 ಟಿಎಂಸಿಯಷ್ಟು ಮಾತ್ರ ನೀರಿದೆ. ಒಳಹರಿವು ಕೂಡ ತುಂಬಾ ಕಡಿಮೆ ಇದ್ದು ಕೇವಲ 500 ಕ್ಯೂಸೆಕ್ಸ್ ಆಸುಪಾಸಿನಲ್ಲಿದೆ. ಆದರೆ ಕಳೆದ ವರ್ಷದ ಇದೇ ಅವಧಿಯಲ್ಲಿ ಸುಮಾರು 73 ಟಿಎಂಸಿಯಷ್ಟು ನೀರಿತ್ತು ಮತ್ತು 2700 ಕ್ಯೂಸೆಕ್ಸ್ ನಷ್ಟು ಒಳಹರಿವು ಇತ್ತು. ಅಲ್ಲದೇ ಜಲಾಶಯದ ನಿರ್ಮಾಣ ವೇಳೆ 133 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯವಿದ್ದುದ್ದು ಈಗ ಹೂಳು ಪ್ರಮಾಣ ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗಿರುವ ಕಾರಣದಿಂದ ಕೇವಲ 100.844 ರಷ್ಟು ಮಾತ್ರ ಸಂಗ್ರಹ ಸಾಮರ್ಥ್ಯಕ್ಕೆ ಕುಸಿದಿದೆ.

ಆಡಳಿತ ಮಂಡಳಿಯು ಸುಳ್ಳುಲೆಕ್ಕಗಳನ್ನು ತೋರಿಸುತ್ತಿದೆ. ನಾಲೆಗೆ ನೀರು ಬಿಡುವಾಗ 5 ಸಾವಿರ ಕ್ಯೂಸೆಕ್ಸ್ ನೀರು ಬಿಡಬೇಕಾದಲ್ಲಿ ಕೇವಲ 3 ಸಾವಿರ ಕ್ಯೂಸೆಕ್ಸ್ ಬಿಟ್ಟು 5 ಸಾವಿರ ಕ್ಯೂಸೆಕ್ಸ್ ಎಂದು ಲೆಕ್ಕ ತೋರಿಸಿ ಉಳಿದ 2 ಸಾವಿರ ಕ್ಯೂಸೆಕ್ಸ್ ನೀರನ್ನು ಕಾರ್ಖಾನೆಗಳಿಗೆ ಅಕ್ರಮವಾಗಿ ನೀಡಲಾಗುತ್ತಿದೆ ಎಂದು ಸ್ಥಳೀಯ ರೈತರು ದೂರುತ್ತಿದ್ದಾರೆ. ಅಲ್ಲದೇ ಖಾಸಗಿ ಕಾರ್ಖಾನೆಗಳು ವರ್ಷಪೂರ್ತಿ ನೀರು ಪಡೆಯುತ್ತಿವೆ. ಕಾನೂನುಬಾಹಿರವಾಗಿ ಆಟೋಮ್ಯಾಟಿಕ್ ಪಂಪ್‌ಗಳನ್ನು ಅಳವಡಿಸಿಕೊಂಡಿದ್ದು ಅಣೆಕಟ್ಟೆಯಲ್ಲಿ ನೀರು ಕಡಿಮೆಯಾದರೂ ನೀರು ಪಡೆಯುತ್ತಿರುವುದು ರೈತರ ಆತಂಕಕ್ಕೆ ಕಾರಣವಾಗಿದೆ.

ಮುಖ್ಯವಾಗಿ ತೋರಣಗಲ್‌ನ ಜಿಂದಾಲ್ ಕಾರ್ಖಾನೆ, ಡಣಾಪುರದ ಬಿಎಂಎಂ ಕಾರ್ಖಾನೆ, ಬೇವಿನಹಳ್ಳಿಯ ಕಿರ್ಲೋಸ್ಕರ್, ಗಿಣಿಗೇರಾದ ಮೆ.ಕಲ್ಯಾಣಿ ಫೆರಸ್ ಲಿ, ಹರಿಹರ ಫಾಲಿಫೈಬರ್ಸ್ ಕಾರ್ಖಾನೆಗಳು ಅಕ್ರಮವಾಗಿ ನೀರು ಪಡೆಯುತ್ತಿರುವ ಕಾರ್ಖಾನೆಗಳಾಗಿವೆ. ಈ ಕಾರ್ಖಾನೆಗಳು ಪರಿಸರ ಮಾಲಿನ್ಯ ನಿಯಂತ್ರಣ ಮಾಡುವಲ್ಲಿ ಸಂಪೂರ್ಣ ವಿಫಲವಾಗಿದ್ದು ಎಲ್ಲಾ ಕಾನೂನುಗಳನ್ನು ಉಲ್ಲಂಘಿಸಿ ಪರಿಸರಕ್ಕೆ ಧಕ್ಕೆ ತರುತ್ತಿದ್ದಾವೆ. ನೀರು ಬಳಸಿದ ನಂತರ ಅದನ್ನು ಶುದ್ಧೀಕರಿಸದೇ ರಾಸಾಯನಿಕಯುಕ್ತ ತ್ಯಾಜ್ಯ ನೀರನ್ನು ನೇರವಾಗಿ ನದಿಗೆ ಹರಿಸುತ್ತಿರುವ ವಿರುದ್ಧ ಈ ಹಿಂದೆ ಹಲವಾರು ಪ್ರತಿಭಟನೆಗಳು ನಡೆದಿವೆ. ಅಲ್ಲದೆ ಕುಡಿಯುವ ನೀರಿಗೂ ಸಂಕಷ್ಟವಿರುವಾಗ, ಬೆಳೆಗಳಿಗೆ ನೀರಿಲ್ಲದೆ ಒಣಗುತ್ತಿರುವಾಗಲೂ ಈ ರೀತಿ ಫ್ಯಾಕ್ಟರಿಗಳು ನೇರವಾಗಿ ಮತ್ತು ಕಳ್ಳಮಾರ್ಗದಿಂದ ನೀರು ಪಡೆಯುತ್ತಿರುವುದರ ವಿರುದ್ಧ ಸ್ಥಳೀಯ ರೈತರು ಹಲವು ಬಾರಿ ಆ ಪಂಪ್‌ಗಳನ್ನು ಕಿತ್ತುಹಾಕಿದ್ದಾರೆ. ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ದೂರು ಸಹ ನೀಡಿದ್ದಾರೆ. ಆದರೆ ಈ ಎಲ್ಲಾ ಅಕ್ರಮಗಳಿಗೆ ಬಳ್ಳಾರಿ ಉಸ್ತುವಾರಿ ಮಂತ್ರಿ ಸಂತೋಷ್ ಲಾಡ್ ಸುಮ್ಮನಿರುವುದು ದುರದೃಷ್ಟಕರ.

ಇನ್ನು ತುಂಗಭದ್ರ ಆಡಳಿತ ಮಂಡಳಿಯ ವಿಚಾರಕ್ಕೆ ಬಂದರೆ ಇಲ್ಲಿರುವ ಅಧಿಕಾರಿಗಳೆಲ್ಲರೂ ಸುಳ್ಳು ಲೆಕ್ಕ ತೋರಿಸಿ ಹಣ ಬಾಚುವುದರಲ್ಲಿ ಬ್ಯುಸಿಯಾಗಿದ್ದಾರೆ. ಕಾರ್ಯದರ್ಶಿ ಡಿ.ರಂಗರೆಡ್ಡಿಯ ಅಧಿಕಾರಾವಧಿ ಕಳೆದ ವರ್ಷವೇ ಮುಗಿದಿದೆ. ನಿವೃತ್ತಿ ಆಗಬೇಕಿದ್ದ ಆತನನ್ನು ಫ್ಯಾಕ್ಟರಿಯವರ ಲಾಬಿಯಿಂದ ಇನ್ನೂ ಒಂದು ವರ್ಷ ಹೆಚ್ಚುವರಿ ಅಧಿಕಾರ ನೀಡಿ ಉಳಿಸಿಕೊಳ್ಳಲಾಗಿದೆ. ಕಾರ್ಖಾನೆಯ ಪರಮನಿಷ್ಠನಾದ ಈತನಿಗೆ ರೈತರ ಗೋಳು ಕಾಣುತ್ತಿಲ್ಲ. ಜೊತೆಗೆ ಈತನಿಂದಲೇ ಆಂಧ್ರ ಪ್ರದೇಶಕ್ಕೂ ಹೆಚ್ಚುವರಿ ನೀರು ಹರಿದುಹೋಗುತ್ತಿದೆ ಎಂದು ಜಿಲ್ಲೆಯ ರೈತರು ಆರೋಪಿಸಿದ್ದಾರೆ. ಆಂಧ್ರಕ್ಕೆ ನೀರು ಹರಿಯುವ ಬಲದಂಡೆ ನಾಲೆಯಲ್ಲಿದ್ದ ಸೂಪರ್ ಪ್ಯಾಸೇಜ್ ಹೆಸರಿನ 11 ತಡೆಗೋಡೆಗಳನ್ನು 4 ತಿಂಗಳ ಹಿಂದೆಯೇ ಒಡೆದುಹಾಕಲಾಗಿದ್ದು ಆಂಧ್ರಕ್ಕೆ ಹೆಚ್ಚು ನೀರು ಹರಿಯುತ್ತಿದೆ. ಇದು ಕರ್ನಾಟಕದ ಈ ಮೂರು ಜಿಲ್ಲೆಯ ರೈತರ ಪಾಲಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಅಧ್ಯಕ್ಷರಾಗುವವರು ಕರ್ನಾಟಕ, ಆಂಧ್ರ ಮತ್ತು ತೆಲಂಗಾಣ ಈ ಮೂರು ರಾಜ್ಯದವರಲ್ಲದವರನ್ನು ನೇಮಿಸಿದಾಗ ಈ ಅನ್ಯಾಯಕ್ಕೆ ತಡೆ ಬೀಳಬಹುದು ಎಂಬುದು ರೈತ ಮುಖಂಡರ ಆಶಯ.

ಇಷ್ಟೆಲ್ಲದರ ಜೊತೆಗೆ ಕೊಪ್ಪಳ ಜಿಲ್ಲೆಯ ಕನಕಗಿರಿ ಶಾಸಕ ಶಿವರಾಜ್ ತಂಗಡಗಿ ಕೂಡ ರೈತರಿಗೆ ವಂಚಿಸುತ್ತಿದ್ದಾನೆ. ಎಡದಂಡೆ ನಾಲೆಯಲ್ಲಿನ ಬಯಲು ಸೀಮೆಯಲ್ಲಿ ಇತ್ತೀಚೆಗೆ ದೊಡ್ಡ ಪ್ರಮಾಣದಲ್ಲಿ ಭೂಮಿ ಖರೀದಿಸಿದ್ದು ತನ್ನ ರಾಜಕೀಯ ಪ್ರಭಾವ ಬಳಸಿ ನೀರು ಪಡೆಯುತ್ತಿದ್ದಾನೆ. ಮುಂಚೆ ಆ ಭೂಮಿಗೆ ನೀರು ಕೊಡಲಾಗುತ್ತಿರಲಿಲ್ಲ, ಆದರೆ ಶಿವರಾಜ್ ತಂಗಡಗಿ ಭೂಮಿ ಖರೀದಿಸಿದ ನಂತರ ಬಲವಂತವಾಗಿ ನೀರು ಪಡೆಯಲಾಗುತ್ತಿದ್ದು ಇದರಿಂದ ನಮ್ಮ ಗದ್ದೆಗಳಿಗೆ ನೀರು ಸಾಲುತ್ತಿಲ್ಲ ಎಂದು ರೈತರು ಆರೋಪಿಸಿದ್ದಾರೆ.




ಈ ಬಾರಿ ತುಂಗಭದ್ರ ಆಡಳಿತ ಮಂಡಳಿ ಮತ್ತು ಸ್ವಜನಪಕ್ಷಪಾತ ರಾಜಕಾರಣದಿಂದಾಗಿ ಈ ಮೂರು ಜಿಲ್ಲೆಗಳಲ್ಲಿ ಶೇ. 40 ಭಾಗ ನಾಟಿ ಮಾಡಿಲ್ಲ, ನೀರಿನ ಕೊರತೆಯೇ ಇದಕ್ಕೆ ಮುಖ್ಯ ಕಾರಣ. ಬಿತ್ತನೆ ಮಾಡಿರುವ ಉಳಿದ ಶೇ. 60 ಭೂಮಿಗೂ ಸಹ ಸರಿಯಾಗಿ ನೀರು ಸಿಗದೆ ಮೋಸವಾಗುತ್ತಿದೆ. ಇದರಿಂದ ಬೇಸತ್ತ ರೈತರು ಹೋರಾಟವೊಂದೇ ಮಾರ್ಗವೆಂದು ಭಾವಿಸಿ ತುಂಗಭದ್ರ ಉಳಿಸಿ ಆಂದೋಲನ ಸಮಿತಿ ರಚಿಸಿದ್ದಾರೆ. ಕೊಪ್ಪಳದ ವಿಠ್ಠಪ್ಪ ಗೋರಂಟ್ಲಿ, ಡಿ.ಎಚ್.ಪೂಜಾರ್, ಜೆ.ಭಾರದ್ವಾಜ್, ಎಂ.ಆರ್.ವೆಂಕಟೇಶ್ ಮತ್ತಿತರರು ಇದರ ನೇತೃತ್ವ ವಹಿಸಿ ರೈತರನ್ನು ಹೋರಾಟಕ್ಕೆ ಅಣಿಗೊಳಿಸುತ್ತಿದ್ದಾರೆ. ಈ ಸಮಿತಿಯ ಜೊತೆಗೆ ಕರ್ನಾಟಕ ರಾಜ್ಯ ರೈತಸಂಘ ಮತ್ತು ಹಸಿರುಸೇನೆ ಕೂಡ ಹೋರಾಟಕ್ಕೆ ಇಳಿದಿದೆ. ಕೃಷಿಗೆ ಮತ್ತು ಕುಡಿಯುವುದಕ್ಕೆ ನೀರು ಒದಗಿಸಬೇಕು, ಫ್ಯಾಕ್ಟರಿಗಳಿಗೆ ಈ ಕೂಡಲೇ ನೀರು ನಿಲ್ಲಿಸಬೇಕು, ಕಾರ್ಖಾನೆಗಳು ಪರ್ಯಾಯ ಮಾರ್ಗ ಹುಡುಕಬೇಕು, ಸ್ವಾರ್ಥ-ಭ್ರಷ್ಟ ಅಧಿಕಾರಿಗಳು ತೊಲಗಬೇಕು ಮತ್ತು 3 ರಾಜ್ಯದವರನ್ನು ಹೊರತುಪಡಿಸಿ ಬೇರೆಯವರನ್ನು ತುಂಗಭದ್ರ ಆಡಳಿತ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಬೇಕೆಂಬ ಹಕ್ಕೊತ್ತಾಯಗಳನ್ನು ಹೋರಾಟಗಾರರು ಮುಂದಿಟ್ಟಿದ್ದಾರೆ. ನೀರು ಹೆಚ್ಚಿದ್ದಾಗ ಏನಾದರು ಮಾಡಿಕೊಳ್ಳಲಿ, ಆದರೆ ಕುಡಿಯಲು ಸಹ ನೀರಿಲ್ಲ, ಮಳೆ ಸರಿಯಾಗಿ ಆಗುತ್ತಿಲ್ಲ, ಇಂತಹ ಸಂದರ್ಭದಲ್ಲಿ ರೈತರ ಹಿತಕಾಯಬೇಕಾದ ಆಡಳಿತ ವರ್ಗ ಕಂಪನಿಗಳ ಏಜೆಂಟ್‌ರಂತೆ ವರ್ತಿಸುವುದನ್ನು ವಿರೋಧಿಸಿ ರೈತರು ರೊಚ್ಚಿಗೆದ್ದಿದ್ದಾರೆ.



ಹೋರಾಟಗಾರರಾದ ಡಿ.ಎಚ್ ಪೂಜಾರ್ ಮತ್ತು ಜೆ.ಭಾರದ್ವಜ್

■ ಮುತ್ತುರಾಜು


## ಲಂಕೇಶ್ ಪ್ರಕಾಶನದ ಪುಸ್ತಕಗಳು

### ಪಿ.ಲಂಕೇಶರ ಕೃತಿಗಳು

| ಕತೆ-ಕಾದಂಬರಿ | |
|---|---|
| ಮುಸ್ಸಂಜೆಯ ಕಥಾ ಪ್ರಸಂಗ | 250.00 |
| ಬಿರುಕು | 60.00 |
| ಅಕ್ಕ | 80.00 |
| ಮಂಜು ಕವಿದ ಸಂಜೆ | 85.00 |
| ಉಮಾಪತಿ ಸ್ಕಾಲರ್‌ಶಿಪ್ ಯಾತ್ರೆ | 70.00 |
| ಕಲ್ಲು ಕರಗುವ ಸಮಯ | 125.00 |
| ನಾನಲ್ಲ | 60.00 |
| ಕೆರೆಯ ನೀರನು ಕೆರೆಗೆ ಚೆಲ್ಲಿ | 50.00 |
| ಉಲ್ಲಂಘನೆ | 80.00 |

| ಲೇಖನಗಳ ಸಂಗ್ರಹಗಳು | |
|---|---|
| ಟೀಕೆ-ಟಿಪ್ಪಣಿ 1 | 200.00 |
| ಟೀಕೆ-ಟಿಪ್ಪಣಿ 2 | 200.00 |
| ಟೀಕೆ-ಟಿಪ್ಪಣಿ 3 | 200.00 |
| ಮರೆಯುವ ಮುನ್ನ-ಸಂಗ್ರಹ 1 | 150.00 |
| ಮರೆಯುವ ಮುನ್ನ-ಸಂಗ್ರಹ 2 | 150.00 |
| ಮರೆಯುವ ಮುನ್ನ-ಸಂಗ್ರಹ 3 | 150.00 |
| ಮನಕೆ ಕಾರಂಜಿಯ ಸ್ಪರ್ಶ | 150.00 |
| ಈ ನರಕ ಈ ಪುಲಕ | 125.00 |
| ಆಟ-ಜೂಜು-ಮೋಜು! | 150.00 |
| ಸಾಹಿತಿ ಸಾಹಿತ್ಯ ವಿಮರ್ಶೆ | 300.00 |
| ರೂಪಕ ಲೇಖಕರು | 70.00 |
| ಕಂಡದ್ದು ಕಂಡಹಾಗೆ | 100.00 |
| ಪ್ರಸ್ತುತ | 80.00 |
| ಪಾಂಚಾಲಿ | 150.00 |

| ಲಂಕೇಶ್‌ರ ಕವನ ಸಂಗ್ರಹಗಳು | |
|---|---|
| ನೀಲು ಕಾವ್ಯ -ಸಂಗ್ರಹ 1 | 150.00 |
| ನೀಲು ಕಾವ್ಯ -ಸಂಗ್ರಹ 2 | 150.00 |
| ನೀಲು ಕಾವ್ಯ -ಸಂಗ್ರಹ 3 | 200.00 |
| ಚಿತ್ರ ಸಮೂಹ | 90.00 |
| ಅಕ್ಷರ ಹೊಸ ಕಾವ್ಯ | 250.00 |
| ಪಾಪದ ಹೂಗಳು | 60.00 |

| ಆತ್ಮಕಥನ | |
|---|---|
| ಹುಳಿಮಾವಿನ ಮರ | 250.00 |

| ಲಂಕೇಶ್‌ರ ನಾಟಕಗಳು | |
|---|---|
| ಬಿರುಕು | 40.00 |
| ಸಂಕ್ರಾಂತಿ | 45.00 |
| ತೆರೆಗಳು | 50.00 |
| ಈಡಿಪಸ್ ಮತ್ತು ಅಂತಿಗೊನೆ | 60.00 |
| ಟಿ. ಪ್ರಸನ್ನನ ಗೃಹಸ್ಥಾಶ್ರಮ | 50.00 |
| ಗುಣಮುಖ | 30.00 |
| ಕ್ರಾಂತಿ ಬಂತು ಕ್ರಾಂತಿ | 40.00 |

ಹೆಚ್ಚಿನ ಮಾಹಿತಿಗಾಗಿ ಫೋನ್: 080-26676427

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

# ಇದು ಭೂಮಿ, ಅನ್ನ, ಆರೋಗ್ಯ ಮತ್ತು ಹಕ್ಕುಗ ಹೋರಾಟವೂ ಹೌದು

## ಜಿಗ್ನೇಶ್ ಮೇವಾನಿ

**ಚಲೋ ಉಡುಪಿ ಸಮಾವೇಶದಲ್ಲಿ ಗುಜರಾತ್ ದಲಿತ ಚಳವಳಿಯ ಹೊಸ ಸಂಚಲನ ಜಿಗ್ನೇಶ್ ಮೇವಾನಿಯವರು ಮಾಡಿದ ಭಾಷಣದ ಪೂರ್ಣಪಾಠ**

ನೂರ ಅರವತ್ತಕ್ಕೂ ಹೆಚ್ಚು ಸಂಘಟನೆಗಳು, ಈ ಸಂಘರ್ಷದ ಸಂಗಾತಿಗಳು ಮತ್ತು ಈ ಹೋರಾಟದಲ್ಲಿ ಭಾಗಿಯಾದ ನನ್ನೆಲ್ಲಾ ಆಕ್ಷತಮ್ಮಂದಿರು ಒಂದಾಗಿ ಸೇರಿ ಚಲೋ ಉಡುಪಿ ಎಂಬ ಐತಿಹಾಸಿಕ ಆಂದೋಲನವನ್ನು ಈ ಹಂತಕ್ಕೆ ರೂಪಿಸಿದ್ದೀರಿ. ಮೊದಲು ನಿಮ್ಮೆಲ್ಲರ ಈ ಶ್ರಮಕ್ಕೆ ನಾನು ಕ್ರಾಂತಿಕಾರಿ ಜೈ ಭೀಮ್ ಹೇಳುತ್ತೇನೆ.

ದೇಶದ ಹಿಂದೂತ್ವದ ಪ್ರಯೋಗಶಾಲೆಯಾದ ಗುಜರಾತಿನಿಂದ ಕರ್ನಾಟಕದ ಹಿಂದೂತ್ವದ ಪ್ರಯೋಗಶಾಲೆಯಾದ ಉಡುಪಿಗೆ ನಾನು ಗುಜರಾತಿನ ದಲಿತರು ಹೇಗೆ ಸಾವಿರಾರು ಸಂಖ್ಯೆಯಲ್ಲಿ ಸಿಡಿದೆದ್ದು ಸಂಘಟಿತರಾಗಿ ಬಿ.ಜೆ.ಪಿ ಮತ್ತು ಸಂಘಪರಿವಾರದವರ ಮುಖದ ಮೇಲೆ ಅಳಿಸಲಾಗದ ಪೆಟ್ಟು ಕೊಟ್ಟಿದ್ದಾರೆ ಎಂಬ ಸಂಗತಿ ತಿಳಿಸಲು ಇಂದು ಬಂದಿದ್ದೇನೆ. ಹಾಗೆಯೇ ಕರ್ನಾಟಕದ ದಲಿತ ಮತ್ತು ದಮನಿತರು ಸೇರಿ ಬಿ.ಜೆ.ಪಿ ಮತ್ತು ಸಂಘಪರಿವಾರದವರ ಮುಖದ ಮೇಲೆ ನೀಡಿರುವ ಹೊಡೆತಕ್ಕೆ ನಾನು ಅವರಿಗೆ ಕ್ರಾಂತಿಕಾರಿ ಜೈ ಭೀಮ್ ಅರ್ಪಿಸುತ್ತಿದ್ದೇನೆ.

ಸಂಗಾತಿಗಳೆ, ಇಂದು ನಾನು ಹಿಂದೂತ್ವದ ಪ್ರಯೋಗಶಾಲೆಯಾದ ಉಡುಪಿಯಲ್ಲಿ ನಾನು ಹಿಂದೂತ್ವವಾದಿ ಎಂಬುದಿರಲಿ ಕಡೇಪಕ್ಷ ನಾನೊಬ್ಬ ಹಿಂದೂ ಕೂಡ ಅಲ್ಲ ಎಂಬ ಸಂಗತಿಯನ್ನು ಹೇಳಲು ಬಂದಿದ್ದೇನೆ.

ನಾವು ಸಾವಿತ್ರಿ ಬಾಯಿಫುಲೆ, ಕ್ರಾಂತಿಕಾರಿ ಭಗತ್ ಸಿಂಗ್, ರಾಮಸ್ವಾಮಿ ಪೆರಿಯಾರ್ ಮತ್ತು ಡಾ. ಭೀಮ್ ರಾವ್ ಅಂಬೇಡ್ಕರ್ ಅವರ ವಿಚಾರಧಾರೆಗಳಲ್ಲಿ ನಂಬಿಕೆ ಹೊಂದಿರುವ ಭೀಮ ಸೈನಿಕರು. ನಾವು ಕೇವಲ ಆದಿವಾಸಿ, ಪರಿಶಿಷ್ಟ ಜಾತಿ/ಪಂಗಡ, ಹಿಂದುಳಿದವರ ಮತ್ತು ಅಲ್ಪಸಂಖ್ಯಾತ ಏಕತೆಯ ಕುರಿತು ಮಾತನಾಡುವ ಭೀಮ ಸೈನಿಕರು ಮಾತ್ರ ಅಲ್ಲ, ಬದಲಾಗಿ ನಾವು ಈ ಎಲ್ಲರ ಜೊತೆಗೆ ರೈತರು ಮತ್ತು ಕಾರ್ಮಿಕರ ಏಕತೆಯ ಕುರಿತು ಸಹ ಮಾತನಾಡುತ್ತೇವೆ.

ಇಂದು ದೇಶದಲ್ಲಿ ಚರ್ಚೆಯಾಗುತ್ತಿರುವ ಗುಜರಾತ್ ಮಾದರಿ ಇದೆಯಲ್ಲ ಅದು ಏನೂ ಅಲ್ಲ ಎಂದು ಹೇಳಲು ಬಂದಿದ್ದೇನೆ. ಈ ದೇಶದಲ್ಲಿ ನರೇಂದ್ರ ಮೋದಿ ನಾಗಾರಾಧಕ ಮಾತ್ರ ಅಲ್ಲ, ಬದಲಾಗಿ ಅದೊಂದು ನಾಗ ಮಂಡಲವಾಗಿದೆ. ಒಮ್ಮೊಮ್ಮೆ ಅವರು ಹೇಗೆ ನಾಗಸವಾರಿ ಮಾಡುತ್ತಾನೆ ಎಂದರೆ ತಾವೊಬ್ಬ ಅಂಬೇಡ್ಕರ್ ಭಕ್ತ ಎಂದು ಸಹ ಕರೆದುಕೊಳ್ಳುತ್ತಾರೆ.


ಆದರೆ ನಾವು ಅವರನ್ನು "ಅಣ್ಣಾ ಉನಾದ ಯಾವುದೇ ತಪ್ಪು ಮಾಡದ, ನಿರಪರಾಧಿ ದಲಿತ ಹುಡುಗರ ಚರ್ಮವನ್ನು ರಸ್ತೆಯಲ್ಲಿ ಚರ್ಮ ಸುಲಿವ ಹಾಗೆ ಹೊಡೆಯುತ್ತಿದ್ದಾಗ ಎಲ್ಲಿತ್ತು ನಿಮ್ಮ ಅಂಬೇಡ್ಕರ್ ಭಕ್ತಿ?" ಎಂದು ಕೇಳಿದರೆ ಅವರ ಬಳಿ ಯಾವ ಉತ್ತರವೂ ಇಲ್ಲ! ಆ ಕಾರಣಕ್ಕೆ ನಾವುಗಳು ಒಟ್ಟಾಗಿ ಸೇರಿ ಈ ದೇಶದ ನಾಗಮಂಡಲದ ಚಾಂಪಿಯನ್ ಮತ್ತು ನಾಗಾರಾಧಕನನ್ನು ಅಚ್ಛೆ ದಿನ್ ಎಲ್ಲಿವೆ? ಅದು ಎಲ್ಲಿ ಸಿಗುತ್ತದೆ? ಯಾವ ಮಾರುಕಟ್ಟೆಯಲ್ಲಿ ಅಚ್ಛೆ ದಿನ್ ಸಿಗುತ್ತವೆ ಹೇಳಿ ಎಂದು ಕೇಳಬೇಕಿದೆ.

ಸಂಗಾತಿಗಳೆ ಯಾವ ಗುಜರಾತ್ ಮಾದರಿಯ ಹೆಸರಿನಲ್ಲಿ ಇಡೀ ದೇಶವನ್ನು ವಂಚಿಸಲಾಗುತ್ತಿದೆಯೋ ಆ ಸುಳ್ಳಿನ ಪರದೆಯನ್ನು ಈ ದೇಶದ ದಲಿತರು, ಆದಿವಾಸಿಗಳು, ಹಿಂದುಳಿದ ವರ್ಗದ ಸಂಗಾತಿಗಳು, ರೈತರು, ಕಾರ್ಮಿಕರು ಸೇರಿ ಹರಿದುಹಾಕಬೇಕಿದೆ. ಹೇಗೆ ಗುಜರಾತಿನ ದಲಿತರು ಸಾವಿರಾರು ಸಂಖ್ಯೆಯಲ್ಲಿ ಸಿಡಿದೆದ್ದು ಹೋರಾಟದ ಹೊಸ ದಾರಿಯೊಂದನ್ನು ರೂಪಿಸಿಕೊಟ್ಟಿದ್ದಾರೋ ಅದೇ ರೀತಿ ಇಲ್ಲಿ ಸೇರಿರುವ ಎಲ್ಲಾ ಭೀಮ ಸೈನಿಕರು ಹೋರಾಟಕ್ಕೆ ಹೊಸ ಹೊಸ ದಾರಿಗಳನ್ನು ರೂಪಿಸುತ್ತಿದ್ದಾರೆ ಎಂದು ನಾನು ಭಾವಿಸುತ್ತೇನೆ.

ಸಂಗಾತಿಗಳೆ, ಗುಜರಾತಿನ ಅಥವಾ ಈ ದೇಶದ ದಲಿತ ಚಳವಳಿಯ ಇತಿಹಾಸದಲ್ಲಿ ಮೊದಲ ಬಾರಿಗೆ ಜುಲೈ 31 ರಂದು ಹಿಂದೂತ್ವದ ಪ್ರಯೋಗಶಾಲೆಯಾದ ಅಹಮದಾಬಾದಿನ ಭೂಮಿಯಲ್ಲಿ ನಡೆದ ದಲಿತ ಮಹಾ ಸಮ್ಮೇಳನದಲ್ಲಿ ಸಹಸ್ರಾರು ದಲಿತರು ಸಿಡಿದು ನಿಂತು ಇನ್ನು ಮುಂದೆ ನಮ್ಮ ಜೀವನದಲ್ಲಿ ನಾವು ಎಂದಿಗೂ ಮಲ ಹೊರುವುದಿಲ್ಲ, ಶೌಚದ ಗುಂಡಿಗಳಿಗೆ ಇಳಿಯುವುದಿಲ್ಲ, ಸತ್ತ ಪಶುಗಳ ವಿಲೇವಾರಿ ಕೆಲಸ ಮಾಡುವುದಿಲ್ಲ ಎಂದು ಬಾಬಾಸಾಹೇಬ್ ಅಂಬೇಡ್ಕರ್ ಹೆಸರಿನಲ್ಲಿ ಪ್ರತಿಜ್ಞೆ ಮಾಡಿದರು. ಸಂಗಾತಿಗಳೇ, ಸಾಮಾಜಿಕ ಕ್ರಾಂತಿಯ ಇತಿಹಾಸದಲ್ಲಿ ಇದೊಂದು ಮಹತ್ವಪೂರ್ಣ ಹೆಜ್ಜೆಯಾಗಿತ್ತು, ನಾನು ಉಡುಪಿಯಲ್ಲಿ ನಿಂತು ಕರ್ನಾಟಕ ಮಾತ್ರವಲ್ಲ, ಇಡೀ ದೇಶದ ದಲಿತ ಬಾಂಧವರಲ್ಲಿ ಕೇಳಿಕೊಳ್ಳುತ್ತೇನೆ. ಶೋಷಿತ ದಲಿತರೆಲ್ಲಾ ಒಟ್ಟಾಗಿ ಒಂದು ಆಂದೋಲನ ರೂಪಿಸಿಕೊಂಡು ಇನ್ನು ಮುಂದೆ ನಾವು ಮಲ ಹೊರುವುದಿಲ್ಲ ಎಂದು ಅಂಬೇಡ್ಕರ್ ಹೆಸರಿನಲ್ಲಿ ಪ್ರತಿಜ್ಞೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ನಮ್ಮ ನಡುವಿನ ದಲಿತ ಚಳವಳಿ ನಮ್ಮ ಆತ್ಮಗೌರವಕ್ಕಾಗಿ ನಡೆಯುತ್ತಿರುವ ಹೋರಾಟ, ದಲಿತರ ಸ್ವಾಭಿಮಾನಕ್ಕಾಗಿ ನಡೆಯುತ್ತಿರುವ ಹೋರಾಟ ಎಂಬ ನಂಬಿಕೆ ನಮಗಿದ್ದರೆ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ ಒಂದು ಮಾತನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ. ಅವರು "ಒಂದುವೇಳೆ ಹಸಿವಿನಿಂದ ಸಾಯುವ ಪರಿಸ್ಥಿತಿ ಬಂದರೆ ಸತ್ತರೂ ಚಿಂತೆಯಿಲ್ಲ ಆದರೆ ಈ ದೇಶದ ಜಾತಿ ವ್ಯವಸ್ಥೆ ನಮ್ಮ ಮೇಲೆ ಹೇರಿರುವ ಮಲ ಹೊರುವ, ಶೌಚ ಗುಂಡಿ ಶುಚಿಗೊಳಿಸುವ ನಮ್ಮನ್ನು ಅಸ್ಪೃಶ್ಯರಾಗಿ ಗುರುತಿಸುವ ನೀಚ ಮಟ್ಟದ ಕೆಲಸಗಳನ್ನು ಬಿಡಬೇಕು" ಎಂದಿದ್ದರು. ಈ ಮಾತನ್ನು ನಾವು ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕಿದೆ.

ಕೆಲವು ಹಿಂದೂತ್ವದ ಮತಾಂಧರು ಸಾಮಾಜಿಕ ಜಾಲತಾಣದಲ್ಲಿ ದಲಿತರು ಮತ್ತು ಅಲ್ಪಸಂಖ್ಯಾತರು ಸೇರಿ ಮಾಡುತ್ತಿರುವ ಈ ಆಂದೋಲನದಿಂದ ಉಡುಪಿ ಮಲಿನವಾಗುತ್ತಿದೆ ನಾವು ಅದನ್ನು ಸ್ವಚ್ಛ ಮಾಡಬೇಕು ಎಂದು ಹೇಳುತ್ತಿದ್ದಾರೆ. ನಾನು ಇಲ್ಲಿಂದಲೇ ಅವರಿಗೆ "ನಾವು ನಿಮ್ಮ ತಲೆಯಲ್ಲಿ ಜಾತಿ ವ್ಯವಸ್ಥೆ ಕಾರಣದಿಂದ ಜಾತಿತಾರತಮ್ಯ ಎಂಬ ಕೊಳಕು ತುಂಬಿದೆಯಲ್ಲ ಅದನ್ನು ಗುಡಿಸಿಹಾಕಿ ನಿಮ್ಮ ಮನಸ್ಸುಗಳಲ್ಲಿ ಸ್ವಚ್ಛತೆ ತುಂಬುವ ಆಂದೋಲನಕ್ಕೆ ಬಂದಿದ್ದೇವೆ" ಎಂದು ಹೇಳಬಯಸುತ್ತೇನೆ.




ಆದರೆ ಆ ದಂಗೆಯ ನಂತರ ಆದ ಬಂಧನಗಳಲ್ಲಿ ಇಬ್ಬರು ಬ್ರಾಹ್ಮಣ ಮತ್ತು ನಾಲ್ವರು ಬನಿಯಾ ಸೇರಿದಂತೆ ಒಟ್ಟು ಕೇವಲ 27 ಮಂದಿ ಮೇಲು ಜಾತಿಯ ಜನರ ಬಂಧನವಾಯಿತು. ಆ ದಂಗೆಗಳ ನಿಜವಾದ ಬಲಿಪಶುಗಳು ದಲಿತ, ಆದಿವಾಸಿ ಮತ್ತು ಮುಸ್ಲಿಂ ಸಮುದಾಯಗಳ ಜನರೇ ಆಗಿದ್ದರೂ ಸಹ 746 ಜನ ದಲಿತರನ್ನು ಜೈಲಿಗೆ ಹಾಕಲಾಗಿದೆ ಮತ್ತು ಹಿಂದುಳಿದ ವರ್ಗದ 797 ಜನರನ್ನು ಜೈಲಿಗೆ ತಳ್ಳಲಾಗಿದೆ. ಅವರ ಒಟ್ಟು ಯೋಜನೆಯ ನೀಲನಕ್ಷೆ ಹೇಗಿದೆ ಎಂದರೆ 2002 ರ ದಂಗೆಯ ಆರೋಪಿಗಳಾಗಿ ಮೇಲ್ಜಾತಿಯ ಕೇವಲ 27 ರಿಂದ 30 ಜನರನ್ನು ಜೈಲಿಗೆ



ನಾನು ಇಲ್ಲಿ ಬರುವುದಕ್ಕೆ ಮುಂಚೆಯೇ ನನ್ನ ಹಲವಾರು ಸಂಗಾತಿಗಳು ಹೇಗೆ ಬಿ.ಜೆ.ಪಿ ಮತ್ತು ಸಂಘಪರಿವಾರ ಸೇರಿಕೊಂಡು ಕರ್ನಾಟಕದ ಕರಾವಳಿಯನ್ನು ಕೇಸರೀಕರಣಗೊಳಿಸಲು ಪ್ರಯತ್ನಿಸುತ್ತಿವೆ ಎಂಬುದನ್ನು ತಿಳಿಸಿದ್ದಾರೆ. ಹೇಗೆ ಅವರು ಸಮುದಾಯಗಳ ನಡುವೆ ಒಡಕನ್ನು ಮೂಡಿಸುವ ಮೂಲಕ ತಮ್ಮ ರಾಜಕೀಯ ಮಾಡುತ್ತಿದ್ದಾರೆ ಎಂಬ ಅರಿವು ನನಗಿದೆ. ಆ ಕಾರಣಕ್ಕೆ ಸಂಗಾತಿಗಳೆ ನಾವು ಗುಜರಾತಿನಂತೆ ಆದಿವಾಸಿಗಳು, ರೈತರು, ದಲಿತರು ಅಲ್ಪಸಂಖ್ಯಾತರು ಎಲ್ಲರೂ ಸೇರಿಕೊಂಡು ಇವರ ವಿರುದ್ಧ ಗಟ್ಟಿಧ್ವನಿಯಲ್ಲಿ ಮಾತನಾಡಬೇಕಿದೆ. ಇವರನ್ನು ಪ್ರಬಲವಾಗಿ ಎದುರಿಸಬೇಕಿದೆ. ಆದಿವಾಸಿಗಳು, ರೈತರು, ದಲಿತರು ಅಲ್ಪಸಂಖ್ಯಾತರು ಸೇರಿ ಬಿ.ಜೆ.ಪಿ ಮತ್ತು ಸಂಘಪರಿವಾರಕ್ಕೆ 'ದನದ ಬಾಲ ನೀವೇ ಇಟ್ಟುಕೊಳ್ಳಿ, ನಮಗೆ ನಮ್ಮ ಭೂಮಿ ಕೊಡಿ' ಎಂಬ ಘೋಷಣೆಯನ್ನು ತಲುಪಿಸಬೇಕಿದೆ.

ಕೇವಲ ಕರ್ನಾಟಕದ ಕರಾವಳಿಯಷ್ಟೆ ಅಲ್ಲ, ಇಡೀ ದೇಶದ ಬಹುಜನ ಸಮಾಜದ ಭಾಗವಾಗಿರುವ ಆದಿವಾಸಿ, ರೈತರು, ದಲಿತ ಬಾಂಧವರು ಸಂಘಪರಿವಾರದ ಅಜೆಂಡಾವನ್ನು ಅರ್ಥಮಾಡಿಕೊಳ್ಳದಿದ್ದರೆ, ಅವರ ಕೋಮುವಾದಿ, ಜಾತಿವಾದಿ, ಗುಜರಾತ್ ಮಾದರಿಯನ್ನು ಅರ್ಥಮಾಡಿಕೊಳ್ಳದಿದ್ದರೆ, ಅವರ ಹಿಂದೂತ್ವವಾದಿ ಮನುವಾದಿ ಜಾಲವನ್ನು ಅರ್ಥಮಾಡಿಕೊಳ್ಳದಿದ್ದರೆ ಏನಾಗುತ್ತದೆ ಎಂಬುದನ್ನು ನಾನು ನಿಮಗೆ ಹೇಳುತ್ತೇನೆ.

ಗುಜರಾತಿನ ನಮ್ಮ ದಲಿತ, ಆದಿವಾಸಿ, ಹಿಂದುಳಿದವರ ಕೇಸರೀಕರಣ ಆಯಿತು. ಆದರ ಪರಿಣಾಮ 2002ರ ಗುಜರಾತ್ ದಂಗೆಯಲ್ಲಿ ನಮ್ಮ ಸಮುದಾಯದ ಕೆಲವರು ಹಿಂದೂತ್ವವಾದಿಗಳ ಭ್ರಮೆಯಲ್ಲಿ ಭಾಗಿಯಾಗಿ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯಗಳ ಮೇಲೆ ದಾಳಿಗಳನ್ನು ನಡೆಸಿದರು.

ಕಳುಹಿಸಿದ್ದರೆ ಹಿಂದುಳಿದ ಮತ್ತು ದಲಿತ ಸಮುದಾಯಕ್ಕೆ ಸೇರಿದ ಸುಮಾರು 1500ಕ್ಕೂ ಹೆಚ್ಚು ಜನರನ್ನು ಜೈಲಿಗೆ ತಳ್ಳಲಾಗಿದೆ. ಇವರ ಈ ರಾಜಕೀಯ ತಂತ್ರವನ್ನು ಅರ್ಥಮಾಡಿಕೊಳ್ಳದಿದ್ದರೆ ಒಂದಲ್ಲ ಒಂದು ದಿನ ನಮಗೂ ಇದೇ ಗತಿ ಆಗಲಿದೆ.

ಸಂಗಾತಿಗಳೆ, ಗುಜರಾತ್ ಮಾದರಿಯ ಚರ್ಚೆ ದೇಶದಲ್ಲಿ ಮಾತ್ರವಲ್ಲ ವಿದೇಶಗಳಲ್ಲಿಯೂ ಅದರ ಡಂಗುರ ಸಾರಲಾಗುತ್ತಿದೆ. ದಲಿತರ ಪ್ರಶ್ನೆಯನ್ನು ಕೇಂದ್ರವಾಗಿಟ್ಟುಕೊಂಡು ನಾನು ಕೆಲವೊಂದು ಸತ್ಯಸಂಗತಿಗಳನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ನಿಮಗೆ ಗೊತ್ತಿರಲಿ 2016ರ ಈ ದಿನಗಳಲ್ಲಿಯೂ ದೇಶವಿದೇಶದಲ್ಲಿ ಡಂಗುರ ಸಾರುವ ಗುಜರಾತ್ ಮಾದರಿಯ ರಾಜ್ಯದ 15,090 ಹಳ್ಳಿಗಳಲ್ಲಿ 96 ರೀತಿಯ ವಿವಿಧ ರೀತಿಯ ಅಸ್ಪೃಶ್ಯತೆಯ ಆಚರಣೆಗಳು ಜಾರಿಯಲ್ಲಿವೆ. ಇಂದಿಗೂ ಗುಜರಾತಿನ 195 ಗ್ರಾಮಗಳಲ್ಲಿ ದಲಿತರು ಪೊಲೀಸರ ರಕ್ಷಣೆಯಲ್ಲಿ ಬದುಕುತ್ತಿದ್ದಾರೆ. ಒಂದು ವೇಳೆ ಪೊಲೀಸರ ರಕ್ಷಣೆ ತೆಗೆದರೆ ಆ ಎಲ್ಲಾ ದಲಿತರ ಚರ್ಮಗಳನ್ನು ಸುಲಿಯಲಾಗುತ್ತದೆ. ಇದು ನಿಜವಾದ ಗುಜರಾತ್ ಮಾದರಿ.

2002ರಿಂದ 2014ರ ನಡುವೆ ಮೋದಿಯವರ ಆಡಳಿತದ ಅವಧಿಯಲ್ಲಿ ಸುಮಾರು 12000 ದಲಿತ ನಿಂದನೆಯ/ಶೋಷಣೆಯ ಪ್ರಕರಣಗಳು ದಾಖಲಾಗಿವೆ. ತಮ್ಮನ್ನು ತಾವು ಅಂಬೇಡ್ಕರ್ ಭಕ್ತರು ಎಂದು ಕರೆದುಕೊಳ್ಳುವ ಮೋದಿಯವರು ಈ 12000 ದಲಿತ ಕುಟುಂಬಗಳಲ್ಲಿ ಇದುವರೆಗೂ ಒಬ್ಬರನ್ನೂ ಭೇಟಿಯಾಗಿ ಮಾತನಾಡಿಲ್ಲ, ಅವರುಗಳ ಕಷ್ಟಗಳನ್ನು ವಿಚಾರಿಸಿಲ್ಲ. ದೆಹಲಿಯ ನಿರ್ಭಯಾ ಅತ್ಯಾಚಾರ ಪ್ರಕರಣದಲ್ಲಿ ತಮ್ಮ ದುಃಖವನ್ನು ತೋಡಿಕೊಂಡಿದ್ದ ಮೋದಿಯವರನ್ನು ನಾನು ಕೇಳಬಯಸುತ್ತೇನೆ. 2004 ರಲ್ಲಿ ಗುಜರಾತಿನ ದಲಿತ ಸಮುದಾಯದ 24 ಸಹೋದರಿಯರ ಮೇಲೆ ... ಆಗಿತ್ತು, ಅದು ಶೇ. 300 ಹೆಚ್ಚಾಗಿ 2014 ... ಪ್ರಮಾಣ 74 ಕ್ಕೆ ಏರಿತು. ಈ ಎಲ್ಲಾ ಪ್ರ... ಬಾಧಿತರಾದ ಒಂದೇ ಒಂದು ಕುಟುಂಬವನ್ನೂ ... ಮೋದಿಯಾಗಲಿ ಅಥವಾ ಗುಜರಾತ್ ಬಿ.ಜೆ.ಪಿ ... ಸಂಸದರಾಗಲಿ ಭೇಟಿಯಾಗಿಲ್ಲ, ಮಾತುಕತೆ ನಡೆಸಿ... ನಿಜವಾದ ಗುಜರಾತ್ ಮಾದರಿ.

ಕಳೆದ ಏಳು ವರ್ಷಗಳಲ್ಲಿ ಗುಜರಾತಿನ ... 55 ಗ್ರಾಮಗಳಲ್ಲಿ ದಲಿತರನ್ನು ಸಾಮಾಜಿಕವಾಗಿ ... ಗ್ರಾಮಗಳಿಂದ ಹೊರದಬ್ಬಲಾಗಿದೆ. ಇಂದಿಗೂ ... ದಲಿತರು ಮಲ ಹೊರುವ ವೃತ್ತಿಯಲ್ಲಿ ಮತ್ತು ... ಗುಂಡಿ ಸ್ವಚ್ಛಮಾಡುವ ಕೆಲಸ ಮಾಡುತ್ತಿದ್ದಾ... ಕೋಟಿಗಳ ಲೆಕ್ಕದಲ್ಲಿ ಅಭಿವೃದ್ಧಿಯ ಕುರಿತು ಮಾ... ಗುಜರಾತ್ ಮಾದರಿ ತನ್ನದೇ ರಾಜ್ಯದ ಒಂದು ... ಅಧಿಕ ಸಂಖ್ಯೆಯ ವಾಲ್ಮಿಕಿ ಸಮುದಾ... ಪೌರಕಾರ್ಮಿಕರಿಗೆ ನ್ಯಾಯಬದ್ಧ ವೇತನ ನೀಡಲು ... ಇದು ದುರಂತ. ಗುಜರಾತ್ ಸರ್ಕಾರದ ಸಬ್ ... ಸಬ್ ಕಾ ವಿಕಾಸ್ ಘೋಷಣೆಯ ಮಾದರಿ ... ಇದು ನಿಜವಾದ ಅರ್ಥದಲ್ಲಿ ದಲಿತರ ವಿನಾ... ದಲಿತರ ಸರ್ವನಾಶದ ಮಾದರಿಯಾಗಿದೆ ಎಂದ... ಹೇಳಲು ಇಚ್ಛಿಸುತ್ತೇನೆ.

ಯಾವಾಗ ಉನಾದ ಘಟನೆಯಲ್ಲಿ ಹೇ... ಬಜಾರಿನಲ್ಲಿ ದಲಿತ ಹುಡುಗರ ಚರ್ಮ... ಹೆಬ್ಬಲಾಯಿತೋ, ಅಂದೇ ನಿರ್ಧರಿಸಿಕೊಂಡೆವು ... ಉನಾಕ್ಕೆ ಸೀಮಿತವಾದ ಘಟನೆಯಲ್ಲ ನಾವು ... ಎದ್ದು ಉನಾದ ಶೋಷಿತರಿಗೂ ನ್ಯಾಯ ಕೇ... ಮತ್ತು ಥಾನ್ ಘಡ್ ಎನ್‌ಕೌಂಟರ್‌ನಲ್ಲಿ ... ಪೊಲೀಸರಿಂದ ಹತ್ಯೆಗೀಡಾದ 16, 17, 2... ವಯಸ್ಸಿನ 3 ದಲಿತ ಹುಡುಗರ ಕುಟುಂಬಗಳಿಗೂ ... ಕೇಳಬೇಕಿದೆ. ಹಾಗೆಯೇ 15090 ಹಳ್ಳಿಗಳಲ್ಲಿ 96 ... ವಿವಿಧ ರೀತಿಯ ಅಸ್ಪೃಶ್ಯತೆಯ ಆಚರಣೆಗಳಿಂದ ಬ... ದಲಿತರ ಹಕ್ಕುಗಳಿಗೂ ಹೋರಾಡಬೇಕಿದೆ; ... ನ್ಯಾಯಬದ್ಧ ವೇತನ ಸಿಗದ ಒಂದು ಲಕ್ಷಕ್ಕೂ ... ಸಂಖ್ಯೆಯ ವಾಲ್ಮೀಕಿ ಸಮುದಾಯದ ಪೌರಕಾ... ಪರವಾಗಿ ನಾವು ಹೋರಾಟ ಕಟ್ಟಬೇಕಿದೆ. ಆ... ನಾವು ಒಂದು ತೀರ್ಮಾನ ಕೈಗೊಂಡು ನಾವು ... ಜಾತಿ ಆಧಾರಿತ ಶೋಷಣೆಯ ಮಾತುಗಳನ್ನು ... ಆಡುವುದಿಲ್ಲ ಬದಲಾಗಿ ನಾವು ನಮ್ಮ ಅನ್ನ ಬಟ್ಟೆ ... ಸಮಸ್ಯೆಗಳ ಕುರಿತೂ ಪ್ರಶ್ನೆಗಳನ್ನು ಎತ್ತುತ್ತೇವೆ. ಆ... ಉನಾ ದಲಿತ ದೌರ್ಜನ್ಯ ವಿರೋಧಿ ಹೋರಾಟ ... ಘೋಷಣೆ ಮಾಡಿದೆವು. ನಮ್ಮ ಈ ಹೋರಾ... ಮತ್ತು ಅಸ್ತಿತ್ವ ಎರಡರ ಹೋರಾಟವೂ ಆಗಿದ... ತಿಳಿಸಬಯಸುತ್ತೇನೆ.

ಸಂಗಾತಿಗಳೆ, ನಮ್ಮ ಈ ಅಸ್ಮಿತೆ ಮತ್ತು ... ಕುರಿತಾದ ಹೋರಾಟವನ್ನು ಗುಜರಾತಿನಲ್ಲಿ ಮ... ಇಡೀ ದೇಶದಲ್ಲಿ ನಡೆಸಲು ಸಜ್ಜಾಗಬೇಕಿದೆ. ನಾವು ... ತಾರತಮ್ಯದ ಕುರಿತು ಮಾತನಾಡುವ ಜೊತೆ... ಬಟ್ಟೆ, ಆಹಾರದ ಪ್ರಶ್ನೆಗಳ ಕುರಿತು ಸಹ ಮಾತಾ... ಶಿಕ್ಷಣ ಮತ್ತು ಆರೋಗ್ಯದ ಕುರಿತು ಸಹ ಮಾತಾ... ಮುಖ್ಯವಾಗಿ ನಿರುದ್ಯೋಗ ಮತ್ತು ಭೂಸುಧ... ಕುರಿತು ನಾವು ಮಾತನಾಡಬೇಕಿದೆ. ಈ ಕಾರಣ... ನಾವು 'ದನದ ಬಾಲ ನೀವೇ ಇಟ್ಟುಕೊಳ್ಳಿ, ನಮ್ಮ... ನಮಗೆ ಕೊಡಿ' ಎಂಬ ಘೋಷಣೆ ಆರಂಭಿಸಿ...

ಗುಜರಾತ್ ಸರ್ಕಾರದ ಎಲ್ಲಿಯವರೆಗೆ ... ದಲಿತ ಕುಟುಂಬಗಳಿಗೆ ಐದು ಎಕರೆ ಭೂ... ಕೊಡುವುದಿಲ್ಲವೋ ಅಲ್ಲಿಯವರೆಗೆ ನಾವು ಈ ... ನಿಲ್ಲಿಸುವುದಿಲ್ಲ ಎಂಬ ಗಟ್ಟಿ ನಿಲುವನ್ನು ಸ್ಪಷ್ಟಪ...

'ನಿಮ್ಮ ದನದ ಬಾಲ ನೀವೇ ಇಟ್ಟುಕೋ... ನಮ್ಮ ಭೂಮಿ ಕೊಡಿ' ಎಂಬ ಘೋಷಣ... ಗುಜರಾತಿನ ಭೂರಹಿತ ದಲಿತ ಕುಟುಂಬಗಳಿ... ಎಕರೆ ಭೂಮಿಯನ್ನು ನೀಡಬೇಕು ಎಂಬ ಬೇಡಿಕೆ ... ಗುಜರಾತಿನಲ್ಲಿ ದಲಿತ ಅಸ್ಮಿತಾ ಜಾಥಾ ನ... ನಾನೂರು ಕಿಲೋಮಿಟರ್ ಉದ್ದದ ಈ ... ಭಾಗವಾಗಿ ಹಳ್ಳಿಹಳ್ಳಿಗಳಲ್ಲಿ ಸಭೆ ನಡೆಸಿ ಸಾವಿ... ಸಂಖ್ಯೆಯ ದಲಿತರನ್ನು ಒಗ್ಗೂಡಿಸಿದೆವು. ಪರಿಣಾಮ... ಅಂಕಿ-ಅಂಶಗಳ ಪ್ರಕಾರ ಗುಜರಾತಿನ ಸುಮಾರು ... ಲಕ್ಷಕ್ಕೂ ಹೆಚ್ಚು ದಲಿತರು ಇನ್ನು ಮುಂದೆ ನಾ... ಹೊರುವುದಿಲ್ಲ, ಶೌಚಗುಂಡಿಗೆ ಇಳಿಯುವುದಿ... ಸತ್ತ ಪಶುಗಳ ವಿಲೇವಾರಿ ಮಾಡುವುದಿಲ್ಲ ... ಶಪಥಗೈದಿದ್ದಾರೆ.

ಆಗಸ್ಟ್ ತಿಂಗಳಿನಲ್ಲಿ ನಮ್ಮ ದಲಿತ ಅಸ್ಮಿ... ಗುಜರಾತಿನ ಉನಾ ತಲುಪಿ ಒಂದು ... ಸಮಾವೇಶವನ್ನು ಮಾಡಲಾಯಿತು. ಆ ಸಮ್ಮೇಳನ... ಸಾವಿರಾರು ಸಂಖ್ಯೆಯ ದಲಿತರು, ಶೋ... ಭಾಗವಹಿಸಿದ್ದರು. ನೂರಾರು ಸಮಾನ ಮನಸ್ಕ ಸಂ...

ನನ್ನೊಡನೆ ನಿಂತಿದ್ದವು. ಅಲ್ಲಿಯೂ ಸಹ ಸಾವಿರಾರು ದಲಿತರು ಇನ್ನು ಮುಂದೆ ನಾವು ಸತ್ತ ಪಶುಗಳ ದೇಹವನ್ನು ವಿಲೇವಾರಿ ಮಾಡುವುದಿಲ್ಲ ಎಂಬ ಪ್ರತಿಜ್ಞೆ ಮಾಡಿದರು.

ಸಂಗಾತಿಗಳೇ, 'ನಿಮ್ಮ ದನದ ಬಾಲ ನೀವೇ ಇಟ್ಟುಕೊಳ್ಳಿ ನಮಗೆ ನಮ್ಮ ಭೂಮಿ ಕೊಡಿ' ಎಂಬ ಘೋಷಣೆಯೊಂದಿಗೆ ಆರಂಭಿಸಿದ ದಲಿತ ಅಸ್ಮಿತೆ ಜಾಥಾ ಯಾವಾಗ ಗುಜರಾತಿನ ಹಳ್ಳಿಹಳ್ಳಿಗಳಲ್ಲಿ ಪ್ರತಿಧ್ವನಿಸತೊಡಗಿತೋ, ಯಾವಾಗ ಮಾಧ್ಯಮಗಳು ಮತ್ತು ಇಡೀ ವಿಶ್ವದ ಗಮನವನ್ನು ಈ ಚಳವಳಿ ಸೆಳೆಯಲು ಆರಂಭಿಸಿತೋ, ಆಗ ನರೇಂದ್ರ ಮೋದಿ ಅವರು ಬಾಯಿ ಬಿಡಲೇ ಬೇಕಾಯಿತು. ಅವರು "ನೀವು ಗುಂಡು ಹೊಡೆಯುವುದಾದರೆ ಮೊದಲು ನನ್ನ ಮೇಲೆ ಹೊಡೆಯಿರಿ, ದಲಿತರ ಮೇಲೆ ಅಲ್ಲ" ಎಂಬ ಮಾತನ್ನು ಹೇಳಬೇಕಾಯಿತು. ಆದರೆ ಇದರ ಹಿಂದಿನ ಸತ್ಯ ಬೇರೆಯೇ ಇದೆ. ಅದನ್ನು ಕೇಳಿದರೆ ನಿಮಗೆ ಇವರ ನಾಟಕ ಅರ್ಥವಾಗುತ್ತದೆ. ನಮ್ಮ ದಲಿತ ಬಂಧುಗಳು ಐತಿಹಾಸಿಕ ಆಗಸ್ಟ್ 15ರ ಉನಾ ಸಮಾವೇಶ ಮುಗಿಸಿ ತಮ್ಮ ತಮ್ಮ ಊರುಗಳಿಗೆ ತೆರಳುತ್ತಿದ್ದಾಗ ನೂರಾರು ಜನರ ಮೇಲೆ ದಾಳಿ ನಡೆಸಿ ಅವರ ತಲೆಗಳನ್ನು ಒಡೆಯಲಾಯಿತು. ಅವರ ಮನೆ ಮತ್ತು ಆಸ್ತಿಗಳ ಮೇಲೆ ದಾಳಿಗಳಾದವು. ಅವರು ಹೋಗಬೇಕಾದ ರಸ್ತೆಗಳನ್ನು ಗೋರಕ್ಷಕರು ಬಂದ್ ಮಾಡಿದರು. ಊರಿನ ಗಡಿಯಲ್ಲಿ ಅವರುಗಳ ಕತ್ತು ಹಿಡಿದು ನೀವು ಡಾ.ಅಂಬೇಡ್ಕರ್ ಮತ್ತು ಅವರ ಅಕ್ಕ, ತಂಗಿ ಮಡದಿಯನ್ನು ನೀಚ ಶಬ್ದಗಳಿಂದ ನಿಂದಿಸಿದರೆ ಮಾತ್ರ ನಿಮ್ಮನ್ನು ಊರಿನ ಒಳಕ್ಕೆ ಬಿಡಲಾಗುವುದು ಎಂದು ಹಿಂಸಿಸಲಾಯಿತು. ಇದು ನಿಜವಾದ ಗುಜರಾತ್ ಮಾದರಿ.

ಸಂಗಾತಿಗಳೆ ನಾನು ವಿನಯಪೂರ್ವಕವಾಗಿ ಹೇಳುತ್ತೇನೆ. ಗುಜರಾತಿನಲ್ಲಿ ಆರಂಭವಾಗಿರುವ ಈ ದಲಿತ ಅಸ್ಮಿತೆ ಮತ್ತು ಅಸ್ತಿತ್ವದ ಹೋರಾಟ ಏನಿದೆ ಅದು ಕೇವಲ ನನ್ನೊಬ್ಬನ ಹೋರಾಟ ಅಲ್ಲ, ಇದು ಗುಜರಾತಿನ ಪ್ರತಿ ಜಿಲ್ಲೆ, ತಾಲ್ಲೂಕು ಮತ್ತು ಹೋಬಳಿಗಳಿಂದ ಸಿಡಿದುಬಂದ ಭೀಮ ಸೈನಿಕರು ಕಟ್ಟಿರುವ ಹೋರಾಟವಾಗಿದೆ. ನಾವು ಮೊದಲು ತಮ್ಮ ಹಕ್ಕಿನ ಪ್ರಶ್ನೆಯನ್ನು ಎತ್ತುತ್ತಿರುವ ಸಾವಿರಾರು ಭೀಮ ಸೈನಿಕರಿಗೆ ಕ್ರಾಂತಿಕಾರಿ ಚಪ್ಪಾಳೆಗಳನ್ನು ತಟ್ಟಬೇಕಿದೆ.

ಗುಜರಾತಿನ ಅಣ್ಣತಮ್ಮಂದಿರು ಮತ್ತು ಅಕ್ಕತಂಗಿಯರು ಒಂದೆಡೆ ಸೇರಿ ಸರ್ಕಾರದ ಧೋರಣೆಗಳ ವಿರುದ್ಧ ಕಳೆದ ಮೂರು ತಿಂಗಳಿನಿಂದ ನಡೆಸುತ್ತಿರುವ ಹೋರಾಟ ಇಂದಿಗೂ ಆರಂಭದ ಉತ್ಸಾಹವನ್ನು ಕಾಯ್ದುಕೊಂಡಿದೆ. ಇಂದು ಗುಜರಾತಿನ ಅಹಮದಾಬಾದ್ ಜಿಲ್ಲೆಯ ದೊಹ್ಕ ತಾಲ್ಲೂಕಿನಲ್ಲಿ ಬರುವ ಸರೋಡ ಹೆಸರಿನ ಗ್ರಾಮದಲ್ಲಿನ ಒಂದು ಎಕರೆ ಜಮೀನಿನ ಬೆಲೆ ಒಂದು ಕೋಟಿಗೆ ಏರಿದೆ. ಅಲ್ಲಿ ದಲಿತರಿಗೆ 2006 ರಲ್ಲಿ 220 ಎಕರೆ ಭೂಮಿಯ ಹಂಚಿಕೆ ನಡೆದಿತ್ತು, ಅದರ ದಾಖಲಾತಿಯನ್ನು ದಲಿತ ಬಂಧುಗಳ ಹೆಸರಿಗೆ ಮಾಡಿಕೊಡುವ ಕುರಿತು ಇಲ್ಲಿಯವರೆಗೆ ಮುಖ್ಯಮಂತ್ರಿಯ ಕಾರ್ಯಾಲಯ ಸೇರಿದಂತೆ ಸಂಬಂಧಪಟ್ಟ ಸರ್ಕಾರದ ಎಲ್ಲಾ ಇಲಾಖೆಗಳಿಗೆ ಮನವಿ ಸಲ್ಲಿಸಿದ್ದರು. ಪ್ರಯೋಜನವಾಗಿರಲಿಲ್ಲ, ಆದರೆ ನಾವು ಕಟ್ಟಿದ ಈ ದಲಿತ ಅಸ್ಮಿತೆ ಮತ್ತು ಅಸ್ತಿತ್ವದ ಸ್ವಾಭಿಮಾನ ಜಾಥಾ ತುಂಬಿದ ಸ್ಥೈರ್ಯ ಮತ್ತು ಉತ್ಸಾಹದಿಂದ ಪ್ರೇರಣೆಗೊಂಡು ಸರೋಡ ಗ್ರಾಮದ 250 ಕುಟುಂಬಗಳ ದಲಿತ ಅಕ್ಕತಂಗಿ, ಅಣ್ಣತಮ್ಮಂದಿರು ಅಹಮದಾಬಾದಿನ ರಸ್ತೆಯಲ್ಲಿ ಮಲಗುವ ಮೂಲಕ ಒಂದು ಹೋರಾಟವನ್ನು ನಡೆಸಿದರು. ಪರಿಣಾಮ ಇಂದು ಆ ಗ್ರಾಮದ 220 ಎಕರೆ ಭೂಮಿಯ ದಾಖಲೆಗಳನ್ನು ಫಲಾನುಭವಿ ದಲಿತ ಕುಟುಂಬಗಳಿಗೆ ಒದಗಿಸುವ ಕೆಲಸಕ್ಕೆ ಚಾಲನೆ ದೊರೆತಿದೆ.

ಗುಜರಾತಿನಲ್ಲಿ ದಲಿತ ಅಟ್ರಾಸಿಟಿ ಕಾಯ್ದೆ ಜಾರಿಯಲ್ಲಿದ್ದರೂ ಸಹ ಅದರ ಅಡಿಯಲ್ಲಿನ ಪ್ರಕರಣಗಳನ್ನು ನಿರ್ಮಾಣ ಮಾಡಲು ಅಗತ್ಯವಾದ ಒಂದೇ ಒಂದು ವಿಶೇಷ ನ್ಯಾಯಾಲಯವನ್ನು ಇದುವರೆಗೂ ಸ್ಥಾಪಿಸಲಾಗಿರಲಿಲ್ಲ, ಆದರೆ ಇಂದು ನಮ್ಮ ಹೋರಾಟದ ರೂಪಿಸಿದ ಒತ್ತಡದ ಪರಿಣಾಮ ಗುಜರಾತ್ ಸರ್ಕಾರ ಒಂದು ಅಧಿಸೂಚನೆಯನ್ನು ಹೊರಡಿಸಿ ಗುಜರಾತಿನ ಜಿಲ್ಲೆಗಳಲ್ಲಿ ದಲಿತ ದೌರ್ಜನ್ಯ ಪ್ರಕರಣಗಳನ್ನು ಇತ್ಯರ್ಥಪಡಿಸಲು ವಿಶೇಷ ನ್ಯಾಯಾಲಯಗಳನ್ನು ತೆರೆಯುವ ಆದೇಶ ಜಾರಿಮಾಡಿದೆ.

1941 ರಲ್ಲಿ ಸ್ವತಃ ಬಾಬಾ ಅಂಬೇಡ್ಕರ್ ಅವರು ಅಹಮದಾಬಾದಿಗೆ ಬಂದಿದ್ದರು ಮತ್ತು ವಾಲ್ಮೀಕಿ ಸಮುದಾಯಕ್ಕೆ ಸೇರಿದ ಪೌರ ಕಾರ್ಮಿಕರು, ಸಹೋದರ ಸಹೋದರಿಯರ ಪರವಾಗಿ ಧ್ವನಿಯನ್ನು ಎತ್ತಿದ್ದರು. ಆದರೆ ನಂತರ ಬಹಳ ಕಡಿಮೆ ಸಂಖ್ಯೆಯ ಹೋರಾಟಗಾರರು ವಾಲ್ಮೀಕಿ ಸಮುದಾಯದ ಕಾರ್ಮಿಕ ಹಕ್ಕುಗಳ ಕುರಿತು ಮಾತನಾಡಿದ್ದರು. ಆದರೆ ನಾವು ದಲಿತ ಸ್ವಾಭಿಮಾನಿ ಹೋರಾಟದ ಭಾಗವಾಗಿ 2013 ರಲ್ಲಿ ಒಂದು ಸಂಘಟನೆಯನ್ನು ಕಟ್ಟಿದ್ದೆವು. ಇಂದಿಗೂ ಅದು ಅತ್ಯಂತ ಸಕ್ರಿಯವಾಗಿ ಆ ಸಮುದಾಯದ ಹಕ್ಕುಗಳ ಪರವಾಗಿ ಹೋರಾಟಗಳನ್ನು ನಡೆಸುತ್ತಿದೆ. ಕಳೆದ ವಾರ ನಾವು ಅಹಮದಾಬಾದಿನ ತೆರಿಗೆ ವ್ಯಾಪ್ತಿಯ ಪ್ರದೇಶದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿ ರಸ್ತೆಗಳನ್ನು ಬಂದ್ ಮಾಡಿದ್ದರ ಪರಿಣಾಮ ಗುಜರಾತಿನ ಅಹಮದಾಬಾದ್ ಮುನ್ಸಿಪಲ್ ಕಾರ್ಪೊರೇಷನ್‌ನ ಸಂಬಂಧಪಟ್ಟ ಅಧಿಕಾರಿ ಖುದ್ದು ಇನ್ನು ಮೂರು ತಿಂಗಳಲ್ಲಿ ಆರು ಸಾವಿರ ಪೌರಕಾರ್ಮಿಕರ ನೌಕರಿಗಳನ್ನು ಕಾಯಂಗೊಳಿಸುವುದಾಗಿ ಲಿಖಿತ ಭರವಸೆ ನೀಡಿದ್ದಾರೆ. ಇದು ಗುಜರಾತಿನ ದಲಿತ ಆಂದೋಲನಕ್ಕೆ ಸಿಕ್ಕಿದ ಜಯವಾಗಿದೆ.

ನಾನು ಈ ಮಾತುಗಳನ್ನು ನಿಮ್ಮ ಎದುರಿಗೆ ಏಕೆ ಪ್ರಸ್ತಾಪಿಸುತ್ತಿದ್ದೇನೆ ಎಂದರೆ ಗುಜರಾತ್ ಸೇರಿದಂತೆ ದೇಶದ ಎಲ್ಲೆಡೆ ಜಾಗೃತಗೊಳ್ಳುತ್ತಿರುವ ದಲಿತ ಸ್ವಾಭಿಮಾನಿ ಹೋರಾಟವು ಮನುವಾದಕ್ಕೆ ಧಿಕ್ಕಾರ, ಬ್ರಾಹ್ಮಣವಾದಕ್ಕೆ ಧಿಕ್ಕಾರ ಎಂಬ ಘೋಷಣೆಯನ್ನು ಮೊಳಗಿಸುತ್ತಿದೆ. ಅದರ ಜೊತೆಜೊತೆಗೆ ನಮ್ಮ ದಮನಿತರ ಆಹಾರ, ಭೂಮಿ, ಆರೋಗ್ಯ, ಶಿಕ್ಷಣದ ಕುರಿತ ಸವಾಲುಗಳನ್ನು ಸಹ ಕೈಗೆತ್ತಿಕೊಳ್ಳಬೇಕಾಗಿದೆ. ನಮ್ಮ ವಾಲ್ಮೀಕಿ ಸಮುದಾಯದ ಸಹೋದರಿಯರ ಪ್ರಶ್ನೆಗಳನ್ನು ಇಟ್ಟುಕೊಂಡು ಒಟ್ಟಾಗಿ ಈ ದೇಶದಲ್ಲಿ ಅಂಬಾನಿ, ಅದಾನಿ ಮತ್ತು ಎಸ್ಸಾರ್‌ಗಳಿಗೆ ವ್ಯಾಪಾರಕ್ಕಾಗಿ ಸಾವಿರ ಎಕರೆಗಟ್ಟಲೆ ಭೂಮಿ ನೀಡಲು ಸಾಧ್ಯವಿದೆ ಎಂದಾದರೆ, ಈ ನೆಲದ ವಾರಸುದಾರರಾದ ದಲಿತ, ಆದಿವಾಸಿ, ಹಿಂದುಳಿದ ಸಮುದಾಯದ ಕುಟುಂಬಗಳಿಗೆ ಬದುಕಲು ಬೇಕಾದ ಐದು ಎಕರೆ ಭೂಮಿ ನೀಡಲು ಏಕೆ ಸಾಧ್ಯವಿಲ್ಲ ಎಂಬ ಪ್ರಶ್ನೆಗಳನ್ನು ಕೇಳಬೇಕಿದೆ...



ಸಂಗಾತಿಗಳೆ, ಗುಜರಾತಿನ ದಲಿತ ಆಂದೋಲನದ ಜೊತೆ ಜೊತೆಯಲ್ಲಿಯೇ ಅಲ್ಲಿನ ಪಟೇಲರು ಮೀಸಲಾತಿಗಾಗಿ ಹೋರಾಟ ನಡೆಸುತ್ತಿದ್ದಾರೆ ಎಂಬುದು ಇಲ್ಲಿರುವ ಹಲವರ ಗಮನದಲ್ಲಿದೆ ಎಂದು ನಾನು ಭಾವಿಸುತ್ತೇನೆ. 1952 ರಲ್ಲಿ ಭಾರತದಲ್ಲಿ ಮೊದಲ ಬಾರಿಗೆ ಭೂಸುಧಾರಣಾ ಕಾಯ್ದೆಯನ್ನು ರಚಿಸಲಾಯಿತು. ಅದನ್ನು ಸೌರಾಷ್ಟ್ರ ಭೂಸುಧಾರಣಾ ಕಾಯ್ದೆ ಎಂದು ಗುರುತಿಸಲಾಗುತ್ತದೆ. ಇದರ ಪ್ರಕಾರ 55 ಸಾವಿರ ಪಟೇಲ್ ಸಮುದಾಯದ ಗೇಣಿದಾರರಿಗೆ 12 ಲಕ್ಷ ಎಕರೆ ಅಂದರೆ ಸುಮಾರು 25,000 ಹೆಕ್ಟೇರ್‌ನಷ್ಟು ಭೂಮಿಯನ್ನು ಹಂಚಲಾಯಿತು. ಆದರೆ ರಾಜ್ಯದ ಊಳಿಗಮಾನ್ಯ ಮತ್ತು ಜಾತಿ ಕೇಂದ್ರಿತ ಆಲೋಚನೆಗಳನ್ನು ನೋಡಿ. ಆಗ ಹಂಚಿಕೆಯಾದ ಭೂಮಿಯ ಒಂದೇ ಇಂಚು ಜಮೀನನ್ನೂ ದಲಿತರಿಗೆ ನೀಡಲಿಲ್ಲ, ಅದರ ನಂತರ ರೆವಿನ್ಯೂ ಕಾನೂನಿನಲ್ಲಿ ಖಾಲಿ ಇರುವ ಸರ್ಕಾರಿ ಭೂಮಿಯನ್ನು ದಲಿತರಿಗೆ ಹಂಚಿಕೆ ಮಾಡಲಾಗುತ್ತದೆ ಎಂಬ ಸಂಗತಿಯನ್ನು ಸೇರಿಸಲಾಯಿತು. ಇಂದು ಸರ್ಕಾರಗಳು ಕಳೆದ 50 ವರ್ಷಗಳಲ್ಲಿ ಸಾವಿರಾರು ಎಕರೆ ಭೂಮಿಯನ್ನು ಭೂರಹಿತ ದಲಿತರಿಗೆ ನೀಡಲಾಗಿದೆ ಎನ್ನುತ್ತಿವೆ. ಆದರೆ ನಾನು ಈ ಪ್ರಕರಣಗಳನ್ನು ಖುದ್ದಾಗಿ ಹೈಕೋರ್ಟ್‌ನಲ್ಲಿ ನಡೆಸುತ್ತಿದ್ದೇನೆ ಮತ್ತು ಬೀದಿಯಲ್ಲಿ ಹೋರಾಟಗಳನ್ನು ಸಂಘಟಿಸುತ್ತಿದ್ದೇನೆ. ಈ ಎಲ್ಲಾ ಭೂಮಿ ಕೇವಲ ಕಾಗದದ ಮೇಲೆ ದಲಿತರಿಗೆ ಕೊಟ್ಟಿದ್ದೇವೆ ಎಂದು ದಾಖಲಾಗಿದೆಯೇ ಹೊರತು ವಾಸ್ತವದಲ್ಲಿ ಕಾಂಗ್ರೆಸ್ ಸರ್ಕಾರವಾಗಲಿ ಅಥವಾ ಬಿ.ಜೆ.ಪಿ ಸರ್ಕಾರವಾಗಲಿ ಒಂದು ಇಂಚು ಭೂಮಿಯನ್ನು ಸಹ ದಲಿತರಿಗೆ ನೀಡುವ ಪ್ರಯತ್ನ ಮಾಡಿಲ್ಲ, ಒಂದು ಅರ್ಥದಲ್ಲಿ ಗುಜರಾತ್ ಸರ್ಕಾರ ದಲಿತರ ಭೂಮಿ ಪ್ರಶ್ನೆಯನ್ನೆ ಅಪಹಾಸ್ಯ ಮಾಡಿಬಿಟ್ಟಿದೆ.

ನನ್ನ ಗಮನದಲ್ಲಿ ಇರುವಂತೆ ಕರ್ನಾಟಕದಲ್ಲಿಯೂ ಸುಮಾರು 10 ಲಕ್ಷ ಎಕರೆ ಬಗರ್ ಹುಕುಂ ಭೂಮಿಯನ್ನು ಅರ್ಹರಿಗೆ ಹಂಚುವಲ್ಲಿ ಕಾಂಗ್ರೆಸ್ ಮತ್ತು ಬಿ.ಜೆ.ಪಿ ಸರ್ಕಾರಗಳು ವಿಫಲವಾಗಿವೆ. ನಾವು ಈ ಬಗರ್ ಹುಕುಂ ಹೋರಾಟಗಾರರ ಪರವಾಗಿ ನಿಂತು ಹೋರಾಟವನ್ನು ಸಂಘಟಿಸಬೇಕಿದೆ.

ಸಂಗಾತಿಗಳೆ, ನಮ್ಮ ದೇಶದಲ್ಲಿ ಪುರೋಹಿತರ ಕೆಲಸವನ್ನು ಯಾರು ಮಾಡುತ್ತಾರೆ? ಮಲ ಹೊರುವ ಕೆಲಸವನ್ನು ಯಾರು ಮಾಡುತ್ತಾರೆ? ಭೂಮಾಲೀಕರು ಯಾರಾಗಿದ್ದಾರೆ ಮತ್ತು ಭೂರಹಿತ ಕೂಲಿಗಳು ಯಾರಾಗಿದ್ದಾರೆ ಎಂಬ ರಚನೆಯನ್ನು ಈ ದೇಶದ ಜಾತಿವ್ಯವಸ್ಥೆ ನಿರ್ಧರಿಸುತ್ತದೆ. ಆ ಕಾರಣಕ್ಕೆ ನಾವು ನಮ್ಮ ದೇಶದ ರಚನೆ ಏನಿದೆ ಅದು ಮೂಲತಃ ಊಳಿಗಮಾನ್ಯ ಮತ್ತು ಜಾತಿ ಕೇಂದ್ರಿತವಾಗಿದೆ ಎನ್ನುತ್ತಿದ್ದೇವೆ. ಒಂದು ವೇಳೆ ನಾವು ಈ ಊಳಿಗಮಾನ್ಯ ಮನುವಾದಿ ಮತ್ತು ಜಾತಿ ಕೇಂದ್ರಿತ ಸಾಮಾಜಿಕ ರಚನೆಯನ್ನು ಒಡೆಯಬೇಕು ಎಂದರೆ ನಾವು ಗುಜರಾತ್ ಮತ್ತು ಕರ್ನಾಟಕ ಮಾತ್ರವಲ್ಲದೆ ಇಡೀ ದೇಶದಲ್ಲಿ ಸಮರ್ಥವಾದ ಭೂಸುಧಾರಣಾ ಕಾಯ್ದೆಗೆ ಒತ್ತಾಯಿಸಬೇಕಿದೆ.

ಈ ಹಿನ್ನೆಲೆಯಲ್ಲಿ ನಾನು ಒಂದು ಅಂಶವನ್ನು ನಿಮಗೆ ಮುಕ್ತವಾಗಿ ತಿಳಿಸುತ್ತಿದ್ದೇನೆ.

ಕರ್ನಾಟಕದಲ್ಲಿಯೂ 1969ರಲ್ಲಿ ರಚನೆಯಾದ ಇಂದಿಗೂ ಜಾರಿಯಲ್ಲಿರುವ ಭೂಸುಧಾರಣಾ ಕಾಯ್ದೆಯ ಪ್ರಕಾರ ರೆವಿನ್ಯು (ಕಂದಾಯ) ಭೂಮಿಯಲ್ಲಿ ಶೇ. 50ರಷ್ಟು ಭೂಮಿಯನ್ನು ದಲಿತರ ನಡುವೆ ಹಂಚಿಕೆ ಮಾಡಬೇಕು ಎಂಬ ಅಂಶವನ್ನು ಒಳಗೊಂಡಿದೆ. ಆದರೆ ಇಂದಿಗೂ ಆ ರೀತಿಯ ಹಂಚಿಕೆ ಕರ್ನಾಟಕದಲ್ಲಿ ಮಾಡಲಾಗಿಲ್ಲ. ಈ ಕಾಯ್ದೆ ಇಂದಿಗೂ ಜಾರಿಯಲ್ಲಿದೆ ಮತ್ತು 1992 ರಲ್ಲಿ ಅದಕ್ಕೊಂದು ತಿದ್ದುಪಡಿ ತಂದು ಒಟ್ಟು ಕಂದಾಯ ಭೂಮಿಯ ಶೇ. 75 ರಷ್ಟು ಭೂಮಿಯನ್ನು ದಲಿತ ಮತ್ತು ಆದಿವಾಸಿಗಳ ನಡುವೆ ಹಂಚಿಕೆ ಮಾಡಬೇಕು ಎಂಬ ಅಂಶವನ್ನು ಸೇರಿಸಲಾಗಿದೆ. ಆದರೆ ಇಂದಿಗೂ ಆ ಕೆಲಸ ಆಗಿಲ್ಲ. ಆ ಕಾರಣಕ್ಕೆ ಮುಂಬರುವ ದಿನಗಳಲ್ಲಿ ಕರ್ನಾಟಕ ಸರ್ಕಾರವೂ ಭೂಸುಧಾರಣಾ ಕಾಯ್ದೆಯನ್ನು ಜಾರಿಗೊಳಿಸಲು ವಿಫಲವಾದರೆ, ಆ ಎಲ್ಲಾ ಭೂಮಿಯನ್ನು ಭೂರಹಿತ ದಲಿತ ಆದಿವಾಸಿ ಮತ್ತು ಹಿಂದುಳಿದವರ ನಡುವೆ ಹಂಚಿಕೆ ಮಾಡಲು ಹಿಂದೇಟು ಹಾಕಿದರೆ ನಾವೆಲ್ಲರೂ ಸೇರಿ ಈ ಸರ್ಕಾರದ ವಿರುದ್ಧವೂ ಹೋರಾಟವನ್ನು ಹಮ್ಮಿಕೊಳ್ಳುತ್ತೇವೆ ಎಂಬ ಅಂಶವನ್ನು ಇಲ್ಲಿನ ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ.

ಸಂಗಾತಿಗಳೆ, ರೋಹಿತ ವೇಮುಲನ ಘಟನೆಯಾದ ಮೇಲೆ ಇಡೀ ದೇಶದ ಯುವ ದಲಿತರಲ್ಲಿ ಒಂದು ಚೈತನ್ಯದ ಸಂಚಾರವಾಯಿತು. ಇಂದು ಇಲ್ಲಿ ಕುಳಿತಿರುವ ಸಾವಿರಾರು ಯುವಕರ ಮನಸ್ಸಿನಲ್ಲಿ ರೋಹಿತ್ ವೇಮುಲ ಮಹತ್ವದ ಆಶಯವಾಗಿ ಬದುಕಿದ್ದಾನೆ ಎಂಬ ಮಾತನ್ನು ನಾನು ಹೇಳಬಯಸುತ್ತೇನೆ. ಆದರೆ ಕಳೆದ ಕೆಲವು ದಿನಗಳ ಹಿಂದೆ ರೋಹಿತ್ ವೇಮುಲಾ ಘಟನೆಯನ್ನು ಕುರಿತ ಒಂದು ವರದಿ ಬಂದಿದೆ. ನಮಗೆ ಮೊದಲೇ ಆ ವರದಿ ಅತ್ಯಂತ ನಿಕೃಷ್ಟವಾಗಿ ಇರಲಿದೆ ಅಂದಾಜಿತ್ತು, ಆದರೆ ಇಷ್ಟು ನಿಕೃಷ್ಟವಾಗಿ ಇರುತ್ತದೆ ಎಂಬ ಊಹೆ ಇರಲಿಲ್ಲ, ಆ ವರದಿಯಲ್ಲಿ ರೋಹಿತ್ ವೇಮುಲಾ ದಲಿತನಲ್ಲ ಎಂದು ಹೇಳಲಾಗಿದೆ. ಅಷ್ಟೇ ಅಲ್ಲ ರೋಹಿತ್ ತಾಯಿಯನ್ನೂ ಅಪಮಾನಿಸಲಾಗಿದೆ. ಆ ವರದಿಯ ಆಧಾರದಲ್ಲಿ ಸುಳ್ಳು ಸುದ್ದಿಗಳನ್ನು ಹಬ್ಬಿಸಲಾಗುತ್ತಿದೆ. ಈ ಎಲ್ಲಾ ಪ್ರಯತ್ನಗಳ ಹಿಂದೆ ರೋಹಿತ್ ಕಾಯ್ದೆಗಾಗಿ ನಡೆಯುತ್ತಿದ್ದ ಹೋರಾಟವನ್ನು ಹತ್ತಿಕ್ಕುವ ಕೆಲಸ ನಡೆಯುತ್ತಿದೆ. ಇದೇ ರೀತಿ ಕರ್ನಾಟಕದಲ್ಲಿಯೂ ಹುಚ್ಚಂಗಿ ಪ್ರಸಾದ್ ಅವರ ಕೈಯನ್ನು ಮುರಿಯಲಾಗಿತ್ತು ಮತ್ತು ಅವರ ಮೇಲೆ ಹಲ್ಲೆಯನ್ನು ನಡೆಸಲಾಗಿತ್ತು, ಆ ಪ್ರಕರಣವನ್ನೂ ಮುಚ್ಚಿಹಾಕಲಾಗುತ್ತಿದೆ. ಈ ಎಲ್ಲಾ ಸಂಗತಿಗಳನ್ನು ಕುರಿತು ನಾವು ಗಂಭೀರವಾಗಿ ಯೋಚಿಸಬೇಕಿದೆ.

ಸಂಗಾತಿಗಳೆ, ಉನಾದ ಘಟನೆಯ ಹಿನ್ನೆಲೆಯಲ್ಲಿ ಸಂಘಪರಿವಾರ ಮತ್ತು ಬಿ.ಜೆ.ಪಿಯ ರಾಜನೀತಿ ನಡೆಯುತ್ತಿದೆ. ಮೋದಿಯವರು ಪ್ರಧಾನಿ ಆದಮೇಲೆ ಒಂದು ರೀತಿಯಲ್ಲಿ ಈ ಸಂಘಪರಿವಾರ ಮತ್ತು ಗೋರಕ್ಷಕರ ಕೊಬ್ಬು ಹೆಚ್ಚಾಗಿದೆ. ಅವರು ಯಾವಾಗ ಬೇಕೋ ಅವಾಗ ದಲಿತ, ಆದಿವಾದಿ ಮತ್ತು ಅಲ್ಪಸಂಖ್ಯಾತ ಮುಸ್ಲಿಮರ ಮೇಲೆ ಹಲ್ಲೆ ನಡೆಸಬಹುದು ಎಂದು ತಿಳಿದಿದ್ದಾರೆ. ಇದೆ ಜಾತಿವಾದಿ ಮತ್ತು ಕೋಮುವಾದಿ ಮನಸ್ಥಿತಿಯಿಂದ ಉನಾದ ಘಟನೆ ಆಗುತ್ತದೆ. ಅಹಮದಾಬಾದ್‌ನ ಮಹಮ್ಮದ್ ಅಯೂಬ್ ಅವರ ಹತ್ಯೆ ನಡೆಯುತ್ತದೆ. ಹುಚ್ಚಂಗಿ ಪ್ರಸಾದ್ ಮೇಲೆ ಹಲ್ಲೆಗಳಾಗುತ್ತವೆ. ಕರ್ನಾಟಕದ ಚಿಕ್ಕಮಗಳೂರಿನ ಜಯಪುರದಲ್ಲಿ ದಲಿತರನ್ನು ಥಳಿಸಲಾಗುತ್ತದೆ. ನಾವು ಈ ಎಲ್ಲಾ ಘಟನೆಗಳನ್ನು ಖಂಡಿಸಬೇಕಿದೆ.

ಈ ಎಲ್ಲಾ ಘಟನೆಗಳ ಹಿನ್ನೆಲೆಯಲ್ಲಿ ನಾವು ಕರ್ನಾಟಕ ಮತ್ತು ಗುಜರಾತ್ ಸರ್ಕಾರಗಳಿಗೆ ಈ ಮಾನವ ದ್ವೇಷಿ ಗೋರಕ್ಷಕ ಸಮಿತಿಗಳನ್ನು ನಿಷೇಧಿಸಿ ಎಂಬ ಹಕ್ಕೊತ್ತಾಯವನ್ನು ಮಾಡಬೇಕಿದೆ. ಕೊನೆಗೆ ಮೂರು ಒತ್ತಾಯಗಳನ್ನು ಮಾಡುವ ಮೂಲಕ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಮೊದಲನೆಯದು ಕರ್ನಾಟಕ ಸರ್ಕಾರ ಇಷ್ಟು ವರ್ಷಗಳಲ್ಲಿ ದಲಿತ, ಆದಿವಾಸಿ ಮತ್ತು ಹಿಂದುಳಿದವರ ನಡುವೆ ಎಷ್ಟು ಪ್ರಮಾಣದ ಭೂಹಂಚಿಕೆ ಮಾಡಿದೆ ಮತ್ತು ಕಾರ್ಪೊರೇಟ್ ಕಂಪೆನಿಗಳ ನಡುವೆ ಎಷ್ಟು ಪ್ರಮಾಣದ ಭೂಹಂಚಿಕೆ ಮಾಡಲಾಗಿದೆ ಎಂಬ ಕುರಿತು ಬಹಿರಂಗವಾಗಿ ಶ್ವೇತಪತ್ರವನ್ನು ಹೊರಡಿಸಬೇಕು.

ಎರಡನೆಯದಾಗಿ ಗೋರಕ್ಷಕರ ಹೆಸರಿನಲ್ಲಿ ಅಂಗಡಿ ತೆರೆದಿರುವ ಎಲ್ಲಾ ಸಂಘಟನೆಗಳನ್ನು ನಿಷೇಧಿಸುವ ಒತ್ತಾಯವನ್ನು ಮಾಡುತ್ತೇನೆ.

ಅಂತಿಮವಾಗಿ ಎಲ್ಲಾ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಮರೆತು ಮನುಷ್ಯ ಅಸ್ಮಿತೆ ಮತ್ತು ಅಸ್ತಿತ್ವದ ಪ್ರಶ್ನೆಯನ್ನು ಇಟ್ಟುಕೊಂಡು ಇಲ್ಲಿ ಸೇರಿಸುವ 160ಕ್ಕೂ ಹೆಚ್ಚು ಸಂಘಟನೆಗಳ ಹೋರಾಟಗಾರರಲ್ಲಿ ನನ್ನ ಒಂದು ಮನವಿ ಇದೆ. ಅದು ಇನ್ನು ಎರಡು ತಿಂಗಳಲ್ಲಿ ಬಗರ್ ಹುಕುಂ ಹತ್ತು ಲಕ್ಷ ಎಕರೆ ಭೂಮಿ ಹಂಚಿಕೆಗೆ ಸಂಬಂಧಿಸಿದಂತೆ ಮತ್ತು ಉಡುಪಿಯ ಅಷ್ಟಮಠಗಳಲ್ಲಿ ನಡೆಯುತ್ತಿರುವ ಜಾತಿವಾದಿ ಮನಸ್ಥಿತಿಯ ಪಂಕ್ತಿಭೇದದ ಕುರಿತು ಒಂದು ಹೋರಾಟವನ್ನು ಹಮ್ಮಿಕೊಳ್ಳಿ. ಎರಡು ತಿಂಗಳ ಒಳಗಾಗಿ ಒಂದು ದಿನಾಂಕವನ್ನು ತಿಳಿಸಿ ಜೈಲಿಗೆ ಹೋಗುವ ನಿರ್ಧಾರದೊಂದಿಗೆ ಈ ಎರಡು ಹೋರಾಟಗಳಲ್ಲೂ ನಾನು ಭಾಗವಹಿಸುತ್ತೇನೆ. ನಾವು ಸಾವಿತ್ರಿ ಭಾಯಿ ಫುಲೆ ಅವರಿಗೆ ಜಿಂದಾಬಾದ್ ಎನ್ನುತ್ತೇವೆ. ಆ ಕಾರಣಕ್ಕೆ ದಲಿತ, ಆದಿವಾಸಿ ಮತ್ತು ಹಿಂದುಳಿದವರ ಭೂಮಿಯ ಹಂಚಿಕೆಯ ಕುರಿತ ನಮ್ಮ ಹೋರಾಟದಲ್ಲಿ ಭೂ ಹಂಚಿಕೆ ಆ ಸಮುದಾಯಗಳ ತಾಯಂದಿರ ಹೆಸರಿನಲ್ಲಿ ಆಗಬೇಕು ಎಂಬ ಒತ್ತಾಯವನ್ನು ನಾನು ಈ ವೇದಿಕೆ ಮೂಲಕ ಮಾಡುತ್ತೇನೆ.

ಜೈ ಭೀಮ್, ಇನ್ ಕಿಲಾಬ್ ಜಿಂದಾಬಾದ್, ಭಗತ್ ಸಿಂಗ್ ಜಿಂದಾಬಾದ್, ಸಾವಿತ್ರಿ ಭಾಯಿ ಜಿಂದಾಬಾದ್, ಡಾ. ಅಂಬೇಡ್ಕರ್ ಜಿಂದಾಬಾದ್.

ಜೈ ಭೀಮ್.

■ ಕನ್ನಡಕ್ಕೆ : ಡಾ.ಕಿರಣ್ ಎಂ.ಗಾಜನೂರು


ಲಂಕೇಶ್ ವಾರ್ಷಿಕ ಚಂದಾ ವಿವರ

ನಿಮ್ಮ ಈ ಪ್ರೀತಿಯ ಪತ್ರಿಕೆಯನ್ನು ನಿಮ್ಮ ಮನೆ ಬಾಗಿಲಿಗೇ ತರಿಸಿಕೊಳ್ಳಿ...

ಚಂದಾ ವಿವರಗಳು ಹೀಗಿವೆ:

| | |
|---|---|
| ಒಂದು ವರ್ಷಕ್ಕೆ | : 700 ರೂ. |
| ಎರಡು ವರ್ಷಕ್ಕೆ | : 1400 ರೂ. |
| ಮೂರು ವರ್ಷಕ್ಕೆ | : 2000 ರೂ. |

ಡಿಡಿ/ಚೆಕ್‌ಗಳನ್ನು 'ಲಂಕೇಶ್ ಮೀಡಿಯಾ' ಹೆಸರಿನಲ್ಲಿ ನಿಮ್ಮ ವಿಳಾಸದೊಂದಿಗೆ ನಮ್ಮ ಕಚೇರಿಗೆ ಕಳುಹಿಸಿ.
ನಂ.9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು-560 004.
ಹೆಚ್ಚಿನ ಮಾಹಿತಿಗಾಗಿ: 9880302817 /080-26676427

# ಹುಂಡಿ ಹಣಕ್ಕಾಗಿ ಬುರ್ನಾಸ್ ರಾಘು ಬೊಬ್ಬೆ!

ರಾಘು ಸ್ವಾಮಿ



ರಾಮಚಂದ್ರಾಪುರ ಮಠ ಯಾವ ಸಮುದಾಯದ್ದು? ಹವ್ಯಕ ಬ್ರಾಹ್ಮಣರದಾ? ಹದಿನಾರು ಬ್ರಾಹ್ಮಣೇತರ ಶೂದ್ರ ಸಂಕುಲದ್ದಾ? ಕಳಂಕಿತ ಕಾವಿ ಜೇವಿ ರಾಘು ಸ್ವಾಮಿಯ ಮಠಬಾನಿ ದುಷ್ಟ ಕೂಟದ್ದಾ? ಇಂಥದ್ದೊಂದು ಗೊಂದಲ-ಶಂಕೆಯ ಜಿಜ್ಞಾಸೆ ಭುಗಿಲೆದ್ದಿರುವ ಹೊತ್ತಲ್ಲೇ ಈ ಮಠದ ಪೀಠಕ್ಕೆ ಫೆವಿಕಾಲ್ ಹಾಕಿ ಕೂತಿರುವ ಧರ್ಮ-ಶಾಸ್ತ್ರ-ಶೀಲ-ನೀತಿ ಭ್ರಷ್ಟ ರಾಘುಸ್ವಾಮಿ ಮಠ ಮತ್ತು ಗೋಕರ್ಣ ದೇವಸ್ಥಾನದ ತಟ್ಟೆ ಕಾಸು ಕೈತಪ್ಪುವ ಆತಂಕದಿಂದ ತುಂಡುಗುಪ್ಪಳ ಹೊಡೆಯುತ್ತಿದ್ದಾನೆ!

ರಾಘುನ ರಂಗ್‌ರಂಗೀಲಾ ಪೋಲಿ ದಶಾವತಾರ ಕಂಡು ಹೇಸಿಹೋಗಿರುವ ಸ್ವ-ಜಾತಿ ಸಜ್ಜನ ಹವ್ಯಕ ಬ್ರಾಹ್ಮಣರಂತೂ ರಾಮಚಂದ್ರಾಪುರ ಮಠದ ಉಸಾಬರಿಯೇ ಬೇಡವೆಂದು ದೂರ ಸರಿಯುತ್ತಿದ್ದಾರೆ. ಈ ಮೃದು ಸ್ವಭಾವದ ಕುಲಬಾಂಧವರಿಂದ ತನ್ನನ್ನು ಕಾಪಾಡಲು ಸಾಧ್ಯವೇ ಇಲ್ಲವೆಂಬುದು ರಾಘುಗೆ ಪಕ್ಕಾ ಆಗಿಹೋಗಿದೆ. ಹಾಗಾಗಿ ಆತ ರಾಮಚಂದ್ರಾಪುರ ಮಠ ಹವ್ಯಕರದಷ್ಟೇ ಅಲ್ಲ, ಇತರ ಹದಿನಾರು ಶೂದ್ರ ಜಾತಿ-ಪಂಗಡಕ್ಕೂ ಇದು ಗುರುಮಠ ಎಂದು ಪೆದ್ದು ಶೂದ್ರರ ಕಿವಿ ಮೇಲೆ ಹೂವು ಇಡುತ್ತಿದ್ದಾನೆ!

ಸ್ವಯಂಕೃತಾಪರಾಧದ ಮಹಿಮೆಯಿಂದ ಗಂಡಾಂತರ ಬಂದಾಗೆಲ್ಲ ಮುಕ್ರಿ-ಹಾಲಕ್ಕಿ, ಒಕ್ಕಲಿಗ-ನಾಡವ-ಭಂಡಾರಿ-ಶೇರುಗಾರರೇ ಮುಂತಾದ ಶುದ್ಧ ಕ್ಷತ್ರಿಯ ಗುಣಧರ್ಮದ ಶೂದ್ರಾದಿಗಳನ್ನು ಗುರಾಣಿಯಂತೆ, ಹತಾರದಂತೆ ಬಳಸುವ ಕುತಂತ್ರಗಾರಿಕೆ ಈ ಷಡ್ಯಂತ್ರ ನಿಪುಣ ಕರಾರುವಾಕ್ಕಾಗಿ ಮಾಡುತ್ತಲೇ ಬಂದಿದ್ದಾನೆ. ಇಂಥದ್ದೊಂದು ಫಿಟ್ಟಿಂಗ್ ರೇಪ್ ಕೇಸಲ್ಲಿ ಸಿಕ್ಕಿಬಿದ್ದು ಪೊಲೀಸರ ಪಾಲಾಗುವ ಸಂದರ್ಭ ಎದುರಾದಾಗಿಂದ ಶುರುಹಚ್ಚಿಕೊಂಡಿರುವ ರಾಘು ಮಠದ ಆಡಳಿತದಲ್ಲಿ ಮಾತ್ರ ಈ ಶೂದ್ರರಿಗೆ ಮೂರು ಬಿಲ್ಲಿಯ ಮಾನ-ಮರ್ಯಾದೆ ಕೊಡಲು ತಯಾರಿಲ್ಲ! ಅಬ್ರಾಹ್ಮಣ ಗಣವೇನಿದ್ದರೂ ಗಂಡಾಗುಂಡಿ ರಾಘು ಮತ್ತಾತನ ಹುಂಡಿ ಕಾವಲು ಕಾಯುವ ಕಾಲಾಳುಗಳಷ್ಟೇ!!

ಮತ್ತದೇ ಶೂದ್ರರು ಹಾಗು ಮಠಬಾನಿ ರೌಡಿಗಳ ಭಯಕ್ಕೆ ಬಿದ್ದಿರುವ ಪಾಪದ ಹವ್ಯಕರನ್ನು ಈಗ ಬೀದಿಗಿಳಿಸಿರುವ ರಾಘು ಗಂಟು ಕಟ್ಟುವ ಗಿಮಿಕ್ ಮಾಡುತ್ತಿದ್ದಾನೆ; ಮಠ ಮತ್ತು ಗೋಕರ್ಣ ದೇವಸ್ಥಾನದ ಕೋಟಿ-ಕೋಟಿಗಳ ಆರ್ಥಿಕ-ವ್ಯವಹಾರಿಕ ಸಾಮ್ರಾಜ್ಯದ ಯಜಮಾನಿಕೆ ಮತ್ತಷ್ಟು ಭದ್ರ ಮಾಡಿಕೊಳ್ಳುವ ಮಸಲತ್ತು ನಡೆಸಿದ್ದಾನೆ. ಹೈಕೋರ್ಟ್‌ನಲ್ಲಿರುವ ಮಠ ಮತ್ತು ಮಂದಿರದ ಕೇಸು ಅದ್ಯಾಕೋ ಉಲ್ಟಾ ಹೊಡೆಯುತ್ತಿದೆ ಎಂಬ ಸಂಕೇತಗಳು ಗೋಚರಿಸಿದ್ದೇ ತಡ ರಾಘು ಅಮಾಯಕ ಮಠದ ಅನುಯಾಯಿಗಳನ್ನು ಪ್ರಚೋದಿಸಿ ಪ್ರತಿಭಟನೆಗೆ ಇಳಿಸಿದ್ದಾನೆ. ಸಿದ್ದು ಸರ್ಕಾರ ಮಠ-ಮಂದಿರ ಎರಡನ್ನೂ ಕಿತ್ತುಕೊಳ್ಳುವ ಸಂಚು ನಡೆಸಿದೆ ಎಂದು ಬೊಬ್ಬಿರಿಯುತ್ತಿದ್ದಾನೆ. ಮೂರನೇ ದರ್ಜೆ ರಾಜಕೀಯ ಪುಢಾರಿಗಳ ಶೈಲಿಯಲ್ಲಿ ಸರ್ಕಾರದ ವಿರುದ್ಧ ಮೆರವಣಿಗೆ-ಸಭೆ-ಭೀಷಣ ಭಾಷಣ ಮಾಡಿಸುತ್ತಿದ್ದಾನೆ. ತನ್ನ ಷಡ್ಯಂತ್ರಗಳಿಗೆ ಮೂಲವಾಗಿದ್ದ ಮಠ-ಮಂದಿರದ ಹುಂಡಿಯೇ ಕೈಜಾರಿ ಹೋದರೆ ಗತಿಯೇನೆಂಬ ಚಿಂತೆಯಲ್ಲಿ ರಾಘು ನಿದ್ದೆಗೆಡುತ್ತಿದ್ದಾನೆ.

ಇಷ್ಟೊಂದು ಹತಾಶ ಸ್ಥಿತಿ ಬಹುಶಃ ರಾಘು ಹಿಂದೆಂದೂ ತಲುಪಿರಲಿಲ್ಲ! ಎರಡೆರಡೆ ರೇಪು ಕೇಸು, ಸಿಪಾಪ್ಪಿ ಶ್ಯಾಮ ಶಾಸ್ತ್ರಿಯ ಬಲಿ ಪಡೆದು ಪೀಠಕ್ಕೆ ನರ ರಕ್ತತರ್ಪಣ ಕೊಟ್ಟ ಘನಘೋರ ಕ್ರೌರ್ಯದ ಪ್ರಕರಣ, ಕೋರ್ಟುಗಳನ್ನೇ ದಿಕ್ಕು ತಪ್ಪಿಸಿದ ಭಾನ್ಗಡಿ, ನ್ಯಾಯಾಲಯದಲ್ಲೇ ಸ್ತ್ರೀಸಂಗ ಸುಖದ ಸನ್ಯಾಸಿಯೆಂದು ಖಾತ್ರಿಯಾದ ಪ್ರಸಂಗ ಮತ್ತು ಈ ಘಟನೆಗಳ ಆಚೀಚೆಯ ಸರಣಿ ಪಾತಕಗಳಲ್ಲಿ ಸಿಕ್ಕಿಬಿದ್ದರೂ ರಾಘು ಭಂಡ ಧೈರ್ಯದಿಂದ ನಿರ್ಲಜ್ಜ ಹಾರಾಟ ನಡೆಸಿಕೊಂಡೇ ಇದ್ದ! ಕೋರ್ಟು-ಕಚೇರಿ-ಆಳುವವರು-ಆರ್‌ಎಸ್‌ಎಸ್ ಸಂಭಾಳಿಸುತ್ತ, ಹವ್ಯಕ ಸಮುದಾಯದಲ್ಲಿ ಭಯ-ಬಹಿಷ್ಕಾರ-ಬ್ಲ್ಯಾಕ್‌ಮೇಲ್‌ನ ಧರ್ಮಾಡಳಿತದಲ್ಲಿ ಅಟ್ಟಹಾಸಗೈಯ್ಯುತ್ತಲೇ ಇದ್ದ.

ಆದರೆ ಕಾವಿ ಡಾನ್‌ನಂತೆ ಮೆರೆಯುತ್ತಿದ್ದ ರಾಘು ಮೊದಲ ಬಾರಿ ತನ್ನ ಅಧಃಪತನದ ಪರ್ವದಲ್ಲಿ ಕಳೆಗುಂದಿದ್ದಾನೆ; ಆತನ ಕೃತಕ ಚೈತನ್ಯದ ಶಕ್ತಿಮೂಲವಾದ ರಾಮಚಂದ್ರಾಪುರ ಮಠ ಹಾಗು ಗೋಕರ್ಣ ದೇವಾಲಯದ ಪಾರುಪತ್ಯಕ್ಕೆ ನ್ಯಾಯಾಲಯದ ಮೂಲಕವೇ ಸಂಚಕಾರ ಬರಬಹುದೆಂಬ ಚಡಪಡಿಕೆಗೆ ಬಿದ್ದಿದ್ದಾನೆ! ಯಾವಾಗ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ರಾಮಚಂದ್ರಾಪುರ ಮಠಕ್ಕೆ ಆಡಳಿತಾಧಿಕಾರಿ ನೇಮಿಸುವ ಪ್ರಕರಣದ ವಿಚಾರಣೆ ನಡೆಸುವಂತೆ ಆದೇಶಿಸಿತೋ, ಆಗ ಗೋಲ್‌ಮಾಲ್ ಸ್ವಾಮಿ ರಾಘು ದಿಗಿಲುಬಿದ್ದು ಹೋದ! ಇದೇ ಹೊತ್ತಿಗೆ ಗೋಕರ್ಣ ದೇವಸ್ಥಾನ ಹಸ್ತಾಂತರದ ಕಾನೂನುಬದ್ಧತೆ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆಯೂ ಹೈಕೋರ್ಟ್‌ನಲ್ಲಿ ಮಗ್ಗಲು ಬದಲಿಸಬೇಕಿತ್ತಾ?

ರಾಮಚಂದ್ರಾಪುರ ಮಠ



ಹೈಕೋರ್ಟ್‌ನ ವಿಭಾಗೀಯ ಪೀಠ ದೇಗುಲ ಹಸ್ತಾಂತರದ ಬಗ್ಗೆ ಸರ್ಕಾರದ ನಿಲುವೇನೆಂದು ಕೇಳಿತು. 2008ರಲ್ಲಿ ಯಡ್ಡಿ ಸರ್ಕಾರ ಗೋಕರ್ಣ ಮಂಡಲಾಧೀಶ್ವರ ಮಹಾಬಲೇಶ್ವರ ದೇವಸ್ಥಾನವನ್ನು ಕಪಟ ಸನ್ಯಾಸಿ ರಾಘುನ ಜೋಳಿಗೆಗೆ ಹಾಕಿದ್ದೇ ಕಾನೂನುಬಾಹಿರವೆಂದು ಸಿದ್ದು ಸರ್ಕಾರವೇನಾದರೂ ಕೋರ್ಟ್‌ಗೆ ಹೇಳಿಬಿಟ್ಟರೆ ಆತ ತಿರಬೋಕಿ ಆಗೋದು ಗ್ಯಾರಂಟಿ! ಎರಡೂ ಕಡೆಯ ಆರ್ಥಿಕ ಮೂಲಕ್ಕೆ ಒಂದೇ ಬಾರಿಗೆ ತಡೆಬೀಳುವ ಗೋಳಾಟದಿಂದ ರಾಘು ತತ್ತರಿಸಿಹೋಗಿದ್ದಾನೆ. ರೇಪ್‌ಕೇಸ್, ಮರ್ಡರ್ ಕೇಸ್, ಕಾಮ ಕಥಾಗಳನ್ನೆಲ್ಲ ಈ ಹುಂಡಿ ಹಣದಿಂದಲೇ ನಿಭಾಯಿಸುತ್ತ ಬಂದಿದ್ದ ರಾಘುಗೆ ಈ ನಿಂತ ನೆಲವೇ ಬಿರುಕು ಬಿಟ್ಟು ತನ್ನನ್ನು ನುಂಗಿ ನೊಣೆಯುತ್ತಿರುವಂತೆ ಬೆಚ್ಚಿ ಬೀಳಿಸುತ್ತಿದೆ, ಪಾಪ!!

ಯತಿಯೊಬ್ಬನ ಮೇಲೆ ಬರಲೇಬಾರದಂಥ ಲಂಪಟತನ-ಲಜ್ಜೆಗೇಡಿತನ-ಅತ್ಯಾಚಾರದಂಥ ಬರ್ಬರ-ಗುರುತರ ಅಪರಾಧದ ಕುಖ್ಯಾತಿಗೆ ಬಿದ್ದು ಮಾನ-ಮರ್ಯಾದೆ ಹರಾಜಾದರೂ ತಲೆ ಕೆಡಿಸಿಕೊಳ್ಳದ ರಾಘು ಮಠ-ಮಂದಿರದ ಕೋಟ್ಯಂತರ ರೂ. ಆದಾಯ ತಪ್ಪುವ ಚಿಂತೆಯಲ್ಲಿ ಒದ್ದಾಡುತ್ತಿರುವುದು ಮೋಜಾಗಿದೆ! ಸಿದ್ದು ಸರ್ಕಾರ ಬುದ್ಧಿಪೂರ್ವಕವಾಗೇ ರಾಮಚಂದ್ರಾಪುರಮಠದ ವಿರುದ್ಧ ಸಂಚು ಮಾಡುತ್ತಿದೆಯೆಂದು ಹುಯಿಲೆಬ್ಬಿಸುತ್ತಿರುವ ಈ ದಗಲುಬಾಜಿ ಸ್ವಾಮಿ ಅಮಾಯಕರನ್ನು ಎತ್ತಿಕಟ್ಟಿ ಹೈಡ್ರಾ... ಶುರುವಿಟ್ಟುಕೊಂಡಿದ್ದಾನೆ. ರಾಮಚಂದ್ರಾಪುರಮ... ಆಡಳಿತಾಧಿಕಾರಿ ನೇಮಿಸಲು ಮತ್ತು ರಾಘ... ಸುಪರ್ದಿಯಲ್ಲಿರುವ ಗೋಕರ್ಣ ದೇವಸ್ಥಾನವನ್ನು ಮ... ವಶಪಡಿಸಿಕೊಳ್ಳಲು 'ಚಾರ್ವಾಕ' ಸಿದ್ದು ಸರ್ಕಾರ ಹ... ಬಿದ್ದಿದೆ ಎಂಬಂತೆ ರಾಘುನ 'ಗಂಟುಕಳ್ಳ' ಪಟಾಲ... ಬಿಂಬಿಸುತ್ತಿದೆ.

ಸುಳ್ಳನ್ನು ಕಲಾತ್ಮಕವಾಗಿ ಹೇಳುವ ಕಣ್ಕ... ವಿದ್ಯಾಪಾರಂಗತನಾದ ರಾಘುಗೂ ಗೊತ್ತಿದೆ. ಮ... ಆಡಳಿತಕಾರಿ ನೇಮಿಸುವುದು ಮತ್ತು ದೇವಸ್ಥಾ... ಡಿನೋಟಿಫಿಕೇಶನ್ ರದ್ದು ಮಾಡುವುದು ಕೋರ್ಟ್ ಆ... ಅವಲಂಬಿಸಿದೆಯೇ ಹೊರತು ಇದರಲ್ಲಿ ಸಿದ್ದು ಸರ್ಕಾ... ಪೂರ್ವಾಗ್ರಹ ಪ್ರಕ್ರಿಯೆಯೇನಿಲ್ಲ ಎಂಬುದು. ಕೋರ್ಟ... ನೇರವಾಗಿ ಸೆಡ್ಡು ಹೊಡೆದರೆ ಸಬ್‌ಜ್ಯೂಡಿಷ್‌ನ ... ತುತ್ತಾಗಬೇಕಾಗುತ್ತದೆಂಬ ಕಾರಣಕ್ಕೆ ಸರ್ಕಾರವನ್ನು ಬೈ... ಮಾಡುತ್ತಿದ್ದಾನೆ. ಮಠಾವಲಂಬಿಗಳು, ಮ... ಫಲಾನುಭವಿಗಳು ಮಾಡುವ ಪ್ರತಿಭಟನೆ ಸರ್ಕಾ... ವಿರುದ್ಧವಾದರೂ ಆ ಮೂಲಕ ನ್ಯಾಯಾಲಯಗಳನ್ನು ... ತಪ್ಪಿಸುವ 'ಧರ್ಮ-ಕರ್ಮ'ದ ಸ್ಕೆಚ್ ರಾಘುನ... ರೇಪ್‌ಕೇಸ್‌ನಲ್ಲಿ ಕೋರ್ಟ್‌ಗಳನ್ನು ದಾರಿ ತಪ್ಪಿ... ವೈದ್ಯಕೀಯ ಪರೀಕ್ಷೆಗೆ ಚಕ್ಕರ್ ಹಾಕಿದ್ದ ಠಕ್ಕ ರಾ... ಸ್ವಾಮಿ ಈಗ ಅಂಥದ್ದೇ ಆತ್ಮಾ ಘಾತುಕ ... ಆರಂಭಿಸಿದ್ದಾನೆ.

ರಾಘುನ ಅವ್ಯವಹಾರ-ಖಾಸಗಿ ತೆವ... ಅಡ್ಡೆಯಂತಾಗಿರುವ ರಾಮಚಂದ್ರಾಪುರಮ...



## ಶಪಥ ಷಡ್ಯಂತ್ರ!!

ರಾಮನ ಮೇಲೆ, ಗುರುಪೀಠದ ಮೇಲೆ ಆಣೆ ಪ್ರಮಾಣ ಮಾಡಿಸಿ ಭಕ್ತಾದಿಗಳನ್ನು ತನ್ನ ತೀಟೆ ತಣಿಕೆಗೆ ಬಳಸಿಕೊಳ್ಳುವ ಷಡ್ಯಂತ್ರ ನಿಪುಣ ರಾಘು ಸ್ವಾಮಿ. ಇದು ರಾಮ ಕಥಾಗಾಯಕಿ ಮೇಲಾತ ನಡೆಸಿದ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಸಾಬೀತಾಗಿದೆ. ಆಕೆ ತನಗೆ ಅರ್ಪಿಸಿಕೊಳ್ಳುವಂತೆ ರಾಮನ ಮೇಲೆ ಆಣೆ ಹಾಕಿಸಿದ್ದ ರಾಘು ಆಕೆ ತನ್ನ ರಾಸಲೀಲಾ ವಿನೋದ ಎಲ್ಲಿಯೂ ಬಾಯಿಬಿಡದಂತೆ ಪ್ರಮಾಣವೂ ಮಾಡಿಸಿದ್ದನಲ್ಲ! ಹೀಗೆ ಅಮಾಯಕ ಮಠದ ಅನುಯಾಯಿಗಳಿಂದ ರಾಮನ ಮೇಲೆ ಆಣೆ ಮಾಡಿಸಿ ಸಂದಿಗ್ಧದಲ್ಲಿ ಸಿಲುಕಿಸಿ ದುರ್ಲಾಭ ಪಡೆಯುವ ಕೊಳಕು ಚಾಳಿ ಆತನಿನ್ನೂ ಬಿಟ್ಟಿಲ್ಲ.

ಕಳೆದ 8 ನೇ ತಾರೀಖಿನಂದು ಮಟ-ಮಟ ಮಧ್ಯಾಹ್ನ ರಾಮಚಂದ್ರಾಪುರ ಮಠದ ಬಾಗಿಲಲ್ಲೇ ಕುಕ್ಕರು ಬಡಿದಿದ್ದ. ಜೊತೆಯಲ್ಲಿ ಎರ್‍ರಾಬಿರ್‍ರಿ ಲಾಟ್‌ಪುಟ್ ಸ್ವಯಂಘೋಷಿತ ಸ್ವಾಮಿಗಳು ಹವಡಿಸಿದ್ದರು. ತನ್ನ ಜೀವ-ಜೀವಾಳವಾದ ರಾಮಚಂದ್ರಾಪುರ ಮಠದ ಹುಂಡಿ ಸರ್ಕಾರದ ಪಾಲಾಗುವ ಭಯದಿಂದ ನೂರಾರು ಜನರನ್ನು ಸೇರಿಸಿಕೊಂಡಿದ್ದ "ಮಠಕ್ಕೆ ಆಡಳಿತಾಧಿಕಾರಿ ನೇಮಕವಾಗಲು ಬಿಡುವುದಿಲ್ಲ..... ಜೀವವನ್ನಾದರೂ ಕೊಡ್ತೇವೆ ಮಠದ ಆಡಳಿತ ಸರ್ಕಾರದ ವಶವಾಗಲು ಬಿಡುವುದಿಲ್ಲ" ಎಂದು ಆ ಪಾಪದ ಮಂದಿಯಿಂದ ರಾಮನ ಮೇಲೆ ಶಪಥ ಮಾಡಿಸಿದ್ದಾನೆ. ಸಮಾಜದ ನೆಮ್ಮದಿ ಕೆಡಿಸಿ, ಯಾರ್‍ಯಾರನ್ನೋ ಬಲಿಗೊಟ್ಟು ಮಠದ ಪಾರುಪತ್ಯ ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳುವ ದೂ(ದು)ರಾಲೋಚನೆ ರಾಘು ಮಾಡಿರುವುದು






ಪ್ರಮಾಣ ಮಾಡಿಸುತ್ತಿರುವ ಫೋಟೋ

ಆತನ ಶಪಥ ಷಡ್ಯಂತ್ರ ಸಾಬೀತು ಮಾಡಿಬಿಟ್ಟಿದೆ!

ಜನ ಸೇರುವ ಮೊದಲು ಮೌನ ಪ್ರತಿಭಟನೆ ಎಂದಿದ್ದ ರಾಘು ಜನರ ಕಂಡೊಡ... ಕಣ್ಕಟ್ಟು-ವಶೀಕರಣದ ಉದ್ದೋಉದ್ದ ಭಾಷಣ ಬಿಗಿದಿದ್ದಾನೆ. ಸರ್ಕಾರವನ್ನ... ಬಾಯಿಗೆಬಂದಂತೆ ಬೈದು-ಮೂದಲಿಸಿ ಮೋಕಳೀಕ್ ಆಗಿದ್ದಾನೆ. ಮಠಕ್ಕೆ ಆಡಳಿತಾಧಿಕಾ... ನೇಮಿಸಲು ಮುಂದಾದರೆ ಅಮಂಗಳ ಕಾದಿದೆ ಎಂದು ಸಿಎಂ ಸಿದ್ದುಗೆ 'ಧಾರ್ಮಿ... ಧಮಕಿ'ಯೂ ಈ ಕಾವಿ ಡಾನ್ ಹಾಕಿದ್ದಾನೆ! ಸರ್ಕಾರಕ್ಕೆ ಜನಸಮೂಹದ ಆಕ್ರೋ... ತೋರಿಸಿದಂತೆ ಮಾಡಿ ಆಡಳಿತಾಧಿಕಾರಿ ಕೇಸ್ ವಿಚಾರಣೆ ನಡೆಸುತ್ತಿರುವ ನ್ಯಾಯಾಲಯ... ಮೇಲೆ ಪ್ರಭಾವ ಬೀರುವ ಹುನ್ನಾರವೂ ರಾಘುನದು? ಹಾಗೊಂದು ಅನುಮಾನ ಆತ... ಇತಿಹಾಸ-ಭೂಗೋಳ ಬಲ್ಲವರಿಗೆ ಬರದೇ ಇರುತ್ತದಾ?

# ಗೋಕರ್ಣ ದೇವಳಕ್ಕಾಗಿ ರಾಘು ರಾದ್ಧಾಂತ!


ಗೋಕರ್ಣ ದೇವಸ್ಥಾನ

**ಕೋಟಿ-ಕೋಟಿ ಚರ-ಸ್ಥಿರ ಆಸ್ತಿ; ವಾರ್ಷಿಕ ಉತ್ಪನ್ನವೇ ಆರೇಳು ಕೋಟಿ** ...ಟುತ್ತದೆ. ಇಂಥ ಸಿರಿ-ಸಂಪತ್ತಿನ ಗೋಕರ್ಣ ದೇವಳ "ಲೌಕಿಕ ಧರ್ಮ"ದ ...ೋಗಲಾಡಿ ಸನ್ಯಾಸಿ ರಾಘುನ ಬಾಯಲ್ಲಿ ನೀರೂರಿಸದೆ ಇರುತ್ತದಾ? ಯಡ್ಡಿ ...ಎಂ ಆಗಿದ್ದಾಗ ಸಚಿವಸಂಪುಟದಲ್ಲಿ ಸಣ್ಣದೊಂದು ಚರ್ಚೆಯನ್ನೂ ಮಾಡದೆ, ...ಲ್ಲ ಕಾನೂನು-ಕಟ್ಟಳೆ ಬುದ್ಧಿಪೂರ್ವಕವಾಗೇ ಧಿಕ್ಕರಿಸಿ ಈ ಭರ್ಜರಿ ...ಹಾಬಲೇಶ್ವರ ದೇವಳವನ್ನು ತನ್ನ ರಾಜಕಾರಣಕ್ಕೆ ಸಹಕಾರಿಯಾಗಿದ್ದ ರಾಘುಗೆ ...ಣುವಳಿಯಾಗಿ ಕೊಟ್ಟಿದ್ದರು. ಈ ಲೋಪ-ದೋಷಗಳನ್ನೇ ಎತ್ತಿಕೊಂಡು ...ೋಕರ್ಣದವರು ದೇವಳ ಡಿನೋಟಿಫಿಕೇಶನ್ ಕಾನೂನುಬಾಹಿರ ಎಂದು ...ಾದಿಸಿ ಹೈಕೋರ್ಟಿಗೆ ಮೊರೆ ಹೋಗಿದ್ದರು.

ಆ ಅರ್ಜಿ ಈಗ ವಿಚಾರಣೆಗೆ ಬಂದಿದೆ. ಅಡ್ವೊಕೇಟ್ ಜನರಲ್ ಗೋಕರ್ಣ ...ೇವಸ್ಥಾನವನ್ನು ಮಠದಿಂದ ಹಿಂದಕ್ಕೆ ಪಡೆಯುವ ಯೋಚನೆಯಿದೆ ಎಂದು ...ೋರ್ಟ್‌ನಲ್ಲಿ ಹೇಳಿದ್ದಾರೆ. ಇದು ಸಹಜ ಕಾನೂನು ಪ್ರಕ್ರಿಯೆ. ರಾಘುನ ...ೇಲೇನೂ ನಂಜೆಟ್ಟುಕೊಂಡು ಹೇಳಿದ ಮಾತಿದಲ್ಲ. ಎತ್ತಿಂದೆತ್ತ ತಾಳೆ ಹಾಕಿ ...ೋಡಿದರೂ ಯಡ್ಡಿ ಸರ್ಕಾರ ಅಂದು ಏಕಪಕ್ಷೀಯವಾಗಿ ಗೋಕರ್ಣ ದೇವಳ ...ಾಮಚಂದ್ರಾಪುರ ಮಠದ ಸುಪರ್ದಿಗೆ ವಹಿಸಿದ್ದೇ ...ಲವು ಕಾನೂನು-ಅನೇಕ ಅಧಿಕಾರಿಗಳ ಆಕ್ಷೇಪಗಳ ...ಷ್ಟ ಉಲ್ಲಂಘನೆ. ಸರ್ಕಾರಕ್ಕೆ ಗೋಕರ್ಣ ದೇವಳವನ್ನು ...ಾಪಸ್ ಪಡೆಯುವ ಇರಾದೆಯಿದೆ ಎಂಬುದು ...ಿತ್ತಾಗುತ್ತಿದ್ದಂತೆಯೇ ರಾಘು ಯಾವ ಕಾರಣಕ್ಕೂ ...ಬಿಡಿ ಬಿಡಲಾರೆನೆಂದು ರಚ್ಚೆಹಿಡಿದು ರಾದ್ಧಾಂತವನ್ನೇ ...ಬ್ಬಿಸಿಬಿಟ್ಟಿದ್ದಾನೆ.


ಶೃಂಗೇರಿ ಸ್ವಾಮಿ

ತನ್ನ ತಾಲಿಬಾನಿ ಪಡೆಯನ್ನು ಕಾರ್ಯಾಚರಣೆಗೆ ...ಳಿಸಿ ಮುಗ್ಧ ಜನರನ್ನು ಒಟ್ಟಾಕಿ ಬೀದಿಗೆ ಇಳಿಸಿದ್ದಾನೆ. ...ಘು ಸ್ವಾಮಿ ಮೇಲೇಕೆ ಸರ್ಕಾರ ಸರಣಿ ಪ್ರಹಾರ ...ಡೆಸುತ್ತಿದೆ ಎಂದು ವಿಷಭಟ್ಟ ರೀಮುಗಟ್ಟಲೆ ...ಲವತ್ತುಕೊಂಡಿದ್ದಾನೆ. ರಾಘುನ ಅನಾಚಾರಗಳ ...ಮರ್ಥನೆಯ ಮುಖವಾಣಿಯಂತಾಗಿಸಿಕೊಂಡಿರುವ ...ನ್ನ ಬುಲೆಟಿನ್‌ನಲ್ಲಿ ಆಡಳಿತಾಧಿಕಾರಿ ನೇಮಕಾತಿ ...ತ್ತು ಗೋಕರ್ಣ ದೇವಸ್ಥಾನ ಮರಳಿ ಸರ್ಕಾರ ...ಡೆಯುವುದು ಇಡೀ ಜಗತ್ತಿಗೇ ಮಾಡುವ ಅನ್ಯಾಯ ಎಂಬಂತೆ ಚಡಪಡಿಸಿದ್ದಾನೆ. ...ಬ್ರಹ್ಮಣ ಸಮುದಾಯದ ಸಂಸದ-ಶಾಸಕ-ಸಚಿವರಲ್ಲಿ ಜನಿವಾರ ಪ್ರಜ್ಞೆ ಜಾಗೃತ ...ಮಾಡಲು ಹವಣಿಸಿದ್ದಾನೆ; ತನ್ನೊಳಗಿನ ಬ್ರಾಹ್ಮಣಿಕೆ ವಿಕೃತಿಯನ್ನು ಪೇಜುಗಟ್ಟಲೆ ...ಚ್ಚಿ ಹಾಕಿದ್ದಾನೆ. ಬ್ರಾಹ್ಮಣ ಅಧಿಕಾರಸ್ಥರು ಅಡ್ಡದಾರಿಗೆ ಬಿದ್ದಿರುವ ರಾಘು ...ಸ್ವಾಮಿಯ ನೆರವಿಗೆ ಬರುವುದು ಧರ್ಮ ರಕ್ಷಣೆಯ ಅನಿವಾರ್ಯತೆ ಎಂಬಂತೆ ...ೇಳಾಡಿದ್ದಾನೆ.

ವಿವಿಧ "ವಿನೋದಾವಳಿ"ಯ ಅಡ್ಡೆಯಂತಾಗಿರುವ ಮಠಕ್ಕೆ ಆಡಳಿತಾಧಿಕಾರಿ ...ಮಿಸುವುದಕ್ಕೆ ಹಾಗು ದೇವಳ ರಾಘುನ ಕಬ್ಜಾದಿಂದ ಮುಕ್ತ ಮಾಡಲು ...ರ್ಕಾರ ಚಿಂತಿಸುತ್ತಿದೆ ಎಂಬ ಅನುಮಾನ ಶುರುವಾದದ್ದೇ ತಡ ರಾಘುಸ್ವಾಮಿ, ...ನ ಹಿತಚಿಂತಕರಾದ ಕಲ್ಲಡ್ಕ ಪ್ರಭಾಕರ ಭಟ್ಟ, ಪತ್ರಕರ್ತ ವಿಷಭಟ್ಟ, ...ಕಣಕೋರ ಪ್ರತಾಪು ಹೈಡ್ರಾಮಾ ಒಂದನ್ನು ಆರಂಭಿಸಿಬಿಟ್ಟಿದ್ದಾರೆ.

ಮಠಬಾನಿಗಳು ಹಸಿ-ಹಸಿ ಸುಳ್ಳನ್ನೇ ಸತ್ಯವೆಂಬಂತೆ ಬಿಂಬಿಸಿ ಭಕ್ತಾದಿಗಳನ್ನು ಪ್ರಚೋದಿಸುತ್ತಿದ್ದಾರೆ. ಏನೇ ಆಗಲಿ ಹುಂಡಿ ಜಾಗಗಳನ್ನು ಬಿಟ್ಟುಕೊಡಲೇ ಬಾರದೆಂಬ ಹಠಕ್ಕೆ ಬಿದ್ದಿದ್ದಾರೆ. ಮಂತ್ರಿಗಳಾದ ಜಾರ್ಜ್, ದೇಶಪಾಂಡೆಯಂಥವರು ನಮ್ಮ ಪರವಾಗಿದ್ದಾರೆ. ಆದರೆ ನಮ್ಮ ಪರಮವೈರಿಯಾದ ಶೃಂಗೇರಿ ಸ್ವಾಮಿಯ ಶಿಷ್ಯನಾಗಿರುವ ಕಾನೂನು ಮಂತ್ರಿ ಜಯಚಂದ್ರ ಕಾರಸ್ಥಾನ ಮಾಡುತ್ತಿದ್ದಾನೆಂಬ ಪುಕಾರು ವ್ಯವಸ್ಥಿತವಾಗಿ ಹಬ್ಬಿಸುತ್ತಿದ್ದಾರೆ. ಈ ಜಯಚಂದ್ರನಿಂದಾಗಿಯೇ ಸಿಎಸ್ ಮಠಕ್ಕೆ ಐದೈದು ಬಾರಿ ನೋಟಿಸು ನೀಡಿ ತರಾತುರಿಯಲ್ಲಿ ಪ್ರತಿಕೂಲ ಆರ್ಡರ್ ರೆಡಿ ಮಾಡಿದ್ದಾನೆ, ಅಡ್ವೊಕೇಟ್ ಜನರಲ್ ಗೋಕರ್ಣ ದೇವಸ್ಥಾನ ಮಠದಿಂದ ಹಿಂಪಡೆಯುವ ಕಾನೂನುಗಾರಿಕೆ ಮಾಡುತ್ತಿದ್ದಾರೆಂಬುದು ರಾಘು ಪಟಾಲಮ್‌ನ ಅಳಲು ಪಾಪ!

ಗೋಕರ್ಣ ದೇಗುಲ ಮಠಕ್ಕೆ ವಹಿಸಿಯೆಂದು ತಾನೆಂದೂ ಹೇಳಲೇ ಇಲ್ಲ; ಎಂಟು ವರ್ಷದ ಹಿಂದೆ ಸರ್ಕಾರವೇ ನಮಗೆ ದೇವಸ್ಥಾನದ ಆಡಳಿತ ಕೊಟ್ಟಿತ್ತು, ಈಗ ವಾಪಸ್ಸು ಕೊಡುವುದಕ್ಕೆ ಬರುವುದಿಲ್ಲ ಎಂದು ಪಕ್ಕಾ ಆಸೆಬುರುಕನಂತೆ ಮೊಂಡಾಟ ನಡೆಸಿದ್ದಾನೆ. ಆದರೆ ವಾಸ್ತವದಲ್ಲಿ ಈ ದಗಲಗುಬಾಜಿ ರಾಘುನೇ ಮೂರ್ಮೂರು ಬಾರಿ ಸರ್ಕಾರಕ್ಕೆ ಪತ್ರಗೀಚಿ ಗೋಕರ್ಣ ಮಹಾಬಲೇಶ್ವರ ದೇವಸ್ಥಾನ, ಇತರ ನಾಲ್ಕು ಬೇರೆ-ಬೇರೆ ದೇವಸ್ಥಾನ ಹಾಗು ನಾಲ್ಕು ಮಠಗಳನ್ನು ತನ್ನ ಪಾರುಪತ್ಯಕ್ಕೊಳಪಡಿಸುವಂತೆ ಕೇಳಿದ್ದಾನೆ. ಸ್ವ-ಜಾತಿ ಸ್ವಾಮಿಯ ಈ ಪತ್ರಗಳನ್ನೇ ಅಂದಿನ ಧಾರ್ಮಿಕ ದತ್ತಿ ಇಲಾಖೆ ಆಯುಕ್ತ ಶ್ಯಾಮ್ ಭಟ್ಟ ತೀರಾ ಆಸಕ್ತಿಯಿಂದ ಪರಿಗಣಿಸಿದ್ದಾರೆ. ರಾಮಚಂದ್ರಾಪುರ ಮಠದ ಅಗ್ರಗಣ್ಯ ಶಿಷ್ಯೋತ್ತಮನೂ ಆಗಿರುವ ಶ್ಯಾಮ್ ಭಟ್ ಅಂದಿನ ಉತ್ತರ ಕನ್ನಡದ ಜಿಲ್ಲಾಧಿಕಾರಿಗೆ ಪತ್ರ ಬರೆದು ಗೋಕರ್ಣ ದೇವಸ್ಥಾನ ಮಠಕ್ಕೆ ಹಸ್ತಾಂತರಿಸುವ ಬಗ್ಗೆ ಅಭಿಪ್ರಾಯ ಕೇಳುತ್ತಾರೆ.


ಜಯಚಂದ್ರ

ಇದಕ್ಕೆ ಉತ್ತರವಾಗಿ ಉತ್ತರ ಕನ್ನಡದ ಜಿಲ್ಲಾಧಿಕಾರಿ ನೀಡಿದ ಉತ್ತರ ಯಡ್ಡಿ ಸರ್ಕಾರ ಏಕಪಕ್ಷೀಯವಾಗಿ ಶ್ರೀಮಂತ ಮಹಾಬಲೇಶ್ವರನನ್ನು ರಾಘು ಸ್ವಾಮಿಯ ಜೋಳಿಗೆಗೆ ತುಂಬಿದ್ದಾರೆಂಬುದು ಎಂಥವರಿಗೂ ಖಾತ್ರಿ ಮಾಡುತ್ತದೆ. "ರಾಮಚಂದ್ರಾಪುರಮಠ ಹವ್ಯಕ ಜಾತಿಗೆ ಸೇರಿದ ಒಂದು ಸಮುದಾಯದ ಖಾಸಗಿ ಸಂಸ್ಥೆ. ಗೋಕರ್ಣ ದೇಗುಲ ಸಾರ್ವಜನಿಕರಿಗೆ ಸೇರಿದ್ದು. ಹಾಗಾಗಿ ಸಾರ್ವಜನಿಕ ದೇಗುಲ ಒಂದು ಖಾಸಗಿ ಮಠಕ್ಕೆ ಕೊಡುವುದು ಸರಿಯಲ್ಲ" ಎಂದು ಡಿಸಿ ಸ್ಪಷ್ಟವಾಗಿ ಯಾವ ಮುಲಾಜೂ ಇಲ್ಲದೆ ರಿಪೋರ್ಟ್ ಹಾಕಿದ್ದರು. ಡಿಸಿಯ ಈ ವರದಿ ಮರೆಮಾಚಿ ಆಯುಕ್ತ ಶ್ಯಾಮ್ ಭಟ್ ಕಂದಾಯ ಇಲಾಖೆಯ ಕಾರ್ಯದರ್ಶಿಗೆ ಪತ್ರ ಬರೆಯುತ್ತಾರೆ. ಗೋಕರ್ಣ ದೇವಸ್ಥಾನ ರಾಘು ಸ್ವಾಮಿಗೆ ಕೊಡಲೇನಡ್ಡಿ ಎಂಬುದು ಆ ಪತ್ರದ ತಾತ್ಪರ್ಯ. ರಾಮಚಂದ್ರಾಪುರಮಠ ಯಾವುದೇ ಒಂದು ಸಮುದಾಯಕ್ಕೆ ಸೇರಿದ್ದಲ್ಲ ಎಂಬುದು ಆಯುಕ್ತರ "ಸಂಶೋಧನೆ" ಆಗಿರುತ್ತದೆ. ಮಜಾ ಎಂದರೆ ರಾಘು ಸ್ವಾಮಿಯೇ ಮುಜರಾಯಿ ಇಲಾಖೆಗೆ ಬರೆದ ಪತ್ರದಲ್ಲಿ ತನ್ನದು ಪಕ್ಕಾ ಹವ್ಯಾಕ ಸಂಪ್ರದಾಯಸ್ಥರ ಮಠವೆಂದು ಹೇಳಿದ್ದಾನೆ.

ಕಾನೂನು ಕೋಶ ಮತ್ತು ರಾಜ್ಯಪಾಲರು ದೇಗುಲ ಮಠಕ್ಕೆ ವಹಿಸುವುದಕ್ಕೆ ಒಪ್ಪುವುದಿಲ್ಲ. ಆಗ ಕಂದಾಯ ಇಲಾಖೆಯ ಕಾರ್ಯದರ್ಶಿ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತ ಶ್ಯಾಮ್ ಭಟ್ಟರಿಗೆ "ಎಚ್ಚರಿಕೆ" ಪತ್ರ ಬರೆಯುತ್ತಾರೆ. ಇನ್ನು ಮುಂದೆ ಯಾವುದೇ ದೇವಸ್ಥಾನ ಡಿನೋಟಿಫಿಕೇಷನ್ ಮಾಡುವ ಪ್ರಸ್ತಾವನೆ ಸಲ್ಲಿಸುವ ಉಸಾಬರಿಗೆ ಹೋಗಬೇಡ ಎಂದು ಝಾಡಿಸುತ್ತಾರೆ. ಕಂದಾಯ ಇಲಾಖೆಯ ಪೀಠಾಧಿಕಾರಿಯಾಗಿದ್ದ ಶ್ರೀಕಂಠಯ್ಯ ಎಂಬುವರು-ಕಾನೂನು ಕೋಶದ ಅಭಿಪ್ರಾಯದಂತೆ ನಿಮ್ಮ ಪ್ರಸ್ತಾವನೆ ತಿರಸ್ಕರಿಸಲಾಗಿದೆ-ಎಂದು ಧಾರ್ಮಿಕದತ್ತಿ ಆಯುಕ್ತರಿಗೆ ಮಂಗಳಾರತಿ ಎತ್ತುತ್ತಾರೆ. ಮಹಾಬಲೇಶ್ವರನ ಹಸ್ತಾಂತರಕ್ಕೆ ಅಧಿಕೃತವಾಗಿ ತಡೆ ಬೀಳುತ್ತೆ.

ಇಷ್ಟಕ್ಕೆ ಸುಮ್ಮನಾಗುವ ಸ್ವಾಮಿ ಅಲ್ಲ ಆತ. ರಾಜಕೀಯ ಲಾಬಿ ಆರಂಭಿಸಿದ್ದಾನೆ. ತೆರೆಮರೆಯಲ್ಲಿ ಸಿಎಂ ಯಡ್ಡಿಯನ್ನು ವಶೀಕರಿಸಿಕೊಂಡಿದ್ದಾನೆ. ಯಡ್ಡಿ ತನ್ನ ಮಂತ್ರಿಗಳೊಂದಿಗೂ ಈ ಬಗ್ಗೆ ಮಾತಾಡದೆ ಸ್ವಂತ ದಾನದಂತೆ ಗೋಕರ್ಣ ದೇವಸ್ಥಾನ ಅನಾಮತ್ತು ಎತ್ತಿ ರಾಘುಗೆ ಕೊಟ್ಟುಬಿಡುತ್ತಾರೆ. ಸಿಎಂ ಯಡ್ಡಿ ಕಂದಾಯ-ಧಾರ್ಮಿಕ ದತ್ತಿ ಇಲಾಖೆಯನ್ನೆಲ್ಲ ಕಡೆಗಣಿಸಿ ತನ್ನ ಅಧೀನ ಕಾರ್ಯದರ್ಶಿ ಮೂಲಕ ದೇವಳ ಹಸ್ತಾಂತರ "ಆಜ್ಞೆ" ಹೊರಡಿಸುತ್ತಾರೆ! ದೊಡ್ಡ ಆದಾಯದ ಸಾರ್ವಜನಿಕ ದೇವಸ್ಥಾನವಾದ ಗೋಕರ್ಣ ದೇವಳವನ್ನು ಆಡಳಿತ ನಡೆಸುವ ಎಲ್ಲ ಅರ್ಹತೆ-ತಾಕತ್ತು ಮುಜರಾಯಿ ಇಲಾಖೆಗೆ ಇದ್ದಾಗಲೂ ಅದನ್ನು ಕಡೆಗಣಿಸಿ ಯಡ್ಡಿ ಸರ್ಕಾರ ರಾಘುನ ಖಾಸಗಿ ಲಹರಿಗೆ ತಕ್ಕಂತೆ ಕುಣಿದಿದ್ದು ಅಕ್ಷಮ್ಯ ಅಕ್ರಮವಲ್ಲದೆ ಮತ್ತೇನು?

ದೇವಸ್ಥಾನ ರಾಘುನ ಸುಪರ್ದಿಗೆ ಸೇರಿದ ನಂತರವೇನೂ ಸ್ವರ್ಗವಾಗಿಲ್ಲ. ಅಕ್ರಮ-ಅವ್ಯವಹಾರ-ಅವಾಂತರ-ಶೋಷಣೆ ಸಾಕಷ್ಟು ನಡೆದೇಇದೆ. ಈ ರಾಮನ ಭಕ್ತ ರಾಘು ಸ್ವಾಮಿ ದೇವಸ್ಥಾನದ ವ್ಯವಹಾರದಲ್ಲಿ ರಾಮನ ಲೆಕ್ಕಕ್ಕಿಂತ ಕೃಷ್ಣನ ಲೆಕ್ಕವೇ ಒಪ್ಪವಾಗಿ ಬರೆದಿದ್ದಾನೆ. ಸುಳ್ಳಿನ ಸರಮಾಲೆಯನ್ನೇ ಪೋಣಿಸಿ ಅನುಯಾಯಿಗಳನ್ನು ದಿಕ್ಕು ತಪ್ಪಿಸುತ್ತ ದೇವಸ್ಥಾನದ ಮೇಲಿನ ಹಿಡಿತ ಬಿಗಿಗೊಳಿಸಿಕೊಳ್ಳಲು ಹವಣಿಸುತ್ತಿದ್ದಾನೆ. ಸರ್ವಸಂಗ ಪರಿತ್ಯಾಗಿ ಸಂತಶ್ರೇಷ್ಠ ತಾನೆಂದು ಪೋಸು ಕೊಡುವ ರಾಘು ಗೋಕರ್ಣ ದೇವಸ್ಥಾನ ಸರ್ಕಾರಕ್ಕೆ ಹೋಗದಂತೆ ತಕರಾರು ಮಾಡುವುದಾದರೂ ಏಕೆ? ಕಾನೂನೇ ಹಸ್ತಾಂತರ ತಪ್ಪೆಂದು ಹೇಳುತ್ತಿರುವುದು ರಾಘುಗೆ ಅರ್ಥಮಾಡಿಸುವ ಕಾಲ ಬಂದಿದೆ. ಇದು ಬುದ್ಧಿವಂತ ಬ್ರಾಹ್ಮಣರಿಗೆ ಅರ್ಥವಾದೀತಾ?

...ಡಳಿತಾಧಿಕಾರಿ ನೇಮಿಸಲಾಗುತ್ತಿದೆ ಎಂಬ ಬೊಬ್ಬೆಯ ...ಂದಿನ ವಾಸ್ತವ ಕುತೂಹಲಕರವಾಗಿದೆ. ಸಿದ್ದು ಸರ್ಕಾರ ...ಸು-ಮನಸ್ಸಿನಲ್ಲೂ ರಾಘು ಮಠ ವಶಕ್ಕೆ ಪಡೆಯುವ ...ೋಚನೆ ಮಾಡಿಲ್ಲ. ರಾಘು ಎಡವಿದಾಗೆಲ್ಲ ಮೃದು ...ೋರಣೆ ಸಿದ್ದು ಸರ್ಕಾರ ಅನುಸರಿಸುತ್ತಲೇ ಬಂದಿದೆ. ...ದ್ದು ಸರ್ಕಾರವೇನಾದರೂ ರಾಘುನ ಪಾಪಕೃತ್ಯಕ್ಕೆ ...ಾಯಶ್ಚಿತ್ತವಾಗಲೆಂಬ ನಿಲುವು ತಳೆದಿದ್ದೇ ಆಗಿದ್ದರೆ ಆತ ...ೈಲು ಪಾಲಾಗಿ ವರ್ಷಗಳೇ ಕಳೆದಿರುತ್ತಿತ್ತು!! ...ಾಮಚಂದ್ರಾಪುರಮಠ ಆಡಳಿತಾಧಿಕಾರಿಯ ಪಾರುಪತ್ಯಕ್ಕೆ ...ಒಳಪಟ್ಟಲ್ಲಿ, ತನ್ಮೂಲಕ ಅಪಾರ ಭಕ್ತಾದಿಗಳ-ಅನುಯಾಯಿಗಳ ...ಸ್ತೋಂದ್ರ ರಾಘುನ ರಗಳೆ, ಅಸಹ್ಯಗಳಿಂದ ಮುಕ್ತವಾಗಲಿ ...ಬುದು ಆ ಮಠದ ಅನನ್ಯ-ಅಖಂಡ-ವಿಚಾರವಂತ ...ಸಮುದಾಯಿಗಳ ಬೇಡಿಕೆಯೇ ಹೊರತು ಸಿದ್ದು ...ೋರದ್ದಲ್ಲ!!

...ಪಕ್ಷದ ಯಮರ್ಕಳ ಈಶ್ವರ್ ಭಟ್ ಮತ್ತು ರಾಜ್ಯದ ...ಧ ಐದು ಕಡೆಯ ಇನ್ನಿತರ ಐವರು ರಾಮಚಂದ್ರಾಪುರ ...ಠಕ್ಕೆ ಆಡಳಿತಾಧಿಕಾರಿ ನೇಮಿಸುವಂತೆ ಕೋರಿಕೆಯಿಟ್ಟು ...ಕೋರ್ಟಿಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ...ಸಿದ್ದಾರೆ. ರಾಘು ಸ್ವಾಮಿ ಮಠಾಧಿಪತಿಯೊಬ್ಬ ...ಸರಿಸಬೇಕಾದ ನಿಯಮ-ಧರ್ಮ ಪಾಲಿಸುತ್ತಿಲ್ಲ. ಆತನ ...ಕೆ-ವರ್ತನೆಯಿಂದ ಘನ ಪರಂಪರೆಯ ಮಠದ ಘನತೆ-...ಸಕ್ಕೆ ಚ್ಯುತಿ ಬಂದಿದೆ. ಆತನ ಮೇಲೆ ರೇಪ್ ಕೇಸುಗಳಿವೆ, ...ಸರ್ ಕೇಸುಗಳಿವೆ. ಆತನನ್ನು ಪೊಲೀಸರು ಬಂಧಿಸಿ ...ಮೀನಿನಲ್ಲಿ ಬಿಡುಗಡೆಯೂ ಮಾಡಿದ್ದಿದೆ. ಶ್ಯಾಮಶಾಸ್ತ್ರಿ ...ಸ ಪ್ರಕರಣದಲ್ಲಾತ ಜಾಮೀನು ಪಡೆದುಕೊಂಡಿದ್ದಾನೆ. ...ನ ಮತ್ತಾತನ ಗ್ಯಾಂಗಿನವರು ಮನಸೋ ಇಚ್ಛೆ ಮಠವನ್ನು ...ಸುತ್ತಿದ್ದಾರೆ. ಮಠದ ಆಡಳಿತದಲ್ಲಿ ಅವ್ಯವಸ್ಥೆ-...ವ್ಯವಹಾರಗಳು ಆಗುತ್ತಿವೆ. ಇದೆಲ್ಲ ಕಂಡೂ ...ಕಂಡುಕೊಂಡು ಸರ್ಕಾರ ಕೂತಿದೆ ಎಂದು ಪಿಐಎಲ್‌ನಲ್ಲಿ ...ಸಲಾಗಿದೆ.


...ಸಾರ್ವಜನಿಕ ಹಿತದೃಷ್ಟಿಯಿಂದ ಮಠಕ್ಕೆ ಆಡಳಿತಾಧಿಕಾರಿ ...ನೇಮಿಸುವುದು ಅನಿವಾರ್ಯ ಎಂಬ ತೀರ್ಮಾನಕ್ಕೆ ...ಬಂದ ಆರು ಮಂದಿ ಅರ್ಜಿದಾರರು ಹೈಕೋರ್ಟ್ ಮೊರೆ ಹೋಗಿದ್ದಾರೆ. ಮಠದಲ್ಲಿ ನಡೆಯುತ್ತಿರುವ ಅವ್ಯವಹಾರ ತಡೆಯಲು ಆಡಳಿತಾಧಿಕಾರಿ ನೇಮಿಸುವಂತೆ ಸರ್ಕಾರಕ್ಕೆ ಆದೇಶಿಸಬೇಕೆಂದು ಈಶ್ವರ್ ಭಟ್ ಮತ್ತವರ ಐವರು ಜತೆಗಾರರು ಪಿಐಎಲ್‌ನಲ್ಲಿ ಬೇಡಿಕೆ ಇಟ್ಟಿದ್ದಾರೆ. ಈ ಈಶ್ವರ್ ಭಟ್ ಮಠದ ಗುರಿಕಾರರಾಗಿದ್ದವರು. ಮಠದೊಳಗಣ 'ಗುರು' ಪುಟ ನೆಗೆಯುವುದು ಹತ್ತಿರದಿಂದ ಕಂಡು ಅಸಹ್ಯ ಪಟ್ಟವರು. ಮಠದಲ್ಲಿನ ಅಕ್ರಮ-ಅನ್ಯಾಯ-ಅನೈತಿಕತೆಯಿಂದ ವಾಕರಿಕೆ ಬಂದು ದೂರ ಸರಿದವರು. ಮಠ ಮತ್ತು ಪೀಠಕ್ಕೆ ಪರಮನಿಷ್ಠರಾದ ಈಶ್ವರ ಭಟ್ ಮತ್ತವರ ಮಿತ್ರರ ಮನಸ್ಸು ರಾಘುನನ್ನು ಪೀಠಾಧಿಪತಿಯಾಗಿ ಒಪ್ಪುತ್ತಿಲ್ಲ.


ಈಶ್ವರ ಭಟ್ ಮತ್ತಿತರ ಐವರು ಸಲ್ಲಿಸಿದ ಪಿಐಎಲ್ ಪರಿಗಣಿಸಿದ ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸುತ್ತದೆ. ಅರ್ಜಿದಾರರ ಮನವಿ ಪರಿಶೀಲಿಸುವಂತೆ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಮಧ್ಯಂತರ ಆದೇಶದ ಮೂಲಕ ನಿರ್ದೇಶನ ನೀಡುತ್ತದೆ. ಅದರಂತೆ ಮುಖ್ಯ ಕಾರ್ಯದರ್ಶಿ ಜಾದವ್ ರಾಮಚಂದ್ರಾಪುರ ಮಠಕ್ಕೆ ಆಡಳಿತಾಧಿಕಾರಿ ನೇಮಿಸಬೇಕೆಂಬ ಈಶ್ವರ ಭಟ್ ವಗೈರೆಗಳ ಅರ್ಜಿಯ ವಿಚಾರಣೆ ಆರಂಭಿಸಬೇಕಾಗಿ ಬರುತ್ತದೆ. ವಿಚಾರಣೆಯ ನಿಯಮದಂತೆ ಮಠಕ್ಕೆ ನೋಟಿಸ್ ಜಾರಿ ಮಾಡಲಾಗುತ್ತದೆ. ಆಗ ರಾಘು ಕಂಗಾಲಾಗುತ್ತಾನೆ; ತನ್ನೆಲ್ಲ 'ಆಟೋಟ'ಕ್ಕೆ ಆಧಾರವಾಗಿದ್ದ ಮಠದ ಆಮದಾನಿಗೆ ಕಲ್ಲು ಬೀಳುವ ಹೊಟ್ಟೆಯುರಿಯಿಂದ ಚಡಪಡಿಸುತ್ತಿದ್ದಾನೆ.

ಮಠದ ಸಂಪತ್ತು, ಸಮೃದ್ಧಿ ಮಾವನ ಮನೆಯಿಂದ ಬಂದ ಬಳುವಳಿಯಂತೆ ಭೋಗಿಸುತ್ತಿರುವ ರಾಘು ಮುಖ್ಯ ಕಾರ್ಯದರ್ಶಿಯ ನೋಟೀಸ್ ನೋಡಿದಾಕ್ಷಣವೇ ವಾಮಮಾರ್ಗದ ಮೂಲಕ ಪಿಐಎಲ್‌ಗೆ ಸೋಲಾಗಿಸಲು ಶತಾಗತಾಯ ಪ್ರಯತ್ನ ನಡೆಸಿದ್ದಾನೆ. ಒಂದು ಕಡೆ ಸಿದ್ದು ಸರ್ಕಾರವನ್ನು ಕಳಪೆ ಪುಢಾರಿ ಶೈಲಿಯಲ್ಲಿ ಟೀಕಿಸುವ ರಾಘು ಮತ್ತೊಂದೆಡೆ ಅದೇ ಸರ್ಕಾರದ ಆಯಕಟ್ಟಿನ ಆಸಾಮಿಗಳ ಜತೆ ಡೀಲ್ ಕುದುರಿಸುತ್ತಾನೆ. ಇಂಥ ಡಬ್ಬಲ್ ಗೇಮ್ ವರಸೆಯ ರಾಘು ಮುಖ್ಯ ಕಾರ್ಯದರ್ಶಿಯ ವಿಚಾರಣೆಯ

▶▶ 12


ಚೀಫ್ ಸೆಕ್ರೆಟರಿ ಜಾದವ್




ಆರ್.ವಿ. ದೇಶಪಾಂಡೆ


ಕಿಮ್ಮನೆ ರತ್ನಾಕರ್









# ಬುರ್ನಾಸ್ ರಾಘು ಬೊಬ್ಬೆ!!

11 ⏮

ಕ್ರಮಬದ್ಧತೆಯನ್ನೇ ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಹಾಕುತ್ತಾನೆ.

ಮುಜರಾಯಿ ಕಾಯ್ದೆಯಂತೆ ಮುಖ್ಯ ಕಾರ್ಯದರ್ಶಿಗೆ ಮಠಕ್ಕೆ ಆಡಳಿತಾಧಿಕಾರಿ ನೇಮಿಸಬೇಕೆಂಬ ಮನವಿಯ ವಿಚಾರಣೆಗೆ ಅಧಿಕಾರವೇ ಇಲ್ಲವೆನ್ನುತ್ತಾನೆ. ಇದಕ್ಕೆ ಸರ್ಕಾರಿ ವಕೀಲರು ಆಕ್ಷೇಪಣೆ ಎತ್ತುತ್ತಾರೆ. ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ವಿಭಾಗೀಯ ಪೀಠದ ನಿರ್ದೇಶನದಂತೆಯೇ ಸರ್ಕಾರದ ಸಿಎಸ್ 'ಆಡಳಿತಾಧಿಕಾರಿ ಬೇಡಿಕೆ'ಯ ವಿಚಾರಣೆ ಮಾಡುತ್ತಿದ್ದಾರೆಂದು ವಾದಿಸುತ್ತದೆ. ರಾಘುಗೆ ಆಕ್ಷೇಪಣೆ ಇದ್ದರೆ ವಿಭಾಗೀಯ ಪೀಠದಲ್ಲಿ ಪ್ರಶ್ನಿಸಬಹುದು ಎನ್ನುತ್ತಾರೆ. ಸರ್ಕಾರಿ ವಕೀಲರ ವಾದ ಒಪ್ಪಿದ ನ್ಯಾಯಮೂರ್ತಿ ಎ.ಎಸ್. ಬೋಪಣ್ಣ ಮುಂದಿನ ವಿಚಾರಣೆ ವಿಭಾಗೀಯ ಪೀಠಕ್ಕೆ ವರ್ಗಾಯಿಸಿದ್ದಾರೆ.

ಇದು 'ಆಡಳಿತಾಧಿಕಾರಿ ಗುಮ್ಮ'ದ ವಸ್ತು ಸ್ಥಿತಿ. ಆದರೆ ಸುಳ್ಳು-ಕುತಂತ್ರಗಳನ್ನೇ ಆರಾಧ್ಯ ದೇವರಾಗಿಸಿಕೊಂಡಿರುವ ಸರ್ವಸಂಗ ವ್ಯಾಮೋಹಿ ರಾಘು ಸತ್ಯವನ್ನೆಲ್ಲ ಬುದ್ಧಿಪೂರ್ವಕವಾಗೇ ಮರೆಮಾಚಿ ಮುಗ್ಧ ಮಠದ ಅನುಯಾಯಿಗಳನ್ನು ಪ್ರಚೋದಿಸುತ್ತಿದ್ದಾನೆ. ಜೀವ ಕೊಟ್ಟಾದರೂ ಮಠ ಉಳಿಸಿಕೊಳ್ಳುತ್ತೇವೆಂದು ಪಾಪದ ಮಂದಿಗೆ ಶಪಥ ಬೋಧಿಸುತ್ತಿದ್ದಾನೆ. ಮಠದ ಅನುಯಾಯಿಗಳನ್ನು ಸಂಘರ್ಷಕ್ಕೆ ಛೂಬಿಟ್ಟುಕೊಂಡು ಮಠದ ಬೊಕ್ಕಸ ಭೋಗಿಸುವ ದೂ(ದು)ರಾಲೋಚನೆ ಹಾಕಿ ಕುಂತಿದ್ದಾನೆ. ರಾಘುನ ಮೋಸಗಾರಿಕೆ ಅರ್ಥವಾಗದ ಮಂದಿ ಬಲಿ ಬೀಳುತ್ತಿದ್ದಾರೆ. ರಾಘುನ ಕಣ್ಕಟ್ಟು ಹೊಸನಗರ ಒಂದು ದಿನ ವಿನಾಕಾರಣ ಬಂದ್ ಆಗಿದೆ; ಮಲೆನಾಡು-ಕರಾವಳಿಯ ಮಂದಿ ಉಪವಾಸ-ವನವಾಸ ಅನುಭವಿಸುವಂತಾಗಿದೆ. ರಾಘು ಪ್ರವಚನದಲ್ಲಿ, ಮಾತುಕತೆಯಲ್ಲಿ, ಬೀದಿ ಭಾಷಣದಲ್ಲಿ ಹೇಳೋದೇ ಒಂದು; ಮಾಡೋದೇ ಮತ್ತೊಂದು ಎಂಬುದಕ್ಕೆ ಕಳೆದ 8ರಂದು ರಾಮಚಂದ್ರಾಪುರದಲ್ಲಿ ಆತ ಮಾಡಿಸಿದ ವ್ಯರ್ಥ 'ಉಪವಾಸ ಪರ್ವ', ಕುಚೋದ್ಯದ ಪ್ರಮಾಣವಚನಗಳು ನಿಚ್ಚಳ ನಿದರ್ಶನದಂತಿದೆ!!

ಸಿದ್ದು ಸರ್ಕಾರ ರಾಘುನ ಬದುಕಿಗೆ ಆಧಾರವಾದ ಹುಂಡಿಯನ್ನೇ ಸ್ವಾಹಾ ಮಾಡಲು ಬಾಯ್ತೆರೆದು ನಿಂತಿದೆ ಎಂಬ ಹುಸಿ ಗುಮ್ಮದ ಸುತ್ತ ಈಗ ಆತನ ತಾಲಿಬಾನಿ ಗ್ಯಾಂಗ್ ಅಲ್ಲಲ್ಲಿ ಪ್ರತಿಭಟನೆ-ಪ್ರತಿರೋಧದ ಸಭೆ ನಡೆಸತೊಡಗಿದೆ. ಇದು ರಾಘುನೇ ಹಾಕಿಕೊಟ್ಟ ಸ್ಕೆಚ್. ಹವ್ಯಕರ ಓಟಿನ ಆಸೆ ತೋರಿಸಿ ಎಂಪಿ, ಎಮ್ಮೆಲ್ಲೆ, ಮಂತ್ರಿಗಳು ತನ್ನ ಪರ ನಿಲ್ಲುವಂತೆ ಆತ ನೋಡಿಕೊಂಡಿದ್ದಾನೆ. ರಾಘು ಎರಡೆರಡು ಅತ್ಯಾಚಾರದ ಪ್ರಕರಣ, ಒಂದು (ಆತ್ಮ)ಹತ್ಯೆ ಕೇಸು, ಇದಕ್ಕೆ ಸಂಬಂಧಿಸಿದ ಉಪ-ಭಾನ್ಗಡಿಗಳಲ್ಲಿ ಬಿದ್ದು ಒದ್ದಾಡಿದಾಗಲೂ ಬಾಯಿ ಬಿಡದಿದ್ದ ಉತ್ತರ ಕನ್ನಡ ಸಂಸದ ಅನಂತಕುಮಾರ್ ಹೆಗಡೆ, ಶಿರಸಿಯ ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿಗಳಂಥ ಚಿಡ್ಡಿಗಳೂ ಈ ಬಾರಿ ಆತನ ಪರ ವಹಿಸಿಕೊಂಡು ವ್ಯಾಖ್ಯಾನ ಕೊಟ್ಟಿದ್ದಾರೆ.

ರಾಘುನ ಸೆಕ್ಸ್ ಬಾಂಬ್‌ಗಳು ಆಸ್ಫೋಟಿಸಿದಾಗೆಲ್ಲ ಸಂಸದ ಅನಂತ್ಮಾಣಿ "ಅವ್ನ ಪಾಪಕರ್ಮ ತೊಳೆಯಲು ನಾನೇಕೆ ಹೋಗ್ಬೇಕು...." ಎಂದು ಆತ್ಮೀಯರಲ್ಲಿ ಹೇಳಿಕೊಂಡಿದ್ದೂ ಇದೆ. ಕಟ್ಟರ್ ಹಿಂದೂವಾದಿ ಅನಂತ್ಮಾಣಿಗೆ ಆರ್‌ಎಸ್‌ಎಸ್ ರಾಘುನ ವಿರುದ್ಧ ಕಾರ್ಯಾಚರಣೆ ಮಾಡುತ್ತಿರುವುದು ಪಕ್ಕಾ ಆಗಿಯೇ ಹಾಗೆ ಹೇಳಿದ್ದ. ಕಾಗೇರಿ ಮಾಣಿಗಂತೂ ಶಿರಸಿ ಸೀಮೆಯ 'ರಾಜಗುರು' ಸ್ವರ್ಣವಲ್ಲಿ ಸ್ವಾಮಿಯ ಭಯವಿತ್ತು.

ಗೋಕರ್ಣ ದೇಗುಲ ರಾಘು ಕಬ್ಜಾ ಮಾಡಿಕೊಂಡಾಗ "ಗೋಕರ್ಣಕ್ಕೆ ಕಲಿ ಪ್ರವೇಶವಾಗಿದೆ... ಪಾಯಸದಲ್ಲ್ ಕಲ್ಲು ಬಂದಂತಾಗಿದೆ...." ಎಂದು ಉದ್ಗರಿಸಿದ್ದ ಸ್ವರ್ಣವಲ್ಲಿ ಸ್ವಾಮಿ, ಶೃಂಗೇರಿ ಮಠದ ಸ್ವಾಮಿಗಳ ಹಿಂಬಾಲಕನಾದ ಕಾಗೇರಿ ಎಂದೂ ರಾಘುನಿಂದ ಅಂತರ ಕಾಯ್ದುಕೊಂಡಿದ್ದ. ಆದರೆ ಈ ಬಾರಿ ಮಠಕ್ಕೆ ಸರ್ಕಾರ ಆಡಳಿತಾಧಿಕಾರಿ ನೇಮಿಸುತ್ತಿದೆ ಎಂಬ ಹಸೀ ಸುಳ್ಳಿನ ಮೇಲೆ ಹೇಳಿಕೆ ಕೊಟ್ಟಿದ್ದಾರೆ ಮಾಣಿದ್ವಯರು. ಇದು ಪಕ್ಕಾ ಓಟ್ ಬ್ಯಾಂಕ್ ಲೆಕ್ಕಾಚಾರವಷ್ಟೇ!

ಕಾಗೇರಿಯ ಶಿರಸಿ-ಸಿದ್ದಾಪುರ ಕ್ಷೇತ್ರದಲ್ಲಿ ರಾಘು ಮತ್ತು ಸ್ವರ್ಣವಲ್ಲಿ ಸ್ವಾಮಿ ಬಲ ಫಿಫ್ಟಿ-ಫಿಫ್ಟಿ. ಸಿದ್ದಾಪುರದಲ್ಲಿ ರಾಮಚಂದ್ರಾಪುರಮಠದ ಅನುಯಾಯಿಗಳು ಜಾಸ್ತಿ. ಇದು ಕಾಗೇರಿ ಫಜೀತಿಯಾದರೆ, ಅನಂತ್ಮಾಣಿಯ ಎಮ್ಮೆಲ್ಲಿ ತೆವಲಿಗೆ ರಾಘು ಅನಿವಾರ್ಯ ಆಗಿದ್ದಾನೆ. ಸಿರಸಿ ಅಥವಾ ಕುಮಟಾದಲ್ಲಿ ಅಸೆಂಬ್ಲಿಗೆ ಸ್ಪರ್ಧಿಸುವ ಯೋಚನೆಯಲ್ಲಿರುವ ಅನಂತ್ಮಾಣಿಗೆ ಎರಡೂ ಕಡೆ ರಾಮಚಂದ್ರಾಪುರ ಮಠದ ಶಿಷ್ಯವರ್ಗ ಗಣನೀಯವಾಗಿದೆ ಎಂಬುದು ಗೊತ್ತಿದೆ. ಹಾಗಾಗಿಯೇ ಅನಂತ್ಮಾಣಿ ರಾಘುನನ್ನು ಅರೆಮನಸ್ಸಿನಿಂದಲೇ ಬೆಂಬಲಿಸಿದ್ದಾನೆ. ಮಠಕ್ಕೆ ಆಡಳಿತಾಧಿಕಾರಿ ನೇಮಿಸಕೂಡದೆಂದು ಸಣ್ಣಗೆ ಕೂಗು ಹಾಕಿದ್ದಾನೆ.

ತಲೆ ಮಾಸಿದರೂ ಬುದ್ಧಿ ಬರದ ಮಂತ್ರಿ 'ದೋಷ'ಪಾಂಡೆಗೆ ಅದ್ಯಾಕೆ ರಾಘುನ ಸಹವಾಸವೋ ಗೊತ್ತಿಲ್ಲ. ದೇಶಪಾಂಡೆ ಅದೆಷ್ಟೇ ರೇಪಿಸ್ಟ್ ರಾಘುನ ರಕ್ಷಿಸಿದರೂ ಉತ್ತರ ಕನ್ನಡದ ಹವ್ಯಕರು ಆತನ ನಂಬುವುದಿಲ್ಲ. ಕಳೆದ ಲೋಕಸಭಾ ಎಲೆಕ್ಷನ್‌ನಲ್ಲಿ ದೇಶಪಾಂಡೆ ಮಗನಿಗೆ ಹವ್ಯಕರ ಒಂದೇ ಒಂದು ಓಟು ಬಿದ್ದಿರುವುದು ಅನುಮಾನವೇ! ಹೀಗಿರಲು ದೇಶಪಾಂಡೆ ಲಾಗಾಯ್ತಿನಿಂದಲೂ ಗಲೀಜು ರಾಘುನನ್ನು ಕಾನೂನಿನ ಇಕ್ಕಳದಿಂದ ಬಚಾಯಿಸುತ್ತಲೇ ಬಂದಿದ್ದಾರೆಂದು ಸುದ್ದಿಗಳಿವೆ. ಈಗಲೂ ಆತ ರಾಘುನ ಮಠಕ್ಕೆ ಆಡಳಿತಾಧಿಕಾರಿ ನೇಮಿಸೋದಾದ್ರೆ ಒಂಚೂರು ಹಿಂದೆ-ಮುಂದೆ ಯೋಚಿಸಿರೆಂದು ಸಿಎಂ ಸಿದ್ದುಗೆ ಪತ್ರ ಬರೆದಿದ್ದಾರೆ. ಅಲ್ಲಿಗೆ ಸಿದ್ದು ಕ್ಯಾಬಿನೆಟ್‌ನ ಬಲಾಢ್ಯ ಮಂತ್ರಿಯೊಬ್ಬನನ್ನು ತನ್ನ ಬಾಡಿಗಾರ್ಡಾಗಿ ನಿಲ್ಲಿಸಿಕೊಂಡ ಧಿಮಾಕು ರಾಘುನದಾಗಿದೆ. ದೇಶಪಾಂಡೆ 2018ರ ಹೊತ್ತಿಗೆ ಬಿಜೆಪಿ ಸೇರುತ್ತಾರೆಂಬ ವದಂತಿಗಳು ಈಗ ಹಬ್ಬಿದೆ. ದೇಶಪಾಂಡೆ ಮಗ ಪ್ರಶಾಂತ ಉತ್ತರ ಕನ್ನಡ ಸಂಸದ ಕ್ಷೇತ್ರದ ಬಿಜೆಪಿ ಕ್ಯಾಂಡಿಡೇಟಾಗೋದು ಟಾಪ್ ಲೆವೆಲ್‌ನಲ್ಲಿ ಪಕ್ಕಾ ಆಗಿದೆಯಂತೆ. ಆಗ ದೇಶಪಾಂಡೆಗೆ ರಾಘುನ ಹವ್ಯಕ ರಾಜಕಾರಣದ ದರ್ದು ಬೀಳುತ್ತದೆ. ಹಾಗಾಗಿ ದೇಶಪಾಂಡೆ ಯಾವಾಗ ರಾಘು ಸಂಕಷ್ಟಕ್ಕೆ ಸಿಲುಕುತ್ತಾನೋ ಆಗಾತನ ನೆರವಿಗೆ ಧಾವಿಸುತ್ತಾರೆ.

ಭಟ್ಕಳದ ಶಾಸಕ ಮಂಕಾಳು ವೈದ್ಯನೆಂಬ ಪೆಟ್ರೋಲ್-ಡೀಸೆಲ್ ಕಳ್ಳನ ಅಡಚಣೆ ಮತ್ತೂ ಮೋಜಾಗಿದೆ. ಈತನ ಕ್ಷೇತ್ರದಲ್ಲಿ ಹವ್ಯಕ ಮತದಾರರು ಹೆಚ್ಚೆಂದರೆ ಐದಾರು ಸಾವಿರ ಇರಬಹುದಷ್ಟೇ. ಈ ಓಟು ಪಡೆಯಲು ಗಿಮಿಕ್ ರಾಜ ಮಂಕಾಳ್‌ಗೆ ರಾಘು ಸ್ವಾಮಿಯ ಮಂತ್ರಾಕ್ಷತೆಯೇ ಬೇಕೆಂದೇನಿಲ್ಲ, ಆದರೂ ಆತ ರಾಘು ಹೆಸರು ಹಾಳುಮಾಡಿಕೊಂಡ ಗಳಿಗೆಯಿಂದಲೂ ಆತನ ಬೆಂಗಾವಲಾಗಿ ನಿಂತಿದ್ದಾನೆ. ತನ್ನ ಶಾಸಕಗಿರಿ ರಾಘುನ ಬಚಾವಿಗೆ ಮುಡಿಪಿಟ್ಟಂತೆ ಹಾರಾಡಿದ್ದಾನೆ-ಮಾತಾಡಿದ್ದಾನೆ. ಯಾಕೆ ಗೊತ್ತಾ? ಈ ಪಂಚರಂಗಿ ಮಂಕಾಳ ಮತ್ತು ರಂಗೀಲಾ ರಾಘುನ ನಂಟಿನ ಹಿಂದೆ ಶುದ್ಧ ವ್ಯಾವಹಾರಿಕ ಯೋಚನೆಗಳಿವೆ. ಕೋಟಿ-ಕೋಟಿ ಸಾಲದಲ್ಲಿ ಮುಳುಗಿರುವ ಮಂಕಾಳ್‌ಗೆ ಮುರ್ಡೇಶ್ವರದಲ್ಲಿ ಆತ ಶುರು ಮಾಡಿರುವ ಸೆಂಟ್ರಲ್ ಸಿಲಬಸ್ ಶಾಲೆ ಹೊರೆಯಾಗಿದೆ. ತನ್ನ ನಿರ್ದೇಶಕಗಿರಿ ಪ್ರಭಾವ ಬಳಸಿ ಕೆಡಿಸಿಸಿ ಬ್ಯಾಂಕಿಂದ ಹತ್ತಾರು ಕೋಟಿ ಅಕ್ರಮ ಸಾಲ ತಂದರೂ ಆತ ಮುಳುಗುತ್ತಲೇ ಇದ್ದಾನೆ. ಹಾಗಾಗಿ ಹೇಗಾದರೂ ಮಾಡಿ ಮುರ್ಡೇಶ್ವರದ ಸಿಬಿಎಸ್‌ಸಿ ಶಾಲೆ ರಾಘುನ ತಲೆಗೆ ಕಟ್ಟಿ ಕಾಸು ಮಾಡುವ ಪ್ಲಾನು ಮಂಕಾಳನದು!! ರಾಘುನ ಒಲಿಸಿಕೊಳ್ಳಲು ಆತ "ರಾಮಚಂದ್ರಾಪುರಮಠಕ್ಕೆ ಆಡಳಿತಾಧಿಕಾರಿ ನೇಮಿಸಿದ್ರೆ ಶಾಸಕಗಿರಿಗೇ ರಾಜೀನಾಮೆ ಬಿಸಾಕಿ ಹೋರಾಟ ಮಾಡ್ತೇನೆ" ಎಂದು ಹುಸಿ ವೀರಾವೇಷ ಪ್ರದರ್ಶಿಸುತ್ತಿದ್ದಾನೆ. ತೀರ್ಥಹಳ್ಳಿಯ ಕಿಮ್ಮನೆ ರತ್ನಾಕರ್ ತನ್ನ ಕ್ಷೇತ್ರ ಹವ್ಯಕರ ಮತಗಳಿಗಾಗಿ ರಾಘುಗೆ ಅಡ್ಡ ಬೀಳುತ್ತಿರುವುದು ತಪ್ಪು. ಒಂಚೂರು ಸೆನ್ಸೇಟಿವ್ ರಾಜಕಾರಣಿ ಎನಿಸಿದ್ದ ಕಿಮ್ಮನೆ ಸುಮ್ಮನೆ ಗೊಂದಲಕ್ಕೆ ಬಿದ್ದಿದ್ದಾರೆ, ಪಾಪ!!

ಇನ್ನು ಕಾಕ್-ಪ್ರೋಕ್-ಲೀಡರ್‌ಗಳಾದ ಕುಮಟ... ಮಾಜಿ ಶಾಸಕ ದಿನಕರ ಶೆಟ್ಟಿ, ಸಿಜರೀನ್ ಡಾಕ್ಟರ್ ... ಹೆಗಡೆ, ಅಕ್ಕಿಕಳ್ಳನೆಂದು ಜೈಲು ಪಾಲಾಗಿದ್ದ ನಿವೃತ್ತ ಡಿ.ಸಿ... ತೊರ್ಕೆ ನಾಗರಾಜ ನಾಯಕ, ಸುಪ್ರಸಿದ್ಧ ಲಲನಾ... ಗಾಯತ್ರಿ ಗೌಡ, ಚಿಪ್ಪಿ ಕಳ್ಳ ಪ್ರದೀಪ್ ನಾಯಕ, ... ಬುರುಡೆಯ ಸೂರಜ್ ನಾಯ್ಕ... ವಗೈರೆಗಳು ಕುಮಟ... ಶಾಸಕಗಿರಿಗೆ ಸ್ಪರ್ಧಿಸಲು ಯಾವುದಾದರೂ ಪಕ್ಷದಿಂದ ... ಸಿಕ್ಕರೆ ಹವ್ಯಕ ಓಟು ಬರಬಹುದೆಂದು ಕಚ್ಚೆ ಹ... ರಾಘುನ ತಾರೀಫು ಮಾಡುತ್ತಿದ್ದಾರೆ. ಇವರ ದೈನೇ... ಕಂಡು ಜನ ಬಿದ್ದು-ಬಿದ್ದು ನಗುತ್ತಿದ್ದಾರೆ. ರಾ... ಭೋಪರಾಕ್ ಗ್ಯಾಂಗಿನಲ್ಲಿ ಅತೀ ಅಪಾಯಕಾರಿ ಎ... ಮುರಳಿ ಪ್ರಭು ಎಂಬ ವರ್ತಕಾಗ್ರೇಸ! ಈತ ರಾ... ಗೋಲ್‌ಮಾಲ್ ಗೋಶಾಲೆಗಳ ಮುಖಂಡನ... ಯಾರಾದರೂ ಮೈತೊಳೆದು ಚಂದ ಮಾಡಿಟ್ಟ ... ಆರತಿ ಎತ್ತುವ ಈ ಪ್ರಭು ಮಾಮ ಗಾಂಧಿ ಪ... ಎದುರು ಗೋಮಾಂಸ ತಿಂದವರು ರಾಮಚಂದ್ರಾ... ಮಠ, ಗೋಕರ್ಣ ದೇವಸ್ಥಾನದ ಮೇಲೆ ... ಹಾಕಿದ್ದಾರೆಂದು ಅಸಂಬದ್ಧ ಆಲಾಪ ಮಾಡುತ್ತಿದ್ದಾನೆ. ರಾ... ಪ್ರಭುರ ಅಂಟಿದ ನಂಟು ಅನಾದಿಕಾಲದ್ದು. ಗೋ... ಉದ್ಯಮಿಯಾದ ಪ್ರಭುಗೆ ಅಡಚಣೆಯಾದಾಗ ರಾ... ತನ್ನ ಕಳ್ಳಕಾಸು ಈತನಿಗೆ ಬಡ್ಡಿಗೆ ಕೊಡುತ್ತಾ... ಎನ್ನುವವರಿದ್ದಾರೆ. ಇನ್ನು ಆತನ ಕೋಟ್ಯಂತರ ... ಉದ್ಯಮದಲ್ಲಿ ರಾಘು ಸ್ಲೀಪಿಂಗ್ ಪಾರ್ಟನರ್ ... ಪುಕಾರೂ ಇದೆ!! ಕೊಂಕಣಿಗರ ಪರ್ತಗಾಳಿ ಮಠಾಧಿ... ಶಿಷ್ಯವರ್ಗದ ಪ್ರಭು ಹೆಸರು ಹಾಳುಮಾಡಿಕೊಂಡಿ... ರಾಘುನ ಪರ ಸಿಕ್ಸರ್ ಶೈಲಿಯಲ್ಲಿ ಬ್ಯಾಟಿಂಗ್ ಮಾಡು... ವುದು ಸ್ವ-ಜಾತಿ ಕೊಂಕಣಿಗರಲ್ಲೇ ಹೇಸಿಗೆ ಮೂಡಿ...

ಈ ಎಡವಟ್ಟು ಪುಢಾರಿಗಳಿಗೆಲ್ಲ ರಾಮಚಂದ್ರಾ... ಮಠದ ಆಡಳಿತಾಧಿಕಾರಿ ಸಮಸ್ಯೆ ಮತ್ತು ಗೋ... ದೇವಸ್ಥಾನ ಡಿ-ನೋಟಿಫಿಕೇಷನ್ ರಾದ್ಧಾಂತ ನ್ಯಾಯಾಲ... ಪ್ರಕ್ರಿಯೆಗೆ ಒಳಪಟ್ಟಿವೆಯೇ ಹೊರತು ಇದರಲ್ಲಿ ... ಸರ್ಕಾರದ ಕೈವಾಡವೇನಿಲ್ಲ ಎಂಬುದು ಗೊತ್ತಿಲ್ಲ... ಗೊತ್ತಿದ್ದೂ ನಾಟಕ ನಡೆಸುತ್ತಿದ್ದಾರಾ? ಒಂದಂತೂ ... ಈ ಪೆದ್ದುಗಳಿಗೆಲ್ಲ ರಾಘುನ ಬಗ್ಗೆ ಭಕ್ತಿಗಿಂತ ಭ... ಜಾಸ್ತಿಯಿದೆ. ತಮಗೊಂದಿಷ್ಟು ಓಟು ಕೊಡಿಸಬಹು... ಆಸೆಯಿದೆ. ಮುಳುಗುತ್ತಿರುವ ರಾಘುಗೋ ಈ ಸ... ಸಾಧಕರ ಹಿಡಿದುಕೊಂಡು ತೇಲಬಹುದೆಂಬ ನಿ... ಪರಸ್ಪರ ಟೊಪ್ಪಿಗೆ ಹಾಕಿ ಸ್ವಾರ್ಥ ಸಾಧಿಸಲು ಹವಣಿಸುತ್ತಿ... ರಾಘು ಮತ್ತವನ ಕೋಟಾ ಹಿಂಬಾಲಕರ ಪ್ರಹಸನ ಜ... ಪುಕ್ಕಟೆ ಮನರಂಜನೆ ನೀಡುತ್ತಿದೆ!!

■ ಶುದ್ಧೋ...


# ಎಲ್ಲಿಂದಲೋ ಬಂದವರು

ಭಾರತದ ಇತಿಹಾಸದಲ್ಲಿ 12ನೆಯ ಶತಮಾನ, ಶರಣರ ಶತಮಾನ. ಎಲ್ಲ ಅವೈದಿಕ ಧರ್ಮಗಳು, ಮತಗಳು, ಸಿದ್ಧಾಂತಗಳು ಮತ್ತು ಪಂಥಗಳು ವೈದಿಕವನ್ನು ಎದುರಿಸುವಲ್ಲಿ ಗೊಂದಲಕ್ಕೀಡಾಗಿದ್ದವು. ಶೈವರಲ್ಲಿ ಕೆಲವರು ಹಿಂಸಾ ಮತ್ತು ಸ್ವಯಂಹಿಂಸಾಭಕ್ತಿಯ ಆಚರಣೆಯಲ್ಲಿ ತೊಡಗಿದ್ದರು. ವಿವಿಧ ಶೈವ ಶಾಖೆಗಳು ವೈದಿಕಮಯವಾಗಿ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡವು. ಇನ್ನಿತರ ಅವೈದಿಕ ಧರ್ಮಗಳು ತೀವ್ರತೆಯನ್ನು ಕಳೆದುಕೊಂಡವು. ವಿವಿಧ ಅವೈದಿಕ ಪಂಥಗಳು ವೈದಿಕಧರ್ಮದ ಯಥಾಸ್ಥಿತಿವಾದವನ್ನು ಎದುರಿಸುವಲ್ಲಿ ನಿರತವಾಗಿದ್ದರೂ ಆ ಕಾಲದ ಸ್ಥಿತಿಗತಿಯಲ್ಲಿ ಅವೆಲ್ಲ ಹೊಸತನದ ಕಡೆಗೆ ಹೋಗುವಲ್ಲಿ ಸಾಧ್ಯವಾಗುವಂಥ ಅವಕಾಶಗಳಿರಲಿಲ್ಲ. ರಾಜರ ಯುದ್ಧೋನ್ಮಾದ ಮತ್ತು ಹಿಂಸಾಭಕ್ತಿ ಜೊತೆ ಜೊತೆಯಲ್ಲಿ ಸಾಗಿದ್ದವು.

ಕನ್ನಡದ ನೆಲದಲ್ಲಿ 10ನೆಯ ಶತಮಾನವಂತೂ ಯುದ್ಧಗಳ ಶತಮಾನವೇ ಆಗಿತ್ತು. 11ನೆಯ ಶತಮಾನದ ವಿದ್ಯಮಾನಗಳು ಕೂಡ ಯುದ್ಧಮಯವಾಗೇ ಇದ್ದವು. ಇವೆಲ್ಲ ಕಾರಣಗಳಿಂದ ವೈದಿಕವು ಹೆಚ್ಚು ಹೆಚ್ಚು ಪ್ರಭಾವಶಾಲಿಯಾಗಿತ್ತು. ಇಂಥ ಅಂಧಃಕಾರದ ಪರಿಸ್ಥಿತಿಯಲ್ಲಿ ಆಶಾಜ್ಯೋತಿ ಯೊಂದು ಉದಯಿಸಿತು. ಆ ಜಗಜ್ಯೋತಿಯೇ ಬಸವಣ್ಣ!

ಬಸವಣ್ಣನವರು ಕಲ್ಯಾಣದ ಪ್ರಧಾನಿಯಾಗಿದ್ದಾಗ ಅವರ ಅವೈದಿಕ ಸಿದ್ಧಾಂತ ಭರತಖಂಡದ ಮೂಲೆಮೂಲೆಗಳನ್ನು ತಲುಪಿತು. ವೈದಿಕ ಸಿದ್ಧಾಂತದ ವಿರುದ್ಧ ದೇಶದ ಎಲ್ಲ ಅವೈದಿಕ ಶಕ್ತಿಗಳನ್ನು ಮೊಟ್ಟ ಮೊದಲ ಬಾರಿಗೆ ಒಂದುಗೂಡಿಸಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ. ಹೊಸ ಅವೈದಿಕ ಸಿದ್ಧಾಂತಕ್ಕಾಗಿ ಚಡಪಡಿಸುತ್ತಿದ್ದವರ ದಾರಿಗಳೆಲ್ಲ ಕಲ್ಯಾಣದ ಕಡೆಗೆ ಮುಖ ಮಾಡಿದವು. ಎಲ್ಲೆಲ್ಲಿಂದಲೋ ಬಂದವರು ಕಲ್ಯಾಣದ ಹೆಬ್ಬಾಗಿಲ ಬಳಿ ಇರುವ ಪ್ರಶಸ್ತ ಸ್ಥಳದಲ್ಲಿ ಉಳಿದರು. ಆ ಬಯಲಲ್ಲಿ ಪುಟ್ಟ ಹಳ್ಳ ಹರಿಯುತ್ತಿದೆ. ಸುತ್ತೆಲ್ಲ ಹಸಿರು ಹರಡಿಕೊಂಡಿದೆ. ಆ ಸ್ಥಳಕ್ಕೆ ಇಂದಿಗೂ 'ಬಂದವರ ಓಣಿ' ಎಂದೇ ಕರೆಯುತ್ತಾರೆ.

ಬಂದವರ ಓಣಿಗೆ ನದಿಗಳಂತೆ ಹರಿದುಬಂದವರೆಲ್ಲ ಬಸವಾದ್ವೈತದ ಸಾಗರದಲ್ಲಿ ಒಂದಾದರು. ಬಸವಾದ್ವೈತ ಅರಿವು ಮತ್ತು ಆಚಾರವನ್ನು ನಡೆ ನುಡಿಸಿದ್ಧಾಂತವಾಗಿಸುವಲ್ಲಿ ತಮ್ಮ ಬದುಕನ್ನೇ ಪಣಕ್ಕಿಟ್ಟರು. ಬಸವಣ್ಣನವರ ಜೊತೆ ಸೇರಿ ಸೈದ್ಧಾಂತಿಕವಾಗಿ ಬಸವಣ್ಣನೇ ಆದರು. ಅದಕ್ಕಾಗಿ ಎಲ್ಲ ಕಷ್ಟನಷ್ಟಗಳನ್ನು ಅನುಭವಿಸಿದರು. ಕೊನೆಯಲ್ಲಿ ಸಮಗಾರ ಹರಳಯ್ಯ ಮತ್ತು ಮಧುವರಸರ ಮಕ್ಕಳ ಮದುವೆಯನ್ನು ನೆಪವಾಗಿಸಿಕೊಂಡು 'ವಿಲೋಮ ವಿವಾಹವಿದು, ಧರ್ಮಶಾಸ್ತ್ರಕ್ಕೆ ವಿರುದ್ಧವಾದುದು' ಎಂದು ಲೋಕಮಾನ್ಯವಾದ ಬಸವತತ್ತ್ವದ ವಿರುದ್ಧ ಗುಲ್ಲೆಬ್ಬಿಸಿದರು. ವೈದಿಕರ ಶಾಸ್ತ್ರಗಳು ಹೇಳಿದಂತೆ ಬಿಜ್ಜಳನ ಶಸ್ತ್ರಗಳು ಕೇಳಿದವು. ಕಲ್ಯಾಣ ನಗರದಲ್ಲಿ ಶರಣರ ಹತ್ಯಾಕಾಂಡವಾಯಿತು. ಎಲ್ಲಿಂದಲೋ ಬಂದು ಶರಣರಾದವರಲ್ಲಿ ಅನೇಕರು ಹುತಾತ್ಮರಾದರು. ಅವರ ಬಹುಪಾಲು ವಚನಗಳು ಬೆಂಕಿಗೆ ಆಹುತಿಯಾದವು. ಅಳಿದುಳಿದವರು ದಿಕ್ಕೆಟ್ಟುಹೋದರು.



## ಶರಣರು

ಎಲ್ಲಿಂದಲೊ ಬಂದವರು ಅವರು
ಬಂದವರ ಓಣಿಯ ತುಂಬಿದವರು.
ನುಡಿದರವರು ಸರಳ ನುಡಿಯನು
ನಡೆದರವರು ಕಠಿಣ ನಡೆಯನು.

ಕಂದಹಾರದಿಂದಲೊ ಕಾಶ್ಮೀರದಿಂದಲೊ
ಮಾಳವದಿಂದಲೊ ಕೇರಳದಿಂದಲೊ
ಎಲ್ಲೆಲ್ಲಿಂದಲೊ ಬಂದವರು ಅವರು
ಬಸವಣ್ಣನ ಜೊತೆಯಲಿ ನಡೆದವರು.

ಹೊನ್ನ ಕಿರೀಟ ಪಲ್ಲಕ್ಕಿಯವರಲ್ಲ ಅವರು
ಆನೆ ಕುದುರೆ ಒಂಟೆಯವರಲ್ಲ ಅವರು
ಅರಿವು ಆಚಾರವಾಗಿಸಿ ಬದುಕಿದವರು
ಭವಿತನವ ದಾಟಿ ಅನುಭಾವ ಕಂಡವರು.

ಎಲ್ಲಿಂದಲೊ ಬಂದವರು ಅವರು
ಲೋಕವನ್ನೇ ನಾಕ ಮಾಡಿದವರು
ಕಣಕಣದಲಿ ದೇವರ ಕಂಡವರು
ಎಲ್ಲರನು ಶಿವನೆಂದು ನಂಬಿದವರು

ಕಾಳಾಮುಖರು ಸಕಲಶೈವರು ವೈದಿ...
ಗಾಣಪತ್ಯರು ಸಿದ್ಧರು ನಾಥ ಅನಾಥ...
ಬಡವರು ಸಿರಿವಂತರು ಮತ ಮೀರಿ...
ಜಾತಿ ಕಳೆದರು ಬಸವಣ್ಣನೇ ಆದರ...

ಎಲ್ಲಿಂದಲೊ ಬಂದು ಎಲ್ಲರೊಡನೆ ...
ಶರಣಸಂಕುಲ ನಿರ್ಮಿಸಿದವರು ಅ...
ಬ್ರಹ್ಮ ಒಂದೇ ಬ್ರಹ್ಮಾಂಡ ಒಂದೇ ...
ಮಾನವಕುಲ ಒಂದೇ ಎಂದು ಸಾರಿದ...

■ ರಂಜಾನ್ ದ...


# ರಾವಣನ ಪುರಾಣ ಮೋದಿಗೇನು ಗೊತ್ತು?

## ಥೂತ್ತೇರಿ

ಕನ್ನಡನಾಡಿನ ಹೊಲಗಳೆಲ್ಲಾ ಒಣಗಿನಿಂತಿವೆ. ಕೆರೆಕಟ್ಟೆಗಳು ಬರಿದಾಗಿವೆ. ಅದಾವುದನ್ನೂ ಗಣನೆಗೆ ತೆಗೆದುಕೊಂಡಂತೆ ಕಾಣದ ಜನಸ್ತೋಮ ದಸರಾ ಹಬ್ಬದಲ್ಲಿ ಮುಳುಗಿದೆ. ಮುಖ್ಯವಾಗಿ ಕಾವೇರಿ ಕಾರಣಕ್ಕೆ ಹೊತ್ತಿ ಉರಿದ ಮಂಡ್ಯ ತನಗೆ ತಾನೇ ಸುಮ್ಮನಾಗುವ ಮುನ್ನ ಕುಮಾರಣ್ಣನ 'ಜಾಗ್ವಾರ್' ಮಂಡ್ಯದ ಮೇಲೆ ಅಪ್ಪಳಿಸಿದೆ. ಮಂಡ್ಯ ಜಿಲ್ಲೆಯ ಪ್ರತಿ ಹಳ್ಳಿಯಲ್ಲೂ ಕಂಡುಬಂದ 'ಜಾಗ್ವಾರ್' ಫ್ಲೆಕ್ಸ್‌ನಲ್ಲಿ ಗೌಡರು, ಕುಮಾರಣ್ಣ, ಅನಿತಕ್ಕ ನಿಖಿಲನ ಚಿತ್ರಗಳೇ ರಾರಾಜಿಸುತ್ತಿವೆ. ಇದೇ ಸಮಯದಲ್ಲಿ ಒಂದು ಸಾವಿರ ಬೈಕ್ ಮೆರವಣಿಗೆಯೊಂದಿಗೆ ಮಂಡ್ಯಕ್ಕೆ ದಾಳಿಯಿಟ್ಟ ಕುಮಾರಣ್ಣನ ಸಂಭ್ರಮ ನೋಡಿದ ಮಂಡ್ಯದ ಹೈದರು ಕಾವೇರಿ ಚಳವಳಿ ಜಾಗದಿಂದ ಎದ್ದು 'ಜಾಗ್ವಾರ್' ಕಡೆ ಓಡಿದರಂತಲ್ಲಾ, ಇದನ್ನು ಕಣ್ಣಾರೆ ನೋಡಿದ ಚಲುವಣ್ಣನಿಗೆ ಗೌಡರ ವಿರುದ್ಧ ಹೋರಾಡುವುದು ಅಷ್ಟು ಸುಲಭವಲ್ಲ ಅನ್ನಿಸಿ ಡಿಕೆಸಿ ಹುಡುಕುತ್ತ ಹೊರಟನಂತಲ್ಲಾ, ಥೂತ್ತೇರಿ!

* * *

ಉಡುಪಿಗೆ ಸ್ವಾಭಿಮಾನಿ ದಲಿತ ದಮನಿತರು ಲಗ್ಗೆಯಿಟ್ಟ ಹೊಡೆತಕ್ಕೆ ಆ ಪ್ರಾಂತ್ಯದ ತರಡಿಲ್ಲದ ನರಿಗಳು ಪರಾರಿಯಾಗಿದ್ದವಂತಲ್ಲಾ. ದಲಿತರ ದನಿಗಳೆಲ್ಲಾ ಒಗ್ಗೂಡಿ ಅಷ್ಟ ಮಠಗಳಲ್ಲಿನ ಅನಾಚಾರಗಳನ್ನು ಬಯಲಿಗೆಳೆಯುವ ಸಮಯಕ್ಕೆ ಸರಿಯಾಗಿ ಛಲವಾದಿ ನಾಯಕ ಶಿವರಾಂ ಬಿಜೆಪಿ ಬಾಗಿಲಿಗೆ ಹೋಗಿ ನಿಂತಿದ್ದಾರಂತಲ್ಲಾ, ಇದರಿಂದ ಅಚ್ಚರಿಗೊಂಡ ಚೆಡ್ಡಿಗಳು ಕುಚೋದ್ಯವೆಂಬಂತೆ ನಗಾಡಿ "ಈ ಶಿವರಾಂ ಹಣ ಮಾಡುವುದರಲ್ಲಿ ತುಂಬಾ ನುರಿತ ವ್ಯಕ್ತಿ, ಸರ್ಕಾರದ ಇಲಾಖೆಗಳಲ್ಲಿ ಹೊಡೆದ ದುಡ್ಡಿನಲ್ಲೇ ಮಧುಚಂದ್ರ ಮಾಡಿದವನು. ದಲಿತರಿಗಾಗಿ ಮೀಸಲಾದ ಇಲಾಖೆ ಹಣದಲ್ಲೇ ದಲಿತ ಸೇನೆ ಕಟ್ಟಿದವನು. ಎಲ್ಲಕ್ಕಿಂತ ಮುಖ್ಯವಾಗಿ ದಲಿತ ಮುಖ್ಯಮಂತ್ರಿ ಬೇಕೆಂದು ನಾಡಿನ ತುಂಬ ಓಡಾಡಿ ಕಡೆಗೆ ಮೂಡಿಗೆರೆಗೆ ಹೋಗಿ ಮೋಟಮ್ಮನಿಗೂ ಚಾಡಿ ಹೇಳಿ ದಾರಿ ತಪ್ಪಿಸಿದವನು. ಅದೇನೇ ಆಗಲಿ ಭ್ರಷ್ಟತೆಯಲ್ಲಿ ನೈಪುಣ್ಯ ಸಾಧಿಸಿರುವ ಶಿವರಾಂನ ಪಡೆಯ ಅಗತ್ಯ ನಮಗಿದೆ. ಆದ್ದರಿಂದ ದಲಿತ ಮೋರ್ಚಾ ವಿಭಾಗವನ್ನು ಆತನಿಗೆ ವಹಿಸಿ, ಅವನ ಪಡೆಯನ್ನು ಭಜರಂಗದಲ್ಲಿ ವಿಲೀನ ಮಾಡಿಕೊಳ್ಳೋಣ. ಈಶ್ವರಪ್ಪನ ರಾಯಣ್ಣ ಬ್ರಿಗೇಡ್ ಜೊತೆಗೆ ಶಿವರಾಂ ಸೇನೆ ಸೇರಿದರೆ ಬಿಜೆಪಿ ಸೋಲಿಸುವವರು ಈ ಭೂಮಿಯ ಮೇಲೆ ಇಲ್ಲ" ಎಂದು ಠರಾವು ಪಾಸು ಮಾಡಿದವಂತಲ್ಲಾ, ಥೂತ್ತೇರಿ!!



* * *

ಚೆಡ್ಡಿಗಳು ತಮ್ಮ ವೇಷದಲ್ಲಿ ಬದಲಾವಣೆ ಮಾಡಿಕೊಂಡಿವೆ. ಅಂದರೆ ಖಾಕಿ ಚೆಡ್ಡಿ ಬದಲು ಕಂದುಬಣ್ಣದ ಪ್ಯಾಂಟು. ಅದೇ ಬಣ್ಣದ ಕಾಲು ಚೀಲ. ಅದೇ ಟೋಪಿ. ಅದೇ ಲಾಠಿಯಂತೆ. ಮುಖ್ಯವಾಗಿ ಪ್ಯಾಂಟಿಗೆ ಭಡ್ತಿ ಪಡೆಯಲು ಕಾರಣ ದೊಗಳೆ ಚೆಡ್ಡಿಯಿಂದಾದ ಅನಾಹುತಗಳಂತೆ. ಚೆಡ್ಡಿಗಳ ಕೈಕೆಲಸಗಳಲ್ಲಿ ಚೆಡ್ಡಿ ಬಿಚ್ಚುವಂತೆ ಇರಲಿಲ್ಲ, ಇದೊಂದು ಅನುಕೂಲ ಬಿಟ್ಟರೆ ಇನ್ನುಳಿದಂತೆ ಮಾಣಿಗಳ ಮರ್ಮಾಂಗಗಳು ಬೈಟೆಕ್‌ನ ಎಲ್ಲರಿಗೂ ದರ್ಶನ ಭಾಗ್ಯ ಕರುಣಿಸುತ್ತಿದ್ದವಂತೆ. ಸುಂದರ ಸ್ತ್ರೀಯರನ್ನು ನೋಡಿ ಉದ್ರೇಕಗೊಳ್ಳುವ ಕೆಲ ಹಳೆ ಚೆಡ್ಡಿಗಳು, ಮಾಣಿಗಳ ಬಳಿಚಿಕೊಂಡ ತೊಡೆ ನೋಡಿ ಅನ್ಯಮನಸ್ಕರಾಗುತ್ತಿದ್ದವಂತೆ.

ಇದೆಲ್ಲವನ್ನು ಪರಿಶೀಲಿಸಿದ ಭಾಗವತ ಕರೆಯಾದರೂ ಕಾಣದಂತ ಕಂದುಬಣ್ಣದ ಪ್ಯಾಂಟುಗಳಿಗೆ ಆರ್ಡರ್ ಕೊಟ್ಟನಂತೆ. ಆದರೇನು ಈ ವೇಷದಲ್ಲಿ ಸ್ವತಃ ಭಾಗವತನೇ ಗುಜರಿ ಅಂಗಡಿಯ ಅಬ್ದುಲ್ ಖಾದರ್ ತರ ಕಾಣುವುದೊಂದು ವಿಶೇಷ. ಛದ್ಮ ವೇಷದ ಚೆಡ್ಡಿಗಳು ಯಾವ ವೇಷ ಬದಲಿಸಿದರೂ ಕೂಡ ಮೆದುಳು ಮಾತ್ರ ಅದೇಯಂತಲ್ಲಾ, ಥೂತ್ತೇರಿ!!

* * *

ಎಂದಿನಂತೆ ಭಾರತದ ಚೆಡ್ಡಿಗಳ ಪ್ರಧಾನಿಯಾದ ನರೇಂದ್ರ ಮೋದಿ ಉಗ್ರವಾದಿಗಳನ್ನು ರಾವಣನ ಸಂತತಿಗೆ ಹೋಲಿಸಿದ್ದಾರಲ್ಲಾ. ಇತಿಹಾಸ ತಿರುಚುವುದೇನೂ ಇವರುಗಳ ಹುಟ್ಟು ಗುಣ. ಆದರೆ ಪುರಾಣವನ್ನು ಸರಿಯಾಗಿ ಗ್ರಹಿಸಿಲ್ಲವಂತಲ್ಲಾ. ಮೋದಿ ಉಗ್ರಗಾಮಿಗಳನ್ನು ಗ್ರಹಿಸುವುದಕ್ಕೆ ಮೊದಲು ತನ್ನ ಟೀಮನ್ನೇ ನೋಡಿ ತಿಳಿದುಕೊಳ್ಳುವುದು ಬಹಳ ಇದೆ. ಮೋದಿ ಬಳಗ ಸಾವಿರಾರು ವರ್ಷದಿಂದ ಆಚರಿಸಿಕೊಂಡು ಬಂದ ಅಸ್ಪೃಶ್ಯತೆ ಮತ್ತು ಜಾತಿಯತೆಯನ್ನು ಜಗತ್ತಿನ ಯಾವ ರಾಷ್ಟ್ರಗಳೂ ಆಚರಿಸಿಲ್ಲ, ಮಕ್ಕಳು, ಮುದುಕರು ಮತ್ತು ಮಹಿಳೆಯರನ್ನು ದಹಿಸಿದ ಇತಿಹಾಸ ಮೋದಿ ಪಡೆಗಿದೆ. ಇನ್ನುಳಿದಂತೆ ಮುಸ್ಲಿಂ ಉಗ್ರಗಾಮಿಗಳಿಗೆ ಮುಸ್ಲಿಮರಾದರೂ ಸರಿ, ಉಳಿದವರಾದರೂ ಸರಿ, ಅವರ ಕತ್ತಿಗಳಲ್ಲಿ ಅಂತಹ ಸಮಾನತೆಯಿದೆ. ಅವರ ಬಾಂಬುಗಳು ಸಮಾನವಾಗಿ ಕೊಲ್ಲುತ್ತವೆ. ಅವು ತುಂಬ ಜಾತ್ಯತೀತವಾಗಿವೆ. ಉಗ್ರಗಾಮಿ ಎಂದರೆ ಅದೊಂದು ಅಮಾನುಷ ಸ್ಫೋಟಕ ಯಂತ್ರ. ಅಂತಹವುಗಳನ್ನು ರಾವಣ ಸಂಹಾರಕ್ಕೆ ಹೋಲಿಸಿರುವ ಈ ನಮ್ಮ ಮೋದಿಜಿಯವರ ಅಜ್ಞಾನಕ್ಕೆ ಏನು ಹೇಳಬೇಕು. ನಮ್ಮ ಪುರಾಣದ ರಾವಣ ಇತ್ತೀಚೆಗೆ ಅನಾವರಣ ಗೊಳ್ಳುತ್ತಿರುವ ಮಹಾಜ್ಞಾನಿ. ಈತನ ಹತ್ತು ತಲೆಗಳು ದಶಕ ಪುರಾಣಗಳನ್ನು ಹೇಳುತ್ತವೆ. ಮಹಾ ವೈಣಿಕ, ಮಹಾ ವೇದಶಾಸ್ತ್ರ ಪಾರಂಗತ, ಸಂಗೀತ ವಿದ್ವಾಂಸ, ರಾಜನೀತಿಜ್ಞ, ಒಳ್ಳೆ ಆಡಳಿತಗಾರ, ಒಳ್ಳೆಯ ತಂದೆ ಮತ್ತು ಒಳ್ಳೆಯ ಗಂಡ ಕೂಡ. ಇದ್ಯಾವುದೂ ಅಲ್ಲದ ಲಾಠಿ ವೀರ ಮೋದಿ ರಾವಣನನ್ನ ಉಗ್ರಗಾಮಿ ಎಂದಿರುವುದು ಸಹಜವಾಗಿದೆ.

ರಾವಣ ಹೆಣ್ಣುಮಕ್ಕಳ ಪಾಲಿಗೆ ಎಂತಹ ಸಭ್ಯ ನಡವಳಿಕೆಯವನಾಗಿದ್ದ ಎಂದರೆ, ಸೀತೆ ಇಷ್ಟಪಡದೆ ತಾನು ಮೋಹಿಸಲಾರೆ ಎಂದಿದ್ದ. ಚೆಡ್ಡಿಗಳ ಇತಿಹಾಸದಲ್ಲೇ ಇಂತಹದೊಂದು ವಾಗ್ದಾನವಿಲ್ಲ! ಜಗತ್ತಿನ ಪುರಾಣದಲ್ಲೇ ಮೊಟ್ಟಮೊದಲು ಮಹಿಳಾ ಮೀಸಲಾತಿ ತಂದವನು, ಲಂಕೆಯ ರಕ್ಷಣೆಗಾಗಿ ಲಂಕಿಣಿಯನ್ನು ನೇಮಿಸಿದ್ದ. ಅಶೋಕ ವನದಲ್ಲಿ ಸೀತೆಯ ಜೊತೆಗೆ ವನವನ್ನು ನೋಡಿಕೊಳ್ಳಲು ತ್ರಿಜಟೆಯನ್ನು ನಿಯಮಿಸಿದ್ದ. ದಂಡಕಾರಣ್ಯದ ಉಸ್ತುವಾರಿಯನ್ನು ತಾಟಕಿಗೆ ವಹಿಸಿದ್ದ. ಲಂಕೆಯ ಹೆಬ್ಬಾಗಿಲನ್ನ ಕಾಯಲು ಸಿಂಹಿಕೆಯನ್ನು ನೇಮಿಸಿದ್ದ ಇವರೆಲ್ಲಾ ನಮ್ಮ ಸುಷ್ಮಾ ಸ್ವರಾಜ್, ಉಮಾಭಾರತಿ, ಸ್ಮೃತಿ ಇರಾನಿ, ಶೋಭಾ ಕರಂದ್ಲಾಜೆಯಷ್ಟೆ ನಿಷ್ಠಾವಂತ ಹೆಣ್ಣುಮಕ್ಕಳಾಗಿದ್ದರು. ಇಂತಹ ಹೆಣ್ಣುಮಕ್ಕಳ ನಾಯಕ ಮೋದಿ ಒಳ್ಳೆಯ ಗಂಡನಾಗಿಯೂ ಕಾಣಿಸಿಲ್ಲ, ಆದರೂ ರಾವಣ ಸಂಹಾರ ಉಗ್ರ ಸಂಹಾರವಂತೆ, ಥೂತ್ತೇರಿ!!! ■

# 06 ⏮ ಚಿತ್ರದುರ್ಗ

## ಧರ್ಮಪತ್ನಿ ಸುಮ್ಮನಿರಲು ಸಾಧ್ಯವೇ?

ಅದು 1992, ಮದುವೆಯಾಗಿ ವರ್ಷ ಕಳೆದಿತ್ತು, ತಾನೂ ರಾಜಕಾರಣ ಮಾಡಬೇಕು, ರಾಜಕೀಯ ಅಧಿಕಾರ ಪಡೆಯಬೇಕು, ಅನುಭವಿಸಬೇಕು ಎನ್ನುವ ಗೀಳು ಅವಳ ನೆತ್ತಿಗಡರಿತ್ತು. ಹಾಗಾಗಿ 92ರಲ್ಲಿ ಮಠದ ಜಗದ್ಗುರು ಶಿವಮೂರ್ತಿಗಳು ಬೇಕು ಬೇಡಾ ಎನ್ನುವ ಸೊಲ್ಲೆತ್ತಲೂ ಬಿಡದಂಗೆ ಬಸವರಾಜನ್ ತನ್ನ ಹೆಂಡತಿಯ ರಾಜಕೀಯಕ್ಕೆ ಸಾತ್ ನೀಡಿಬಿಟ್ಟ. ಆ ಚುನಾವಣೆಯಲ್ಲಿ ಹೆಂಡತಿಯ ಎದುರು ಯಾರೂ ನಾಮಪತ್ರ ಸಲ್ಲಿಸದಂತೆ ನೋಡಿಕೊಂಡದ್ದಲ್ಲದೇ ಹೆಂಡತಿ ಸೌಭಾಗ್ಯ ಅವಿರೋಧವಾಗಿ ಆಯ್ಕೆಯಾಗುವಂತೆ ನೋಡಿಕೊಂಡ. ಆಗ ಮಠದ ತಿಜೋರಿಯಿಂದ ಖರ್ಚಾದ ರೊಕ್ಕ 6 ಲಕ್ಷವಂತೆ. ಅಲ್ಲಿಂದಲೇ ನೋಡಿ ಮಠದ ಸಂಪತ್ತು ಗಂಡ-ಹೆಂಡತಿಯ ರಾಜಕೀಯ ತೆವಲಿಗೆ ಬಳಕೆಯಾಗತೊಡಗಿದ್ದು.

ಅಲ್ಲಿಂದ ಸೌಭಾಗ್ಯ ರಾಜಕಾರಣಿಯಾಗಿ ಮಿಂಚತೊಡಗಿದಳು. ನಂತರ 1995ರಲ್ಲಿ ತಾಲ್ಲೂಕು ಪಂಚಾಯ್ತಿ ಚುನಾವಣೆಯಲ್ಲಿ ಗೆದ್ದಳು. ಆಮೇಲೆ 2001ರಲ್ಲೂ ಜಿ.ಪಂ. ಚುನಾವಣೆಗೆ ನಿಂತು ಗೆದ್ದು ಅಧ್ಯಕ್ಷೆಯಾದಳು. ನೋಡನೋಡುತ್ತಿದ್ದಂತೆಯೇ ಸೌಭಾಗ್ಯ ಗಂಡ ಬಸವರಾಜನಿಗಿಂತ ಜಿಲ್ಲೆಯಲ್ಲಿ ಪರಿಚಿತ ರಾಜಕಾರಣಿಯಾಗಿಬಿಟ್ಟಳು. ಜೊತೆಗೆ ಅವಳೊಳಗೆ ದರ್ಪ, ಸರ್ವಾಧಿಕಾರಿ ಗುಣಗಳು ಒಮ್ಮೆಲೇ ವಿಜೃಂಭಿಸಲಾರಂಭಿಸಿದವು. ಇಲ್ಲಿಂದಲೇ ಹೆಂಡತಿಯ ರಾಜಕೀಯ ಏರುಮುಖ ಕಂಡು ಬಸವರಾಜನ್‌ನ ಒಳಗೊಳಗೆ ಸಣ್ಣಗೆ ಆತಂಕ ಶುರುವಾಯಿತು: ಅವನೊಳಗಿನ ಪುರುಷತ್ವ ಸೆಟೆದುನಿಂತಿತು. ಆಗಲೇ ಹೆಂಡತಿಯಂತೆ ತಾನೂ ಯಾವುದಾದರೂ ಚುನಾವಣೆಗೆ ನಿಂತು ರಾಜಕಾರಣಿಯಾಗಬೇಕು ಅನ್ನಿಸಿತು. ಎಲ್ಲರಿಗೂ ಟಿಕೆಟಿಗೆ ಶಿಫಾರಸು ಮಾಡುವ ತನಗೆ ಟಿಕೆಟು ದಕ್ಕಿಸಿಕೊಳ್ಳೋದು ಕಷ್ಟವಾ ಅಂತ ಲೆಕ್ಕಾಚಾರ ಹಾಕಿದ ಬಸವರಾಜನ್ ಎಡವಿದ್ದೇ ಅಲ್ಲಿ, ಬಸವರಾಜನ್ ದಾವಣಗೆರೆ ಚಿತ್ರದುರ್ಗ ಪದವೀಧರ ಕ್ಷೇತ್ರದಿಂದ ಸ್ಪರ್ಧಿಸಲು 1996ರಲ್ಲಿ ಎಲ್ಲಾ ಪಕ್ಷಗಳಲ್ಲೂ ಟಿಕೇಟಿಗಾಗಿ ಅಲೆದಾಡಿ ಬಂದನಾದರೂ ಯಾವ ಪಕ್ಷದ ಟಿಕೆಟು ಸಿಗದೆ ಮಂಗಳಾರತಿ ಎತ್ತಿಸಿಕೊಂಡಿದ್ದ ಕೊನೆಗೆ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿದು ಮಠದ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದರೂ ಸಿಕ್ಕಿದ್ದು ಸೋಲು ಮಾತ್ರ. ಗಂಡ ಸೋತನಂತರ ಸೌಭಾಗ್ಯ ಏನೂ ಕೊರಗಲಿಲ್ಲ.

ತನ್ನ ರಾಜಕೀಯ ಭವಿಷ್ಯವನ್ನು ಹೇಗಾದರೂ ಮಾಡಿ ಎತ್ತರಕ್ಕೆ ಒಯ್ದುಬಿಡುವ ಕನಸಿತ್ತಲ್ಲ, ಆ ನಿಟ್ಟಿನಲ್ಲಿ 2001ರಲ್ಲಿ ಮತ್ತೆ ಜಿ.ಪಂ. ಚುನಾವಣೆಗೆ ನಿಂತು ಗೆದ್ದುಬಂದಳು. ಬಸವರಾಜನ್‌ಗೆ ಹೆಂಡತಿಯ ರಾಜಕೀಯ ಅದೃಷ್ಟದ ಒಂದಂಶವೂ ಬೆಂಬಲಿಸಲಿಲ್ಲ, ಆಕೆಯದೇನು ಅದೃಷ್ಟವೋ ಗೆದ್ದ ಆರಂಭದಲ್ಲೇ ಜಿ.ಪಂ. ಅಧ್ಯಕ್ಷೆಯಾದಳು. ಅಷ್ಟೊತ್ತಿಗಾಗಲೇ ಶಿವಮೂರ್ತಿಗಳು ಜಗದ್ಗುರು ಪಟ್ಟ ಕಿತ್ತೊಗೆದು ಶರಣರು ಎನ್ನುವ ಹೊಸ ವೇಶ, ಹೊಸ ಹೆಸರು ಇಟ್ಟುಕೊಂಡು ವೈಚಾರಿಕರು ಅಂತಲೂ, ಬುದ್ಧಿಜೀವಿಗಳೆಂತಲೂ ತಮ್ಮದು ಪ್ರಗತಿಪರ ಮಠವೆಂದು ಬಣ್ಣಿಸಿಕೊಳ್ಳತೊಡಗಿದ್ದರು. ಅಂತವರೂ ಸಹ ಸೌಭಾಗ್ಯಳನ್ನು ಚಿತ್ರದುರ್ಗ ಜಿ.ಪಂ. ಅಧ್ಯಕ್ಷೆ ಮಾಡಲು ಬಸವರಾಜನ್‌ಗೆ ಸಾಥ್ ನೀಡಿದ್ದರು. ಅಧ್ಯಕ್ಷೆಯಾದದ್ದೇ ತಡ, ಚಿತ್ರದುರ್ಗ ಜಿಲ್ಲೆಯಾದ್ಯಂತ ತನ್ನ ರಾಜಕೀಯ ಅಧಿಕಾರದ ಹವಾ ಬೀಸಬೇಕು ಎಂತಲೇ ದಾಂಗುಡಿಯಿಡುತ್ತಾಳೆ. ಅವಳ ಅಧಿಕಾರ ದರಬಾರಿನೆದುರು ಗಂಡ ಬಸವರಾಜನ್ ವೀಕಾಗಿಬಿಟ್ಟನಾದರು 2003ರಲ್ಲಿ ಅದೆಂಗೋ ಜೆ.ಡಿ.ಎಸ್. ಟಿಕೆಟು ಹೊಂದಿಸಿಕೊಂಡು ಚಿತ್ರದುರ್ಗ ವಿಧಾನಸಭಾ ಚುನಾವಣೆಗೆ ನಿಂತನಾದರು ಗೆಲುವು ಅವನಿಗೆ ಒಲಿದು ಬರಲಿಲ್ಲ, ಇತ್ತ ಹೆಂಡತಿ ಪ್ರತಿ ಚುನಾವಣೆಯಲ್ಲಿ ಗೆಲ್ಲುತ್ತಿದ್ದರೆ ತಾನು ಮಾತ್ರ ಪದೇಪದೇ ಸೋಲುತ್ತಿರುವುದು ಅವನಲ್ಲಿ ಸಣ್ಣ ಕೀಳರಿಮೆಯನ್ನು ಹುಟ್ಟುಹಾಕಿತ್ತು, ಅದು ಸಂಸಾರದೊಳಗೂ ಬುಸುಗುಡಲು ಆರಂಭಿಸಿತ್ತು, ಆದರೆ ಪೂರ್ಣಪ್ರಮಾಣದ ಹೆಡೆ ಬಿಚ್ಚಿರಲಿಲ್ಲ.



2008ರಲ್ಲಿ ಕೊನೆಯ ಪ್ರಯತ್ನವೆಂಬಂತೆ ಕಣಕ್ಕಿಳಿದ ಬಸವರಾಜನ್ ಜೆಡಿಎಸ್‌ನಿಂದ ಗೆದ್ದದ್ದು ಅವನ ಕೀಳರಿಮೆ ಮತ್ತಷ್ಟು ಉಲ್ಬಣಿಸುವುದನ್ನು ತತ್ಕಾಲಕ್ಕೆ ತಡೆಹಿಡಿದಿತ್ತು, ಆಗಲು ಕೂಡಾ ಚುನಾವಣಾ ರಾಜಕಾರಣದ ಪಟ್ಟುಗಳನ್ನು ಅರಗಿಸಿಕೊಂಡು ಮತದಾರರನ್ನು ಮರಿಸುವ ನಾಜೂಕುಗಳನ್ನು ಕರಗತ ಮಾಡಿಕೊಂಡಿದ್ದ ಸೌಭಾಗ್ಯಳಿಂದಾಗಿಯೇ ಗಂಡ ಬಸವರಾಜನ್ ಗೆದ್ದು ಬರುವಂತಾಯ್ತು ಅನ್ನೋ ಮಾತುಗಳು ಬಸವರಾಜನ್‌ನ ಪ್ರತಿಷ್ಠೆಯನ್ನು ತಿವಿದಿದ್ದವು.

ಶಾಸಕನಾದ ಬಸವರಾಜನ್ ರಾಜಕೀಯವಾಗಿ ಇನ್ನೇನು ಹೆಂಡತಿಯ ಸರಿಸಮಾನವಾಗಿ ನಿಂತು ಬಿಟ್ಟ ಅಂದುಕೊಳ್ಳುವ ವೇಳೆಗೆ ಆತ ಹೆಂಡತಿಯ ಕೈಗೊಂಬೆಯಾಗಿಬಿಟ್ಟ. ಬಸವರಾಜನ್‌ನ ರಾಜಕೀಯ ಶಕ್ತಿಗಳಾಗಿದ್ದ ಕೃಷ್ಣಮೂರ್ತಿ, ಮಂಜಪ್ಪ, ಶ್ರೀರಾಂ, ಕಾಂತರಾಜ್, ಖಾದರ್‌ಖಾನ್, ನಿಸ್ಸಾರ್‌ರಂತಹ ನಿಷ್ಠಾವಂತರನ್ನೂ ಸೌಭಾಗ್ಯ ನಿಧಾನವಾಗಿ ಆತನಿಂದ ದೂರ ಮಾಡಿದಳು. ಈ ನಡುವೆ ಗುರು ತೊಂಡಮಾಲ್ ಎನ್ನುವ ವ್ಯಕ್ತಿಯೊಬ್ಬನ ಪ್ರವೇಶವಾಯಿತು. ಸೌಭಾಗ್ಯಳ ಆಪ್ತ ಸಹಾಯಕನ ಗೆಟಪಲ್ಲಿ ವಕ್ಕರಿಸಿಕೊಂಡ ಗುರು ತೊಂಡಮಾಲ್ ಕೊನೆಗೆ ಆಕೆಯ ಕಾರ್ ಡ್ರೈವರ್ ಕಾಯಕದಿಂದ ಪಿಎ ವರೆಗಿನ ಬೆಳೆದ. ಈಗ ಬಸವರಾಜನ್ ಬೆಂಗಳೂರು ಸೇರಿಕೊಂಡ ನಂತರ ಸೌಭಾಗ್ಯಳ ಸಮಸ್ತ ದೇಖಾರೇಖಿ ನೋಡಿಕೊಳ್ಳುತ್ತಿರೋದು ಇದೇ ಗುರು ತೊಂಡುಮಾಲ್.

ಇಂಥಾ ಬಸವರಾಜನ್ ಮತ್ತು ಸೌಭಾಗ್ಯ ನಡುವೆ 2016 ಏಪ್ರಿಲ್‌ತನಕ ಎಲ್ಲವೂ ನೆಟ್ಟಗಿತ್ತು, ಹಾಗಂತ ಹೊರಜಗತ್ತು ನಂಬಿಕೊಂಡಿತ್ತು. ಆದರೆ ಸೌಭಾಗ್ಯ ರಾಜಕಾರಣದ ಒಂದೊಂದೇ ಮೆಟ್ಟಿಲು ಏರಿದಂತೆಲ್ಲಾ ಗಂಡಹೆಂಡತಿಯ ನಡುವೆ ಒಂದೊಂದು ಕಂದಕ ಸೃಷ್ಟಿಯಾಗುತ್ತಲೇ ಇತ್ತು, ಅಲ್ಲದೇ ಈಕೆಯ ಸರ್ವಾಧಿಕಾರಿ ವರ್ತನೆಯಿಂದಲೇ ತಾನು ಮಠದಿಂದ ಹೊರದಬ್ಬಿಸಿಕೊಳ್ಳಬೇಕಾಯ್ತು ಅನ್ನೋ ಅಸಮಾಧಾನವಿತ್ತಲ್ಲ, ಅದು ಸಹ ಇವರಿಬ್ಬರನ್ನು ಬೇರ್ಪಡಿಸುತ್ತಲೇ ಬಂತು. ಅದೀಗ ವಿಪರೀತಕ್ಕೆ ಬಂದು ತಲುಪಿದೆ. ತಮ್ಮ ದಾಂಪತ್ಯದೊಳಗಿನ ಈ ಪೊಲಿಟಿಕಲ್ ಸಂದಿಗ್ಧತೆಯನ್ನು ಅವರಿಬ್ಬರು ಈಗಲಾದರೂ ಅರ್ಥ ಮಾಡಿಕೊಳ್ಳದಿದ್ದರೆ ದುರಂತವನ್ನು ತಪ್ಪಿಸಲಾಗುವುದಿಲ್ಲ.


■ ಟಿ.ಎನ್. ಷಣ್ಮುಖ



## ಸ್ವಾಮಿಯ ಕಾರು ಮತ್ತು ಸಾಲ ವಸೂಲಿ

ಇತ್ತೀಚೆಗೆ ಚಿತ್ರದುರ್ಗದ ಟೀಚರ್ಸ್ ಕಾಲೊನಿಯಲ್ಲಿರುವ ಬಸವರಾಜನ್ ಮನೆಯ ಗೇಟನ್ನು ತೆರೆಯಲಿಕ್ಕೆ ಸಾಧ್ಯವಿಲ್ಲದಂತೆ ಕಾರೊಂದು ಅಡ್ಡ ಬಂದು ನಿಂತಿತ್ತು, ಅದು ಆಕಸ್ಮಾತ್ತಾಗಿ ನಿಲ್ಲಿಸಿದ ಕಾರಲ್ಲ, ಬೇಕಂತಲೇ ಮನೆಯ ಮುಂದೆ ಧರಣಿ ನಡೆಸುವಂತೆ ನಿಲ್ಲಿಸಿದ್ದ ಕಾರು. ಅಷ್ಟಕ್ಕೂ ಹಾಗೆ ಕಾರನ್ನು ಅಡ್ಡ ನಿಲ್ಲಿಸಿದವರು ಹೊಸದುರ್ಗದ ಕುಂಚಿಟಿಗ ಲಿಂಗಾಯತ ಸಮುದಾಯದ ಶಾಂತವೀರ ಮಹಾಸ್ವಾಮಿಗಳು! ಕಾರಣವಿಷ್ಟೆ, ಸೌಭಾಗ್ಯ ಬಸವರಾಜನ್ ಚುನಾವಣೆಗಾಗಿ ಆ ಮಠದಿಂದ 50 ಲಕ್ಷ ರೂಪಾಯಿ ಸಾಲ ಎತ್ತಿದ್ದಳು. ಆದರೆ ವಾಪಾಸು ಕೊಟ್ಟಿರಲಿಲ್ಲ. ಮಠದಿಂದ ನೀಡಿದ ರೊಕ್ಕ ಭಕ್ತರದ್ದು, ಸಾಲದ್ದಕ್ಕೆ ಶಾಂತವೀರ ಸ್ವಾಮಿಗಳು ಕಾಯಕಯೋಗಿ, ತಾವೇ ಮಠದ ಜಮೀನಿನಲ್ಲಿ ವ್ಯವಸಾಯ ಮಾಡುವ ಮೂಲಕ ಕಾಯಕಕ್ಕೆ ಅರ್ಥ ತಂದವರು. ದಾಳಿಂಬೆ ಬೆಳೆದು ಮಾದರಿಯಾದವರು. ಇಂತಹ ಶ್ರಮಿಕ ಸ್ವಾಮೀಜಿ, ನಮ್ಮ ಸಮುದಾಯದ ರಾಜಕಾರಣಿ ಗೆದ್ದರೆ ಸಮಾಜಕ್ಕೆ ಒಳ್ಳೆಯದಾಗುತ್ತದೆ ಎನ್ನುವ ಕಾರಣಕ್ಕೆ ಆರ್ಥಿಕ ಸಹಾಯ ಮಾಡಿದ್ದರು. ರಾಜಕೀಯ ಪಿತ್ತ ನೆತ್ತಿಗೇರಿಸಿಕೊಂಡ ಸೌಭಾಗ್ಯಳಿಗೆ ಅಂತಹ ಕಾಳಜಿ ಎಲ್ಲಿಂದ ಬರಬೇಕು. ಕಡೇಪಕ್ಷ ಪಡೆದ ಸಾಲ ವಾಪಾಸ್ ಕೇಳಿದರೂ ನೆಟ್ಟಗೆ ಪ್ರತಿಕ್ರಿಯಿಸಿರಲಿಲ್ಲ, ಹಾಗಾಗಿ ವಸೂಲಿಗೆ ಶ್ರೀಗಳೇ ಬಂದರು. ಗೇಟಿಗೆ ಅಡ್ಡ ನಿಲ್ಲಿಸಿದ ಕಾರಿನಿಂದ ಗುರುಗಳು ಕೆಳಗೆ ಇಳಿಯಲಿಲ್ಲ, ಸೌಭಾಗ್ಯ ಏನೇನೋ ಸಬೂಬು ಹೇಳಿದರೂ ಅವರು ಬಗ್ಗಲಿಲ್ಲ, ಕೊನೆಗೆ ಮತ್ತಿಬ್ಬರು ಸ್ವಾಮಿಗಳು ಎಂಟ್ರಿ ಕೊಟ್ಟು 15 ಲಕ್ಷ ಕೊಡಿಸಿ ಉಳಿದ 35 ಲಕ್ಷಕ್ಕೆ ಟೈಂ ಕೊಡಿಸಿದ ನಂತರ ಸ್ವಾಮಿಗಳು ಹೊರಟರು. ವಿಚಿತ್ರ, ಅಂದರೆ ಈ ಶಾಂತವೀರ ಸ್ವಾಮಿಗಳು ಸೌಭಾಗ್ಯಳ ದೊಡ್ಡಪ್ಪನ ಮಗ. ಸಂಬಂಧದಲ್ಲೂ ಸಹೋದರ!!


# 'ಚಲೋ ಉಡುಪಿ'ಗೆ 'ಕನಕ ನಡೆ' ಎಂಬ ಚೆಡ್ಡಿಗಳ ಪರ್ಯಾಯ




ದಲಿತ ದಮನಿತರ ಸ್ವಾಭಿಮಾನಿ ಹೋರಾಟ ಸಮಿತಿಯು ಅಕ್ಟೋಬರ್ 9ರಂದು ಹಮ್ಮಿಕೊಂಡಿದ್ದ 'ಚಲೋ ಉಡುಪಿ' ಎಂಬ ಸಮಾವೇಶ ಅದ್ಭುತ ಯಶಸ್ಸು ಕಂಡಿದ್ದನ್ನು ನೋಡಿ ಚೆಡ್ಡಿಗಳಿಗೆ ಉರಿ ಹತ್ತಿದೆ. ರಾಜ್ಯದ ದಲಿತರು, ದಮನಿತರು, ಅಲ್ಪಸಂಖ್ಯಾತರು, ಎಡಪಂಥೀಯರು, ಪ್ರಗತಿಪರರು ಜೊತೆಗೂಡಿ ನಡೆಸಿದ ಈ ಸಮಾವೇಶ ಅವರಲ್ಲಿ ನಡುಕವನ್ನೂ ಉಂಟುಮಾಡಿದೆ. ಹೀಗೆ ಬಹುಸಂಖ್ಯಾತ ಶೋಷಿತರು ಒಗ್ಗಟ್ಟಾದರೆ ಅಲ್ಪಸಂಖ್ಯಾತರಾದ ತಮ್ಮ ಜಾತಿ ಬುದ್ಧಿ ಮತ್ತು ಕೋಮು ಕಿತಾಪತಿ ಇನ್ನು ಮುಂದೆ ನಡೆಯುವುದಿಲ್ಲ ಎಂಬ ಅರಿವೂ ಅವರಿಗಾಗಿದೆ.

ಇವರೆಲ್ಲರದ್ದು ಅದೆಂತಹ ನೀಚ ಬುದ್ಧಿ ಎಂದರೆ ಈ ಸಮಾವೇಶದಿಂದಾಗಿ ಉಡುಪಿ ಮಲಿನಗೊಂಡಿದೆಯಂತೆ. ಅದಕ್ಕೇ ಅವರೆಲ್ಲ ಸೇರಿ ಅಕ್ಟೋಬರ್ 23ರಂದು ಅದೇ ಉಡುಪಿಯಲ್ಲಿ 'ಸ್ವಚ್ಛ ಉಡುಪಿ' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಅಷ್ಟೇ ಅಲ್ಲ, ಸದಾ ಹಿಂದುಳಿದ ವರ್ಗಗಳ ಜನರಿಗೆ ಮಂಕುಬೂದಿ ಎರಚಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಈ ನೀಚರು ತಮ್ಮ ಈ ಕಾರ್ಯಕ್ರಮಕ್ಕೆ 'ಕನಕ ನಡೆ' ಎಂಬ ಹೆಸರನ್ನೂ ಇಟ್ಟು ಆ ಮೂಲಕ ಹಿಂದುಳಿದ ವರ್ಗಗಳನ್ನು ಸೆಳೆಯಲು ಪ್ರಯತ್ನಿಸುತ್ತಿದ್ದಾರೆ. ಜೊತೆಗೆ ಇದು ನರಹಂತಕ ನರೇಂದ್ರ ಮೋದಿಯ ಖೊಟ್ಟಿ ಯೋಜನೆಯಾದ 'ಸ್ವಚ್ಛ ಭಾರತ್ ಅಭಿಯಾನ'ದ ಭಾಗವೆಂಬಂತೆ ತೋರಿಸಲು ತಮ್ಮ ಪೋಸ್ಟರ್‌ಗಳಲ್ಲಿ ಮಹಾತ್ಮ ಗಾಂಧಿಯ ಕೈಗೆ ಕಸಪೊರಕೆ ಕೊಟ್ಟು ಅವರು ರಸ್ತೆಯನ್ನು ಗುಡಿಸುತ್ತಿರುವಂತಹ ಚಿತ್ರವನ್ನು ಉಪಯೋಗಿಸಿಕೊಂಡಿದ್ದಾರೆ.


ಅಂದಹಾಗೆ ಈ ಮುಠಾಳ ಯೋಜನೆಯ ರೂವಾರಿ ಬೇರೆ ಯಾರೂ ಅಲ್ಲ, ಆತ ಚಕ್ರವರ್ತಿ ಸೂಲಿಬೆಲೆ ಎಂಬ ಚೆಡ್ಡಿ ನಾಯಕ! ಈ ಸೂಲಿಬೆಲೆ ಇತ್ತೀಚೆಗೆ ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗಾ ಅವರ ಕೊಲೆ ಪ್ರಕರಣದಲ್ಲಿ ಮೊದಲ ಆರೋಪಿಯಾಗಿ ಜೈಲಿಗೆ ಹೋಗಿದ್ದ ನರೇಂದ್ರ ಶೆಣೈ ಎಂಬಾತನ ಪರವಾಗಿ ಬ್ಯಾಟ್ ಮಾಡಿದವನು. ಕೊಲೆ ಆರೋಪಿ ಶೆಣೈ ಜಾಮೀನಿನ ಮೇಲೆ ಹೊರ ಬಂದಾಗ ಆತ ಕಾರ್ಗಿಲ್ ಯುದ್ಧದಲ್ಲಿ ಹೋರಾಡಿ ಬಂದ ಯೋಧನಂತೆ ಸ್ವಾಗತಿಸಿದವನು ಇದೇ ಸೂಲಿಬೆಲೆ!!



ಶೆಣೈನ 'ಮೋದಿ ಬ್ರಿಗೇಡ್' ಈಗ 'ಯುವ ಬ್ರಿಗೇಡ್' ಎಂದು ಮರುನಾಮಕರಣಗೊಂಡಿದೆ. ಅದರ ಮೂಲಕ ಸೂಲಿಬೆಲೆ ಮತ್ತು ಶೆಣೈ ತಂಡ ಧರ್ಮಾಂಧ ಮತ್ತು ಕೋಮುವಾದಿ ಹಿಂದೂತ್ವ ಪಟಾಲಂ ಅನ್ನು ಕಟ್ಟಿಕೊಂಡು ದಲಿತರ ಮತ್ತು ದಮನಿತರ ಪಾದಗಳು ಮತ್ತು ಧಿಕ್ಕಾರಗಳು ಸ್ವಚ್ಛ ಮಾಡಿದ್ದ ಉಡುಪಿಯನ್ನು ಮತ್ತೆ ಗಲೀಜುಗೊಳಿಸಲು ಹೊರಟಿದ್ದಾರೆ. ಇಂತಹ ನೀಚರಿಗೆ ನಮ್ಮ ರಾಜ್ಯದ ಹಲವು ಪ್ರಗತಿಪರ ಯುವಜನತೆ ಹಲವು ಸವಾಲುಗಳನ್ನು ಹಾಕಿದ್ದಾರೆ. ಅವುಗಳನ್ನು ನಮ್ಮ ಓದುಗರಿಗೆ ಇಲ್ಲಿ ನೀಡಿದ್ದೇವೆ.

## [illegible]

ಕಿಂದಿ ಮಾಡಿ
ನನ್ನ ನಡಿಗೆ ನಿಲ್ಲಿಸಿ
ಅದ್ಯಾವ ನಡಿಗೆ ಮಾಡುವಿರೋ?



ದೇಗುಲದ ಹೊರಗೆ
ಕಟ್ಟಿ ಹಾಕಿ
ಜನಿವಾರಿಗಳೆಲ್ಲ ಬಹಿಷ್ಕರಿಸಿ
ಎನ್ನ ನೂಕಿ
ಈಗದ್ಯಾವ ನಡಿಗೆ ಮಾಡುವಿರೋ?

ಬರುವರು ನೋಡು ನನ್ನ ಜನ
ಕುಲವನರಿಯದ ನನ್ನ ಜನ
ಅವರ ಕೈ ಹಿಡಿದು ನಡೆವೆ
ಕಿಂಡಿಯೊಳಗಲ್ಲ
ಗರ್ಭಗುಡಿಗೆ
ಆಗ ನಡುಗುವುದು ನಿಮ್ಮೆದೆ
ಕನಕ ನಡಿಗೆಗೆ.

- ವಿಕಾಸ್ ಆರ್ ಮೌರ್ಯ

## ಕನಕ ನಮ್ಮ ಕಡೆಗೆ. ಎತ್ತ ನಿಮ್ಮ ನಡಿಗೆ?

'ಚಲೋ ಉಡುಪಿ'ಯ ದಿನ ಕೃಷ್ಣ ಮತ್ತು ಕನಕರು ಮಾತಾಡಿಕೊಂಡು ಉಡುಪಿಗೆ ಬಂದಿದ್ದರಂತೆ. ಮೆರವಣಿಗೆ ಮುಗಿಸಿದ ಬಳಿಕ ಕೃಷ್ಣ ಮಠಕ್ಕೂ ಹೋಗಿದ್ದರಂತೆ. ಅಲ್ಲಿ ಹೊರಗಿರುವ ಕನಕರ ಮೂರ್ತಿಯ ಅವಸ್ಥೆ ಮಠದೊಳಗಿನ ಅವ್ಯವಸ್ಥೆ ಎಲ್ಲ ನೋಡಿ ಬೇಸರವಾದರೂ ಇಲ್ಲಿಯೇ ಉಂಡು ಹೋಗೋಣ ಎಂದು ಒಂದು ಪಂಕ್ತಿಯಲ್ಲಿ ಕೂತರಂತೆ. ಅಷ್ಟರಲ್ಲಿ ಇಬ್ಬರ ಬಣ್ಣದಿಂದಲೇ ಇವರು ತಮ್ಮವರಲ್ಲ ಎಂದು ಖಾತರಿಪಡಿಸಿಕೊಂಡ ಇಬ್ಬರೂ ಸಿಟ್ಟಿನಿಂದ ಬಂದು "ನೋಡಿ ನಿಮಗೆ ಈ ಪಂಕ್ತಿಯಲ್ಲಿ ಜಾಗವಿಲ್ಲ, ಆಚೆ ಹೋಗಿ"



ಎಂದು ಎಬ್ಬಿಸಿದರಂತೆ. ಪಂಕ್ತಿ ಭೇದ ನೋಡಿ ಬೇಸರಗೊಂಡ ಕೃಷ್ಣ-ಕನಕರು ಉಳಿದ ಪಂಕ್ತಿಯಲ್ಲಿ ಕುಳಿತವರನ್ನೆಲ್ಲ "ಬನ್ನೀ ಹೋಗೋಣ" ಎಂದು ಅಲ್ಲಿಂದ ಕರೆದುಕೊಂಡು ಬಂದು ಬೀಡಿನ ಗುಡ್ಡೆಯ ಮೈದಾನಕ್ಕೆ ಬಂದು, ಎಲ್ಲರೊಂದಿಗೆ ಬೆರೆತು, ಫ್ರೀ ರೈಸ್ ತಿಂದು, ಜಿಗ್ನೇಶ್ ಭಾಷಣ ಕೇಳಿ ಮತ್ತೆ ಪ್ರಸ್ಥಾನಗೈದಿರುವರೆಂದು ಇದೀಗ ಸಂದೇಶ ಬಂದಿದೆ.

ಕನಕ ನಮ್ಮ ಕಡೆಗೆ. ಎತ್ತ ನಿಮ್ಮ ನಡಿಗೆ?

- ಶಶಿ

## ಮನುವಾದಿ ಕೊಳೆಯನ್ನು ತೊಳೆತೊಳೆದು ಗುಡಿಸಿರಿ

ಸ್ವಚ್ಛಗೊಳಿಸುವರಂತೆ ಮನುವಾದಿಗಳು ಉಡುಪಿಯನ್ನು
ಚಲೋ ಉಡುಪಿಯಲ್ಲಿ ದಲಿತ ದಮನಿತರು ನಡೆದ ದಾರಿಯನ್ನು

ತೊಳೆಯಿರಿ ತೊಳೆಯಿರಿ ತೊಳೆತೊಳೆದು ಗುಡಿಸಿರಿ
ನಿಮ್ಮ ಪಾಪಗಳ ತೊಳೆಯಲು ಇದು ಸಕಾಲ

ಯಾವುದರಲ್ಲಿ ತೊಳೆಯುವಿರಿ?
ಪ್ರಾಣ ಹೋಗುವಾಗ ನೀರು ಕೊಡಿ ಎಂದರೂ
ಸೆಗಣಿ ತಿನ್ನಿಸಿ ಚಿತ್ರಹಿಂಸೆ ನೀಡಿ ಕೊಂದಿರಲ್ಲ,
ಆ ಪ್ರವೀಣ ಪೂಜಾರಿಯ ತಾಯಿಯ ಕಣ್ಣೀರು
ಈಗಲೂ ಉಕ್ಕುಕ್ಕಿ ಹರಿಯುತ್ತಿದೆ.
ನಿಮ್ಮ ಪಾಪ ತೊಳೆಯಲು ಅದು ಸಾಕಾಗಬಹುದೆ?

ಯಾವುದರಲ್ಲಿ ತೊಳೆಯುವಿರಿ?
ಮನೆಯ ಚಾವಡಿಯ ಗೋಡೆಗೆ ತೂಗು ಹಾಕಿದ
ರಾಜಾ ಮೀಸೆಯ ಗಟ್ಟಿ ಜೀವದ ಹಿರೀಕ
ಪಾಟಾಳಿ ಕೃಷ್ಣಯ್ಯನ ಫೋಟೊ ನೋಡಿ
ಹೆಂಡತಿ ಮಕ್ಕಳು ಈಗಲೂ ಅಳುತ್ತಾರೆ.
ನಿಮ್ಮ ಪಾಪ ತೊಳೆಯಲು ಅದು ಸಾಕಾಗಬಹುದೆ?

ಯಾವುದರಲ್ಲಿ ತೊಳೆಯುವಿರಿ?
ಕರಾಣಿ ಮತೀನ್ ಎಂಬ ಕನಸು ಕಂಗಳ ಹುಡುಗನನ್ನು
ಕಂಡ್ಲೂರು ಹೊಳೆಯಲ್ಲಿ ಕರಾಳ ರಾತ್ರಿಯಲ್ಲಿ
ಮೇಲೆ ಬರದಂತೆ ಮುಳುಗಿಸಿಯೇ ಕೊಂದು ಬಿಟ್ಟಿರಲ್ಲ,
ಈಗಲೂ ನೆತ್ತರಾಗಿ ಹರಿಯುತ್ತಿದೆ ಆ ಹೊಳೆಯ ನೀರು.
ನಿಮ್ಮ ಪಾಪ ತೊಳೆಯಲು ಅದು ಸಾಕಾಗಬಹುದೆ?

ಯಾವುದರಲ್ಲಿ ತೊಳೆಯುವಿರಿ?



ನಮೋ ಬ್ರಿಗೇಡ್‌ನ ಬಂದೂಕಿನ ಗುಂಡು ಚಿಮ್ಮಿಸಿದ
ವಿನಾಯಕ ಬಾಳಿಗಾನ ನೆತ್ತಿಯ ನೆತ್ತರು ಗೋಡೆಗಂಟಿ
ಇನ್ನೂ ಕಪ್ಪು ಕಲೆಯಾಗಿ ಹೆಪ್ಪುಗಟ್ಟಿ ಹಸಿಯಾಗಿದೆ,
ಬಾಳಿಗಾ ತಾಯಿಯ ಒಡಲೀಗ ಕಣ್ಣೀರ ಕಡಲು.
ನಿಮ್ಮ ಪಾಪ ತೊಳೆಯಲು ಅದು ಸಾಕಾಗಬಹುದೆ?

ಯಾವುದರಲ್ಲಿ ತೊಳೆಯುವಿರಿ?
ಈ ದೇಶದ ದಲಿತರು ನಿತ್ಯವೂ ಸುರಿಸುವ
ಬೆವರನ್ನು ಟ್ಯಾಂಕರ್‌ಗಳಲ್ಲಿ ಸಂಗ್ರಹಿಸಿ ಕೊಡುತ್ತೇವೆ.
ಕನಕದಾಸರ ಪದಗಳಿಂದ ಸಮತೆ ಮಮಕಾರದ
ಮನುಷ್ಯತ್ವದ ಜೀವಜಲ ಬಸಿದು ಕೊಡುತ್ತೇವೆ
ನಿಮ್ಮ ಪಾಪ ತೊಳೆಯಲು ಅದು ಸಾಕಾಗಬಹುದೆ?

ದಲಿತ ದಮನಿತರ ರೋಷ ಬೆಂಕಿಯಾಗುವ ಮುನ್ನ
ಸಮಾನತೆಯ ಸಂಘರ್ಷ ಸುನಾಮಿಯಾಗುವ ಮುನ್ನ
ಸ್ವಾತಂತ್ರ್ಯದ ಕನಸುಗಳು ರಕ್ತಕ್ರಾಂತಿಯಾಗುವ ಮುನ್ನ
ಮನುವಾದಿ ಮನಸುಗಳ ಶತಮಾನದ ಕೊಳೆಯನ್ನು
ತೊಳೆಯಿರಿ ತೊಳೆಯಿರಿ ತೊಳೆತೊಳೆದು ಗುಡಿಸಿರಿ,

- ಶಶಿಧರ ಹೆಮ್ಮಾ

* ಪ್ರವೀಣ ಪೂಜಾರಿ ಇತ್ತೀಚೆಗೆ ದನ ಸಾಗಾಟ ಮಾಡುವಾಗ ಹಿಂ… ಜಾಗರಣ ವೇದಿಕೆಯ ಕಾರ್ಯಕರ್ತರಿಂದ ಕೊಲೆಯಾದ ಯುವಕ
* ಪಾಟಾಳಿ ಕೃಷ್ಣಯ್ಯ ಆರು ವರ್ಷಗಳ ಹಿಂದೆ ಗೋರಕ್ಷಣೆಯ ನೆಪ… ಬಜರಂಗಿಗಳಿಗೆ ಬಲಿಯಾದ ದೇವಾಲಯವೊಂದರ ಅರ್ಚಕ
* ಕರಾಣಿ ಮತೀನ್ ಪೊಲೀಸರು ತಮ್ಮ ನಡುರಾತ್ರಿಯ ಕಾರ್ಯಾಚರಣೆ… ನೀರಲ್ಲಿ ಮುಳುಗಿ ಸಾಯಿಸಿದ ಗೋಸಾಗಾಟಗಾರ
* ವಿನಾಯಕ ಬಾಳಿಗಾ ನಮೋ ಬ್ರಿಗೇಡ್ ಸ್ಥಾಪಕ ನರೇಶ್ ಶೆಣೈ ಯೋ… ಸುಪಾರಿ ಕೊಲೆಗೆ ಬಲಿಯಾದ ಆರ್‌ಟಿಐ ಕಾರ್ಯಕರ್ತ.

## ಗೋಡೆಗೆ ಅಂಟಿದ ರಕ್ತ




ಇದು ಯುವ ಬ್ರಿಗೇಡ್ ನೇತಾರರಿಂದ ಕೊಲೆಗೀಡಾದ ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗಾ ನೆತ್ತರು ಅಂಟಿದ ಕಾಂಪೌಂಡು ಗೋಡೆ. ಬಾಳಿಗಾ ಅವರ ಮನೆಯ ಮುಂದಿನ ರಸ್ತೆಯಲ್ಲಿ ಈ ರಕ್ತ ಅಂಟಿದ ಗೋಡೆ ಈಗಲೂ ನಡೆದ ಕ್ರೌರ್ಯಕ್ಕೆ, ಬ್ರಿಗೇಡ್ ಬಾಯ್‌ಗಳ ಮಾನಸಿಕ ಗಲೀಜಿಗೆ ಸಾಕ್ಷಿಯಾಗಿ ನಿಂತಿದೆ. ಈಗ ಬಾಳಿಗಾ ಕೊಲೆಯ ಆರೋಪ ಹೊತ್ತವರು, ಆರೋ… ಹೊತ್ತವರ ಬೆಂಬಲಕ್ಕೆ ಬಹಿರಂಗವಾಗಿ ನಿಂತವರು 'ಕನಕ ನಡೆ' ಎ… ಉಡುಪಿಗೆ ಹೊರಟಿದ್ದಾರೆ. ದಲಿತರ ನಾಯಕತ್ವದಲ್ಲಿ ನಡೆದ 'ಚಲೋ ಉಡು… ಸಮಾವೇಶದಿಂದ ಗಲೀಜುಗೊಂಡ ಉಡುಪಿಯನ್ನು ಗುಡಿಸಿ ಸ್ವಚ್ಛಗೊಳಿಸು… ಬ್ರಿಗೇಡ್ ಬಾಯ್‌ಗಳ ಉದ್ದೇಶವಂತೆ.

'ಚಲೋ ಉಡುಪಿ'ಯ ವಿಚಾರಗಳಿಂದ 'ಅಶುದ್ಧಿ'ಗೊಂಡ ಉಡುಪಿಯ… ಸ್ವಚ್ಛಗೊಳಿಸಲು ಹೊರಟ ಸೂಲಿಬೆಲೆ ಬ್ರಿಗೇಡ್, ಸ್ವತಃ ತಮ್ಮವರಿಂ… ಹರಿದ ಬಾಳಿಗಾ ರಕ್ತವನ್ನು ಮೆತ್ತಿಕೊಂಡಿರುವ ಈ ಕಾಂಪೌಂಡು ಗೋಡೆಯ… ಶುದ್ಧಿಗೊಳಿಸುವುದು ಹೇಗೆ? ಉಡುಪಿಗೆ ಹೋಗುವಾಗ ದಾರಿ … ಮಂಗಳೂರು ಸಿಗುತ್ತದೆ. ನಗರ ಮಧ್ಯದಲ್ಲೇ ಬಾಳಿಗಾ ರಕ್ತ ಮೆತ್ತಿದ ಗೋಡೆ… ಸಿಗುತ್ತದೆ. ಉಡುಪಿಯಲ್ಲಿ ಪೊರಕೆ ಹಿಡಿಯುವ ಮುನ್ನ ಬ್ರಿಗೇಡ್ ಬ… ಹುಡುಗರು ಈ ಗೋಡೆಯನ್ನೊಮ್ಮೆ ಸಂದರ್ಶಿಸಿ, ಆ ಗೋಡೆಯ ಮು… ಮನೆಯಲ್ಲಿ ಕಣ್ಣೀರು ಸುರಿಸುತ್ತಾ ಕೂತಿರುವ ಬಾಳಿಗಾ ಅವರ ವಯೋ… ಹೆತ್ತವರ ಮುಖವನ್ನೊಮ್ಮೆ ನೋಡಿ. ಬಾಳಿಗಾ ಕೊಲೆಯ ಆರೋಪಿ… ಬಿಡಿಸಿಕೊಳ್ಳಲು ಜೈಲಿನ ಬಾಗಿಲಿಗೆ ತೆರಳಿದ ನಿಮ್ಮ ನಾಯಕನನ್ನೊ… ಪ್ರಶ್ನಿಸಿ. ನಂತರ ಪೊರಕೆ ಹಿಡಿದು ಯಾರನ್ನು, ಯಾವುದನ್ನು ಗುಡಿಸಬೇ… ಸ್ವಚ್ಛಗೊಳಿಸಬೇಕು ಎಂದು ನಿರ್ಧರಿಸಿ.

- ಮುನೀರ್ ಕಾಟಿ…

## ಉಡುಪಿ ಈಗ ಪವಿತ್ರ ಭೂಮಿ



ಉಡುಪಿ ಮಠದ ಪುರೋಹಿ… ಜಿಡ್ಡುವಾಸನೆ ಹೊಡೆಯುವ ಶಲ್ಯ … ಚಂದ್ರಾಕೃತಿಯ ಕಚ್ಚೆ ಪಂಚೆಗಳ… ತೊಳೆಯದೆ ಯಾವಕಾಲವಾದವೇ… ಮೊದಲು ಅದನ್ನು ತೊಳೆದುಕೊ… ಶುಭ್ರವಾಗಲಿ. ಅವರ ದೊ… ಹೊಟ್ಟೆಯ ಮೇಲೆ ಇರುವ ಬ… ಬಣ್ಣದ ಜನಿವಾರಗಳು ತೊಳೆದುಕೊ… ಕರಿ ಮಸಿಯಾಗಿವೆ. ಜನರಿಗೆ ಸು… ಮೇಲೆ ಸುಳ್ಳು ಹೇಳಿದ ಮಂತ್ರಪಠ… ಬಾಯಿಗಳು ಗಬ್ಬುವಾ… ಹೊಡೆಯುತ್ತಿವೆ. ಇನ್ನು ಸದಾ ಕಾಣಿಕೆ ಹುಂಡಿಯ ಭರ್ತಿಯ ಬ… ಚಿಂತಿಸುವ ಮನಸ್ಸುಗಳು ಕೊಳೆತುಹೋಗಿವೆ. ಇವೆಲ್ಲವನ್ನು ಶುಚಿಗೊ… ಕೊಳ್ಳಬೇಕಾದ ಇವರ ಬಿಗ್ರೇಡ್‌ಗಳು ನಮ್ಮ 'ಚಲೋ ಉಡುಪಿ' ಕಾರ್ಯಕ್ರ… ಬಗ್ಗೆ ಮಾತನಾಡುತ್ತಿವೆ. ಇವರಿಗೆ ನಾವೀಗ ಹೇಳೋಣ: ನಮ್ಮ ಕಾರ್ಯಕ್ರಮ… ಉಡುಪಿ ನಗರದ ಹಲವು ವರ್ಷದ ಶಾಪಗಳು ಪರಿಹಾರವಾಗಿ ಅ… ಶಾಪಮುಕ್ತವಾಗಿದೆ. ನಮ್ಮ ಕಾರ್ಯಕ್ರಮ ನಡೆದ ಜಾಗ ಈಗ ಮಾನವ… ಮೌಲ್ಯಗಳನ್ನು ಸಾರಿದ ಪವಿತ್ರಭೂಮಿ ಆಗಿದೆ ಎಂದು.

- ಶ್ರೀಪಾಲ್ …

# 'ಸ್ವಚ್ಛ ಭಾರತ', 'ಡಿಜಿಟಲ್ ಇಂಡಿಯ': ಒಂದು ಅವಲೋಕನ

ಮೋದಿ ಸರ್ಕಾರದ 'ಸ್ವಚ್ಛ ಭಾರತ', ...ಡಿಜಿಟಲ್ 'ಇಂಡಿಯ' ಮುಂತಾದ ಅಭಿಯಾನಗಳಿಗೂ ...ಹಿಂದಿನ ಸರಕಾರಗಳ ಯೋಜನೆಗಳಿಗೂ ಇರುವ ...ಧಾನ ವ್ಯತ್ಯಾಸವೆಂದರೆ ಅಪಾರ ವೆಚ್ಚದ ...ಡಂಬರಯುತ ಪ್ರಚಾರಾಂದೋಲನ. 'ಸ್ವಚ್ಛ ಭಾರತ ...ಭಿಯಾನ'ದ ಪ್ರಚಾರಕ್ಕೆ ಖರ್ಚಾಗುತ್ತಿರುವ ದುಡ್ಡಿನ ...ಂದು ಭಾಗವನ್ನು ತೆರಿಗೆಯ ಮೂಲಕ ...ರೋಕ್ಷವಾಗಿ ಜನರಿಂದಲೇ ವಸೂಲಿ ಮಾಡುತ್ತಿರು...ವು ಬೇರೆ ವಿಚಾರ! ಎರಡು ವರ್ಷಗಳ ಹಿಂದೆ ...ೋದಿಯ ಜನ್ಮದಿನದಂದು ಪ್ರಾರಂಭಿಸಲಾದ ಈ ...ಭಿಯಾನವನ್ನು ಗಾಂಧೀಜಿಯ 100ನೇ ಜನ್ಮದಿನ ...ಳುವ 2019ರ ಇಸವಿಗೆ ಮೊದಲು ಮಾಡಿಮುಗಿಸ...ಲಾಗುವುದೆಂದು ಹೇಳಲಾಗಿದೆ. ಭಾರತದ ಎಲ್ಲಾ ...041 ನಗರಗಳಲ್ಲಿನ 1.04 ಕೋಟಿ ಮನೆಗಳಲ್ಲಿ ...ಚಾಲಯ ನಿರ್ಮಾಣ, 5.08 ಲಕ್ಷ ಸಾರ್ವಜನಿಕ, ...ಮುದಾಯಿಕ ಶೌಚಾಲಯ ನಿರ್ಮಾಣ, ...ಯೊಂದು ಮನೆಯಿಂದ ತ್ಯಾಜ್ಯ ಸಂಗ್ರಹ ಮತ್ತು ...ತ್ಯಾಜ್ಯ ವಿಲೇವಾರಿಯ ಗುರಿಗಳನ್ನು ಹೊಂದಿರುವ ... ಮಹತ್ವಾಕಾಂಕ್ಷಿ ಯೋಜನೆಯ ಒಟ್ಟು ವೆಚ್ಚ ...2,009 ಕೋಟಿ ರೂಪಾಯಿಗಳೆಂದು ...ಂದಾಜಿಸಲಾಗಿದ್ದು ಇದಕ್ಕಾಗಿ ವಿಶ್ವಬ್ಯಾಂಕಿನಿಂದ 1.5 ...ಲಿಯ ಡಾಲರು ಸಾಲವನ್ನೂ ಎತ್ತಲಾಗಿದೆ.

ಮೋದಿ ಸರ್ಕಾರ ಘೋಷಿಸಿರುವ ಇದೇರೀತಿಯ ...ನ್ನೊಂದು ಯೋಜನೆಯೆಂದರೆ 'ಡಿಜಿಟಲ್ ...ಇಂಡಿಯ'. ಇದರ ಪ್ರಕಾರ 2019ರೊಳಗೆ ಎಲ್ಲರಿಗೂ ...ಬ್ರಾಡ್‌ಬ್ಯಾಂಡ್ ಸೇವೆ ಮತ್ತು ಮನೆಮನೆಗೆ ಎಲ್ಲಾ ...ಯ ಸೇವೆಗಳನ್ನು ಒದಗಿಸಲಾಗುವುದಂತೆ. ...ರಡೂ ಯೋಜನೆಗಳು ಯಾವ ಹಂತದಲ್ಲಿವೆ ...ದು ನೋಡೋಣ.

## ...ಾರತ ಎಷ್ಟು ಸ್ವಚ್ಛವಾಗಿದೆ?


'ಸ್ವಚ್ಛ ಭಾರತ' ಕಾರ್ಯಕ್ರಮ ಕೇವಲ ಕಸ ...ಡಿಸುವುದಕ್ಕಷ್ಟೆ ಸೀಮಿತವಾಗಿರುವಂತಿದೆ. ಅತ್ತ ...ಚಾಲಯ ನಿರ್ಮಾಣ ಕಾರ್ಯ ಕುಂಟುತ್ತ ಸಾಗಿದೆ. ...ಷ್ಟ್ರೀಯ ಸಮೀಕ್ಷಾ ಸಂಸ್ಥೆಯ (National ...mple Survey Organisation) ಇತ್ತೀಚಿನ ...ಧ್ಯಯನ ತಿಳಿಸುವಂತೆ 2015-16ರ ಮೊದಲ 11 ...ಗಳುಗಳ ಅವಧಿಯಲ್ಲಿ ದೇಶಾದ್ಯಂತ ಸುಮಾರು ...9 ಕೋಟಿ ಶೌಚಾಲಯಗಳನ್ನು ಕಟ್ಟಿಸಲಾಗಿದೆ. ...ದರೆ ಗ್ರಾಮೀಣ ಭಾಗದ ಶೇಕಡಾ 52.1ರಷ್ಟು ಜನ ...ವುಗಳನ್ನು ಉಪಯೋಗಿಸುತ್ತಿಲ್ಲ. ಹಳ್ಳಿ ಶಾಲೆಗಳಲ್ಲಿ ...ರ್ಯ ಒದಗಿಸಿದ ಹೊರತಾಗಿಯೂ 56.6 ...ಶತ ಜನ ಮತ್ತೂ ಬಯಲು ಶೌಚಾಲಯವನ್ನೆ ...ಸಿಕೊಂಡಿದ್ದಾರೆ. ರಾಷ್ಟ್ರೀಯ ಸಮೀಕ್ಷಾ ಸಂಸ್ಥೆಯ ...ರ ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯ ...ಕೆಗೆ ಬೇಕಾದ ನೀರಿರುವುದು ಕೇವಲ 42.5 ...ಶತ ಮನೆಗಳಲ್ಲಿ. ನೀರಿಲ್ಲದೆ ಶೌಚಾಲಯ ಕಟ್ಟಿಸಿ ...ು ಉಪಯೋಗ? ಮತ್ತೊಂದು ಮುಖ್ಯ ...ಸಮಸ್ಯೆಯೆಂದರೆ ದ್ರವತ್ಯಾಜ್ಯದ ವಿಲೇವಾರಿಗೆ ...ಶ್ಯವಿರುವ ಮೂಲಭೂತ ವ್ಯವಸ್ಥೆಗಳ ಅಲಭ್ಯತೆ. ...ಯನ ನಡೆದಿರುವ ಹಳ್ಳಿಗಳ ಪೈಕಿ ಶೇಕಡಾ ...ದಲ್ಲಿ ಚರಂಡಿ ವ್ಯವಸ್ಥೆಯೇ ಇಲ್ಲ. 44.4 ಪ್ರತಿಶತ ...ಗಳಲ್ಲಿ ಶೌಚಾಲಯಗಳ ತ್ಯಾಜ್ಯ ನೀರನ್ನು ಕೆರೆ, ...ಗಳಿಗೆ ಹರಿಸಲಾಗುತ್ತಿದೆ. ಉಳಿದ 55.6 ಪ್ರತಿಶತ ...ಗಳ ಪೈಕಿ ಶೇಕಡ 36.7ರಲ್ಲಿ ಕಾಂಕ್ರೀಟ್ ಅಥವಾ ...ವ ಕಾಲುವೆಗಳಿದ್ದರೆ ಶೇಕಡ 19ರಷ್ಟು ...ಗಳಲ್ಲಿರುವುದು ಮಣ್ಣಿನ ಕಾಲುವೆಗಳು. ಇವುಗಳಲ್ಲಿ ...ತ್ಯಾಜ್ಯದ ಶೇಕಡ 16ರಷ್ಟನ್ನು ಕೊಳಗಳಿಗೆ, ಶೇಕಡ ...ಷ್ಟನ್ನು ಸ್ಥಳೀಯ ನಾಲೆಗೆ ಮತ್ತು ಶೇಕಡ 7ರಷ್ಟನ್ನು ...ದು ಹೊಳೆಗೆ ಬಿಡಲಾಗುತ್ತಿದೆ. ಎಲ್ಲಕ್ಕಿಂತಲೂ ...ಮುಖ್ಯ ವಿಷಯವೆಂದರೆ ನೀರಿನ ಅಭಾವ ...ವಿರುವುದರಿಂದ ಇರುವ ಶೌಚಾಲಯಗಳೂ ...ಯೋಜನಕ್ಕೆ ಬಾರದಂತಾಗಿವೆ. ಮೋದಿ ಸರ್ಕಾರ ...ಡು ವರ್ಷಗಳ ಹಿಂದೆ ಪ್ರಾರಂಭಿಸಿದ್ದ 702 ...ಗಳನ್ನೊಳಗೊಂಡ 'ಸಂಸದ ಆದರ್ಶ ...ಮ ಯೋಜನೆ'ಯನ್ನು ಪರಿಶೀಲಿಸಿಕೊಳ್ಳಿ. ಇವತ್ತಿನ ...ವ ಏನೆಂದರೆ ಈ ಆದರ್ಶ ಗ್ರಾಮಗಳ ಪೈಕಿ ...ವ 80ರಷ್ಟು ಗ್ರಾಮಗಳಲ್ಲಿ ಜನ ಈಗಲೂ ...ಲು ಶೌಚಾಲಯವನ್ನೆ ನೆಚ್ಚಿಕೊಂಡಿದ್ದಾರೆ! ...ನದಲ್ಲಿ ಸ್ವಚ್ಛ ಭಾರತ ಅಭಿಯಾನ ಬರೀ ...ಜನಿಕ ಸ್ಥಳಗಳ ಸ್ವಚ್ಛತೆಯ ಮೇಲೆ ...ೇಂದ್ರೀಕರಿಸುತ್ತಿದ್ದು ಹೆಚ್ಚಿನ ಜನರಿಗೆ ಬಯಲು ಶೌಚ ...ದ ಅಪಾಯವೂ ಅದರ ಹಾನಿಯೂ [illegible] ...ಗೊತ್ತಿಲ್ಲದೆಂಬ ವಿಚಾರದ ಅರಿವಿಲ್ಲವೆಂದು ...earch Institute for Compassionate ...nomics [illegible]

ತಿಳಿದುಬಂದಿದೆ. ನಗರ ಪ್ರದೇಶಗಳಲ್ಲಿ ಪರಿಸ್ಥಿತಿ ಇನ್ನೂ ಕೆಟ್ಟದಾಗಿದೆ. ಅಲ್ಲಿ 56.4 ಪ್ರತಿಶತ ಮನೆಗಳು ಒಳಚರಂಡಿ ವ್ಯವಸ್ಥೆಗೆ ಜೋಡಿಸಲ್ಪಟ್ಟಿದ್ದರೂ ಹೆಚ್ಚಿನ ತ್ಯಾಜ್ಯ ನೇರವಾಗಿ ನದಿಗಳನ್ನು ಸೇರುತ್ತಿದೆ.

ಈ ನಡುವೆ ಇದೇ ಅಕ್ಟೋಬರ್ ತಿಂಗಳ ಎರಡನೆ ವಾರದಲ್ಲಿ ಗುಜರಾತಿನ ರಾಜಧಾನಿ ಗಾಂಧಿನಗರದಲ್ಲಿ ನಡೆದಂಥಾ ಅತ್ಯಂತ ಅಸಹ್ಯಕರ ಘಟನೆಯನ್ನು ನೋಡಿದರೆ ಚೆಡ್ಡಿಗಳು 'ಸ್ವಚ್ಛ ಭಾರತ'ವನ್ನು ತಮ್ಮದೇ ಆದ ರೀತಿಯಲ್ಲಿ ಅರ್ಥೈಸಿಕೊಂಡಿರುವ ಹಾಗೆ ತೋರುತ್ತದೆ. ಅಲ್ಲಿನ ವಿಹಿಂಪ ಮತ್ತು ಬಜರಂಗ ದಳ ಕಾರ್ಯಕರ್ತರು ಲಯನ್ಸ್ ಕ್ಲಬ್, ತಂಗನಾತ್ ಮತ್ತು ಸೆಕ್ಟರ್ 6ರ ಗರ್ಭಾ ನೃತ್ಯ ಕಾರ್ಯಕ್ರಮಗಳಿಗೆ ಬಂದವರ ಮೇಲೆಲ್ಲ ದನದ ಉಚ್ಚೆಯನ್ನು ಸಿಂಪಡಿಸಿ ಅವರನ್ನು 'ಸ್ವಚ್ಛ'ಗೊಳಿಸಲು ಶುರುಹಚ್ಚಿದ್ದರು. ಇದಕ್ಕೆ ತೀವ್ರ ಮಟ್ಟದ ಆಕ್ಷೇಪಣೆ ವ್ಯಕ್ತವಾಗಿ ಪೊಲೀಸರಿಗೆ ದೂರು ಕೊಟ್ಟ ಬಳಿಕವೆ ಈ ಹೊಲಸು ಕೆಲಸವನ್ನು ನಿಲ್ಲಿಸಲಾಗಿದೆ!

## ಗುಜರಾತ್ ಮಾದರಿ

ಮೋದಿಯ ತವರೂರಾದ ಗುಜರಾತಿನಲ್ಲಿ 'ಸ್ವಚ್ಛ ಭಾರತ ಅಭಿಯಾನ' ಸದ್ಯ ಯಾವ ಹಂತದಲ್ಲಿದೆ ಎಂದು ತಿಳಿಯಲು ರಾಜ್ಯದ ಪ್ರತಿಷ್ಠಿತ ನಗರಿ ಅಹಮದಾಬಾದಿಗೆ ಒಂದು ಪುಟ್ಟ ಭೇಟಿ ನೀಡಿದರೆ




ಸಾಕು. ತನಗೆ ಜಾಗತಿಕ ಪಾರಂಪರಿಕ ತಾಣದ ಸ್ಥಾನಮಾನ ಬೇಕೆಂದು ಕೂಗುಹಾಕುತ್ತಿರುವ ಅಹಮದಾಬಾದ್ ನಗರದಲ್ಲಿ ತ್ಯಾಜ್ಯ ವಿಲೇವಾರಿಯೆ ಸರಿಯಾಗಿಲ್ಲ. ಅಲ್ಲಿ ತಿಂಗಳೊಂದರ ಸುಮಾರು 1.14 ಲಕ್ಷ ಮೆಟ್ರಿಕ್ ಟನ್ನುಗಳಷ್ಟು ತ್ಯಾಜ್ಯ ಉತ್ಪಾದನೆಯಾಗುತ್ತಿದೆಯಾದರೂ ವಿಲೇವಾರಿ ಆಗುತ್ತಿರುವುದು ಕೇವಲ ಒಂದು ಸಣ್ಣ ಅಂಶ ಮಾತ್ರ! ಮೋದಿಗೆ ತುಂಬ ಅಚ್ಚುಮೆಚ್ಚಿನದ್ದು ಎನ್ನಲಾದ, ಶೈಕ್ಷಣಿಕ ಕ್ಷೇತ್ರೀಯ ಯೋಜನೆಯ ಭಾಗವಾದ ಸಂಸ್ಕಾರಧಾಮದಿಂದ ಬರೀ 1.5 ಕಿಮೀ ದೂರದಲ್ಲಿರುವ ಮಣಿಪುರ ಗ್ರಾಮಕ್ಕೆ ಹೋದರೆ ದಿನಾ ಬೆಳಗ್ಗೆ ನೀರಿನ ಚೊಂಬು ಹಿಡಕೊಂಡು ಬಯಲುಗಳಲ್ಲಿ ಶೌಚಕ್ರಿಯೆಗೆ ಹೋಗುತ್ತಿರುವ ಜನ ಕಾಣಸಿಗುತ್ತಾರೆ! ಬೀದಿಯ ಇಕ್ಕೆಲಗಳಲ್ಲಿಯೂ ಸಾಲುಸಾಲು ತ್ಯಾಜ್ಯದ ರಾಶಿಗಳನ್ನು ಕಾಣಬಹುದು! ಇನ್ನು ರಾಜಧಾನಿ ಗಾಂಧಿನಗರದ ಪರಿಸ್ಥಿತಿಯೂ ಭಿನ್ನವಾಗಿಲ್ಲ. ಅಲ್ಲಿನ ಸೆಕ್ಟರ್ 8 ಎಂದರೆ ಐಎಎಸ್, ಐಪಿಎಸ್, ಐಎಫ್‌ಎಸ್ ಮುಂತಾದವುಗಳಿಗೆ ಸೇರಿದ ಗಣ್ಯಾತಿಗಣ್ಯ ಅಧಿಕಾರಿಗಳು ವಾಸ ಮಾಡುವ ಪ್ರತಿಷ್ಠಿತ ಪ್ರದೇಶ. ಆದರೆ ಇವರ ಮನೆಗೆಲಸದವರು, ಕೂಲಿಯಾಳುಗಳು ಹೇಗಿದ್ದಾರೆ? ಅವರೆಲ್ಲ ಈಗಲೂ ಮುಂಜಾವದ ಹೊತ್ತಲ್ಲಿ ಶೌಚಕ್ಕಾಗಿ ಪೊದೆ ಬಯಲುಗಳನ್ನೆ ಆಶ್ರಯಿಸುವ ಪರಿಸ್ಥಿತಿ ಇದೆ!


ಅಸಲಿಗೆ ಗುಜರಾತ್ ರಾಜ್ಯದಾದ್ಯಂತ ಪೇಟೆ ಪಟ್ಟಣಗಳಲ್ಲಿ ಇಂದಿಗೂ ಮಲ ಹೊರುವ ಪದ್ಧತಿ ಜಾರಿಯಲ್ಲಿದೆ. 'ಅಭಿವೃದ್ಧಿ'ಯ ಮಾದರಿ ಎನ್ನಲಾದ ಆಧುನಿಕ ಅಹಮದಾಬಾದ್ ನಗರವೊಂದರಲ್ಲೆ 188 ಒಣ ಪಾಯಿಖಾನೆಗಳಿರುವುದಾಗಿ ಲೆಕ್ಕ ಹಾಕಲಾಗಿದೆ. 2011ರ ಜನಗಣತಿ ಕಾಲದಲ್ಲಿ ಗುಜರಾತ್ ರಾಜ್ಯದಲ್ಲಿ 12,566 ಮಲ ಹೊರುವವರಿದ್ದರು. ಸುಮಾರು 12, 13 ವರ್ಷ ಮೋದಿ ರಾಜ್ಯಭಾರ ಕಂಡಿರುವ ಗುಜರಾತಿನ ಅಸಲಿ ಚಿತ್ರಣವಿದು.

## ದೇಶಾದ್ಯಂತ ಮಲಹೊರುವಿಕೆ

ಇಡೀ ದೇಶದಲ್ಲಿ ಇಂದಿಗೂ ಐದಾರು ಲಕ್ಷದಷ್ಟು ಮಲಹೊರುವವರು ಇದ್ದಾರೆಂದು ಸಾಮಾಜಿಕ ಕಾರ್ಯಕರ್ತರು ಹೇಳುತ್ತಿದ್ದಾರೆ. ಆದರೆ ಸರಕಾರಿ ಅಂಕಿಅಂಶಗಳ ಪ್ರಕಾರ ಅವರ ಜನಸಂಖ್ಯೆ ಸುಮಾರು 1.8 ಲಕ್ಷವಂತೆ. ಇವರಲ್ಲಿ ಹೆಚ್ಚಿನವರು ಗುಜರಾತ್, ಮಹಾರಾಷ್ಟ್ರ, ಮಧ್ಯ ಪ್ರದೇಶ ಮತ್ತು ಉತ್ತರ ಪ್ರದೇಶಗಳಲ್ಲಿ ಇದ್ದಾರೆ ಎನ್ನಲಾಗಿದೆ. ಅಧಿಕಾರಿಗಳು ಸರಿಯಾದ ಅಂಕಿಅಂಶಗಳನ್ನು ನೀಡುತ್ತಿಲ್ಲ ಎನ್ನುವುದಕ್ಕೆ ಸ್ಪಷ್ಟ ನಿದರ್ಶನವೆಂದರೆ ಒಣ ಪಾಯಿಖಾನೆಗಳು ಮತ್ತು ಮಲ ಹೊರುವವರ ಸಂಖ್ಯೆಗಳ ಕುರಿತ ಗೊತ್ತುಗುರಿಯಿಲ್ಲದ ವರದಿಗಳು. ಇವು ಹಾಸ್ಯಾಸ್ಪದವೆನ್ನುವ ಮಟ್ಟಿಗೆ ಒಂದಕ್ಕೊಂದು ತಾಳೆಯಾಗುತ್ತಿಲ್ಲ! ಈ ವಿಚಾರ ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗದ (National Commission for Scheduled Castes) ಜುಲೈ 21ರ ಸಭೆಯಲ್ಲಿ ಬಯಲಾಗಿದೆ. ಉದಾಹರಣೆಗೆ 1,57,321 ಒಣ ಪಾಯಿಖಾನೆಗಳಿರುವ ತೆಲಂಗಾಣದಲ್ಲಿ ಮಲ ಹೊರುವವರ ಸಂಖ್ಯೆ ಸೊನ್ನೆ ಅಂತೆ! ಈ ನಿಷ್ಪತ್ತಿ ಛತ್ತೀಸ್‌ಗಢದಲ್ಲಿ 4391: 3; ಕರ್ನಾಟಕದಲ್ಲಿ 24,468:302 ಮತ್ತು ಮಧ್ಯಪ್ರದೇಶದಲ್ಲಿ 39,362:36 ಇದೆಯಂತೆ! ಇದೇ ಅಧಿಕಾರಿಗಳ ವರದಿ ಪ್ರಕಾರ ಕಳೆದ ಒಂದು ವರ್ಷದ ಅವಧಿಯಲ್ಲಿ ರಾಜಸ್ತಾನ, ಪಂಜಾಬ್, ಪಶ್ಚಿಮ ಬಂಗಾಳಗಳಲ್ಲಿ ಮಲ ಹೊರುವವರ ಸಂಖ್ಯೆ ಹೆಚ್ಚಾಗಿದೆಯಂತೆ!! ಇದೆಲ್ಲ ನಿಜಕ್ಕೂ ಭಾರಿ ಕುತೂಹಲಕಾರಿಯಾಗಿದೆ. ಇನ್ನು ಇವರ ಸಾಮಾಜಿಕ ಪರಿಸ್ಥಿತಿಯ ವಿಷಯಕ್ಕೆ ಬಂದರೆ ಅದರ ಸುಧಾರಣೆಗಾಗಿ 2013ರ ಬಜೆಟ್ಟಿನಲ್ಲಿ ಮುಂದಿನ ಐದು ವರ್ಷಗಳ ಅವಧಿಗೆಂದು ರೂ. 4656 ಕೋಟಿ ಮೀಸಲಿಡಲಾಗಿತ್ತು. 2015-16ರಲ್ಲಿ ತೆಗೆದಿರಿಸಲಾದ ರೂ. 470.19 ಕೋಟಿಯಲ್ಲಿ ಒಂದು ನಯಾಪೈಸೆಯೂ ಖರ್ಚಾಗಿಲ್ಲ ಮಾತ್ರವಲ್ಲ ಪ್ರಸಕ್ತ ಸಾಲಿನ ಬಜೆಟ್ ಅನುದಾನದಲ್ಲಿ ಇನ್ನಷ್ಟು ಕಡಿತ ಮಾಡಿ ಅದನ್ನೀಗ ರೂ. 10 ಕೋಟಿಗೆ ಇಳಿಸಲಾಗಿದೆ. ಇದರರ್ಥವೇನು? ಬಾಯಲ್ಲಿ ಮಗೂಮಗೂ ಎನ್ನುವ ಮೋದಿ ಸರ್ಕಾರದ ಹೊಟ್ಟೆಯೊಳಗೆ ಧಗಧಗ ಉರಿಯಿದೆ ಎಂದಲ್ಲವೆ? ದಲಿತ, ದಮನಿತರೆಲ್ಲರೂ ಇದೇ ಸ್ಥಿತಿಯಲ್ಲಿ ಕೊಳೆಯುತ್ತಿರಬೇಕು, ಮೇಲ್ಜಾತಿಗಳು ಆಳುತ್ತಿರಬೇಕು, ಮನುವಾದಿ ಜಾತಿವ್ಯವಸ್ಥೆ ಮುಂದುವರಿಯಬೇಕು ಎಂದಲ್ಲವೆ? ಇದೆಲ್ಲವೂ ಆರೆಸ್ಸೆಸ್ ಕಟ್ಟಾಳು ಮೋದಿಯ ನಡೆನುಡಿಗಳಲ್ಲೆ ವ್ಯಕ್ತವಾಗುತ್ತದೆ. ನಿಮಗೆ ಗೊತ್ತೆ, ವಾಲ್ಮೀಕಿ ಜಾತಿಗೆ ಸೇರಿದ ಮಲ ಹೊರುವವರ ಕೆಲಸವನ್ನು ಈ ಮೋದಿ ಪೂಜಾರಿ ದೇವಸ್ಥಾನವನ್ನು ಶುಚಿಮಾಡುವುದಕ್ಕೆ ಹೋಲಿಸಿದ್ದಾನೆ. ಈ ಘೋರ ದೌರ್ಜನ್ಯವನ್ನು ಆತ 'ಆಧ್ಯಾತ್ಮಿಕ ಅನುಭವ' ಎಂದು ಕರೆದಿದ್ದಾನೆ. ಅಷ್ಟೇ ಅಲ್ಲ, ಅದು ಸಮಾಜಸೇವೆಗಾಗಿ ದೇವರೆ ಅವರಿಗೆ ವಹಿಸಿದ ಕರ್ತವ್ಯ; ಹಾಗಾಗಿ ಶತಮಾನಗಳಿಂದಲೂ ಅವರು ಅದನ್ನು ಮುಂದುವರಿಸಿದ್ದಾರೆ ಎಂಬ ಸಮರ್ಥನೆಯನ್ನೂ ನೀಡಿದ್ದಾನೆ.

## ಡಿಜಿಟಲ್ ಇಂಡಿಯ

ಮೋದಿ ಸರ್ಕಾರದ ಡಿಜಿಟಲ್ ಇಂಡಿಯ ಯೋಜನೆ "ಹಳೆ ಮದ್ಯ ಹೊಸ ಬಾಟಲಿಯಲ್ಲಿ" ಎಂಬ ಗಾದೆಯನ್ನು ನೆನಪಿಸುತ್ತದೆ. ಈಗ ಆಗಿರುವುದೇನೆಂದರೆ ರಾಷ್ಟ್ರೀಯ ಆಪ್ಟಿಕಲ್ ಫೈಬರ್ ಜಾಲ (National Optical Fiber Network), ರಾಷ್ಟ್ರೀಯ ಅರಿವಿನ ಜಾಲ (National Knowledge Network) ಮತ್ತು ಇಲೆಕ್ಟ್ರಾನಿಕ್ ಆಡಳಿತ (E-Governance) ಎನ್ನುವ ಮೂರು ಹಳೆ ಯೋಜನೆಗಳನ್ನು ಒಟ್ಟು ಸೇರಿಸಿ ಡಿಜಿಟಲ್ ಇಂಡಿಯ ಎನ್ನುವ ಒಂದೇ ಹೆಸರಿನಡಿ




ತರಲಾಗಿದೆ! ತಂತಿ ಬ್ರಾಡ್‌ಬ್ಯಾಂಡ್ ಸೇವೆ ಜಾಗತಿಕವಾಗಿ ಸರಾಸರಿ ಪ್ರತಿ 100 ಜನರಲ್ಲಿ 9.4 ಜನರನ್ನು ತಲುಪಿದ್ದರೆ ನಮ್ಮಲ್ಲದು ಬರೀ 1.2ರಷ್ಟಿದೆ. ಭಾರತ ವಿಶ್ವದಲ್ಲಿ 125ನೆ ಸ್ಥಾನದಲ್ಲಿದೆ. ನಿಸ್ತಂತು ಬ್ರಾಡ್‌ಬ್ಯಾಂಡ್‌ನಲ್ಲಿ ಪ್ರತಿ 100 ಜನರಲ್ಲಿ 3.2 ಜನರನ್ನಷ್ಟೆ ತಲುಪಲು ಸಾಧ್ಯವಾಗಿದ್ದು ವಿಶ್ವದಲ್ಲಿ 113ನೆ ಸ್ಥಾನದಲ್ಲಿದೆ. ಗುರಿಸಾಧನೆಯ ವಿಷಯದಲ್ಲಿ ಶೇಕಡಾ 3ಕ್ಕಿಂತಲೂ ಕಡಿಮೆ ಪ್ರಗತಿ ಸಾಧಿಸಲಾಗಿದೆ. ಗುಜರಾತಿನ ಪ್ರತಿಷ್ಠಿತ ನಗರಿ ಅಹಮದಾಬಾದಿನ ಸ್ಥಿತಿಯನ್ನೆ ತೆಗೆದುಕೊಳ್ಳಿ. ನ್ಯಾಯಾಧೀಶರುಗಳ ಕಾಲನಿಯಿಂದ ಕೇವಲ 10 ನಿಮಿಷಗಳಲ್ಲಿ ತಲುಪಬಹುದಾದ, ಸಂಸ್ಕಾರ ಧಾಮದಿಂದ ಬರೀ 3 ಕಿಮೀ ದೂರದಲ್ಲಿರುವ ನಗರದ ಹೊರವಲಯದಲ್ಲಿ ಈಗಲೂ ಬಿಎಸ್‌ಎನ್‌ಎಲ್‌ನ ದೂರವಾಣಿ ಸೇವೆಗಳು ಲಭ್ಯವಿಲ್ಲ. ಇಲ್ಲಿ ಮೊಬೈಲ್ ಕೂಡ ಕೆಲಸ ಮಾಡುತ್ತಿಲ್ಲ. ಇನ್ನು ಗ್ರಾಮ ಪಂಚಾಯತುಗಳನ್ನು ಪರಸ್ಪರ ಜೋಡಿಸುವ ಕಾರ್ಯವೂ ತುಂಬಾ ತುಂಬಾ ಹಿಂದೆಬಿದ್ದಿದೆ. ಅತ್ತ 10 ರಾಜ್ಯಗಳ ನಕ್ಸಲ್ ಪೀಡಿತ ಪ್ರದೇಶಗಳಿಗೆ ದೂರಸಂಪರ್ಕ ಜಾಲವನ್ನು ದಾಖಲೆ ಸಮಯದಲ್ಲಿ ಮಾಡಿಮುಗಿಸಲಾಗಿದೆ ಎಂದು ಮೋದಿ ಸರ್ಕಾರ ಕೊಚ್ಚಿಕೊಳ್ಳುತ್ತಿದೆ!

ಮೋದಿ ಸರ್ಕಾರದ ಸ್ವಚ್ಛ ಭಾರತ ಅಭಿಯಾನ, ಡಿಜಿಟಲ್ ಇಂಡಿಯ, ಬುಲೆಟ್ ರೈಲು, ಸ್ಮಾರ್ಟ್ ಸಿಟಿ ಇತ್ಯಾದಿಗಳು ಬರೀ ಜನಮರುಳ ಘೋಷಣೆಗಳಾಗಿದ್ದು ಅವುಗಳ ಪ್ರಾಮಾಣಿಕತೆ ಪ್ರಶ್ನಾರ್ಹವಾಗಿದೆ. ಇದನ್ನು ಮೋದಿಯ ಹಿಂದಿನ ದಾಖಲೆಗಳೆ ಎಲ್ಲದಕ್ಕಿಂತ ಚೆನ್ನಾಗಿ ಬಿಚ್ಚಿಡುತ್ತವೆ. ಉದಾಹರಣೆಗೆ ಗುಜರಾತಿನಲ್ಲಿ 2012ರ ಚುನಾವಣೆಗಳಿಗೆ ಮೊದಲು ಬಡ ಮತ್ತು ಕೆಳಮಧ್ಯಮ ವರ್ಗಗಳಿಗೆ 5 ವರ್ಷಗಳಲ್ಲಿ 50 ಲಕ್ಷ ಮನೆಗಳನ್ನು ನಿರ್ಮಿಸುವುದಾಗಿ ಭರವಸೆ ಕೊಟ್ಟಿದ್ದ ಮೋದಿ ಅಂದು ಪಂಚತಾರಾ ಹೋಟಲ್‌ನಲ್ಲಿ ಭರ್ಜರಿ ಊಟ ಹಾಕಿಸಿ ಈ ಕುರಿತ ವರ್ಣರಂಜಿತ ಕಿರುಹೊತ್ತಗೆಯನ್ನೂ ಬಿಡುಗಡೆಗೊಳಿಸಿದ್ದ. ಆ ಭರವಸೆ ಇನ್ನೂ ಹೊತ್ತಗೆಯಲ್ಲೆ ಉಳಿದಿದೆ! ಕೃಷ್ಣಾ ಗೋದಾವರಿ ಜಲಾನಯನ ಪ್ರದೇಶದ ಕಾಕಿನಾಡ ಬ್ಲಾಕ್‌ನಲ್ಲಿ 2,20,000 ಕೋಟಿ ರೂ. ಬೆಲೆಬಾಳುವ 20 ಟ್ರಿಲಿಯ ಸಿಎಫ್‌ಟಿ ಗ್ಯಾಸ್ ಲಭ್ಯವಿರುವುದಾಗಿ ಗುಜರಾತ್ ರಾಜ್ಯ ಪೆಟ್ರೋಲಿಯಂ ಕಾರ್ಪೋರೇಷನ್ ಕಂಡುಹಿಡಿದಿದೆ ಎಂದು 2005ರಲ್ಲಿ ಘೋಷಿಸಿದ್ದ. ಆದರೆ 2009ಕ್ಕಾಗುವಾಗ ಈ ಅಂದಾಜು 20 ಟ್ರಿಲಿಯ ಸಿಎಫ್‌ಟಿಯಿಂದ ಏಕಾಏಕಿ 2ಕ್ಕೆ ಇಳಿದಿದೆ!


ದೊಡ್ಡ ದೊಡ್ಡ ಯೋಜನೆಗಳನ್ನು ಘೋಷಿಸುವುದು, ಆಮೇಲೆ ಅಂಕಿಅಂಶಗಳೊಂದಿಗೆ ಆಟವಾಡಿ ತನಗನುಕೂಲವಾದ ಚಿತ್ರಣ ನೀಡುವುದೆ ಮೋದಿ ಸರ್ಕಾರದ ತಂತ್ರಗಾರಿಕೆಯಾಗಿದೆ. ಹೀಗಾಗಿ ಅದು 2019ರ ಚುನಾವಣೆಗೆ ಮುನ್ನ ಎಲ್ಲಾ ಗುರಿಗಳನ್ನು ಸಾಧಿಸಲಾಗಿದೆ ಎಂದು ಕೊಚ್ಚಿಕೊಳ್ಳುವುದಂತೂ ನಿಶ್ಚಿತ. ಆದರೆ ಮೋದಿಯ ಚುನಾವಣಾಪೂರ್ವ ಭರವಸೆಗಳೆಲ್ಲವೂ ಗಾಳಿಯಲ್ಲೆ ತೇಲುತ್ತಿರುವುದನ್ನು ಕಂಡಿರುವ ಮತದಾರರೀಗ ಕೊಂಚ ಎಚ್ಚೆತ್ತುಕೊಂಡಿದ್ದಾರೆ. ವೋಟಿಗಾಗಿ, ಅಧಿಕಾರಕ್ಕಾಗಿ ತಮ್ಮನ್ನು ವಂಚಿಸಲಾಗುತ್ತಿದೆ ಎಂಬುದರ ಅರಿವು ಅವರಿಗೆ ಆಗುತ್ತಿದೆ.

*(ಆಧಾರ: 4.10.2016ರ OrissaPost ನಲ್ಲಿ ಆರ್.ಕೆ.ಮಿಶ್ರಾ ಲೇಖನ ಮತ್ತು ಇತರ ಮೂಲಗಳು)*

■ ಸುರೇಶ್ ಭಟ್ ಬಾಕ್ರಬೈಲ್

# ದಲಿತರ ನಡಿಗೆಯಿಂದ ಅಶುದ್ಧವಾದ ಉಡುಪಿಯನ್ನು ಶುದ್ಧಗೊಳಿಸುತ್ತಾರಂ

ಮೊನ್ನೆ ಆದಿತ್ಯವಾರ ಕರ್ನಾಟಕದ ಮೂಲೆಮೂಲೆಯಿಂದ ಉಡುಪಿಗೆ ಬಂದ ದಲಿತ ದಮನಿತ ಮತ್ತು ಸಮಾನ ಮನಸ್ಕರು ಭಾಗವಹಿಸಿದ 'ಚಲೋ ಉಡುಪಿ' ಜಾಥಾ ಚೀನಾದ ಪವಿತ್ರ ಡ್ರಾಗನ್‌ನಂತೆ ಒಂದೂವರೆ ಕಿಲೋಮೀಟರ್ ಉದ್ದವಿದ್ದು ಅದು ಉಡುಪಿಯ ಜನರಿಗೆ ಒಂದು ಹೊಸ ಅನುಭವವಾಗಿತ್ತು, ಕಾರಣ ಈವರೆಗೆ ಕೇವಲ ಉಡುಪಿ ಪರ್ಯಾಯ ಮತ್ತು ಹಿಂದೂ ಸಮಾಜೋತ್ಸವ ನೋಡಿ ನೋಡಿ ಉಡುಪಿಯ ಜನರ ಮನಸ್ಸು ಜಿಡ್ಡುಗಟ್ಟಿ ಹೋಗಿತ್ತು ಹಾಗಾಗಿ ಚಲೋ ಉಡುಪಿ ನೀಲಿ ಶಕ್ತಿಯ ಮೆರವಣಿಗೆ ಉಡುಪಿಯ ಜನರಿಗೆ ಚೇತೋಹಾರಿಯಾಗಿತ್ತು. ದಲಿತ ದಮನಿತರ ಚಲೋ ಉಡುಪಿ ಜಾಥಾ ಅ.9 ಕ್ಕೆ ಇದೆ ಎಂದು ಗೊತ್ತಾಗುತ್ತಲೇ ಉಡುಪಿಯ ಸಂಘಿಗಳು ಬೇಕೆಂದೇ ನಮ್ಮ ಜಾಥಾ ಹೋಗುವ ಮಾರ್ಗಗಳ ಇಕ್ಕೆಲೆಡೆಯೂ ಒಂದು ವಾರ ಮುಂಚೆಯೇ ಉದ್ದಕ್ಕೆ ಕೇಸರಿ ಬಂಟಿಂಗ್ಸ್ ಹಾಕಿದ್ದರು, ಅಲ್ಲಲ್ಲಿ ನರೇಂದ್ರ ಶೆಣೈಯ ನಮೋ ಬ್ರಿಗೇಡಿನವರು ಮತ್ತು ಮೋದಿ ವಿಚಾರ ಮಂಚ್‌ನವರು ತಮ್ಮ ದೊಡ್ಡ ದೊಡ್ಡ ಫ್ಲೆಕ್ಸ್ ಅಳವಡಿಸಿದ್ದರು. ಆದರೆ ಈ ಕೇಸರಿಯ ನಡುವೆ ಚಲೋ ಉಡುಪಿಯ ನೀಲಿ ಪತಾಕೆಗಳು ಮುಳ್ಳಿನ ನಡುವೆ ಅರಳಿದ ನೀಲಿ ಗುಲಾಬಿಯಂತೆ ಜಾಥಾದ ನಾಲ್ಕು ಕಿ.ಮಿ ರಸ್ತೆಯುದ್ದಕ್ಕೂ ಕಂಗೊಳಿಸಿ ಅಭಿಮಾನ ಮೂಡಿಸುತ್ತಿತ್ತು.




ಹತ್ತು ಯುವತಿಯರು ಮತ್ತು ಮೂವರು ಹುಡುಗರು ಜಾಥಾದುದ್ದಕ್ಕೂ ಲಯಬದ್ಧವಾಗಿ ಬಾರಿಸುತ್ತಿದ್ದ ನಗಾರಿ ಮತ್ತು ತಮಟೆಗಳು ತಮ್ಮನ್ನು ಅಡಿಗಡಿಗೆ ಅವಮಾನಿಸುವ ಮತ್ತು ಶೋಷಿಸುವ ಮನುವಾದಿ ಸಮಾಜದ ವಿರುದ್ಧ ದಲಿತರು ಪ್ರದರ್ಶಿಸಿದ ಆಕ್ರೋಶದಂತೆ ಭಾಸವಾಗುತ್ತಿತ್ತು, ಅವರು ನಗಾರಿಗೆ ಬಾರಿಸುತ್ತಿದ್ದ ಪ್ರತಿಯೊಂದು ಹೊಡೆತವೂ ಇಲ್ಲಿಯ ಮೇಲ್ಜಾತಿ ಬ್ರಾಹ್ಮಣ ಬಂಟ ಕೊಂಕಣಿಗರ ಬೆನ್ನಿಗೆ ರೋಷದಿಂದ ಬಾರಿಸುತ್ತಿರುವ ಛಾರುಕೋಲಿನಂತೆ ಕಾಣುತ್ತಿತ್ತು, ಆ ಭೀಕರ ನಗಾರಿ ಸದ್ದಿನಲ್ಲಿ ಅಂತಹ ರೌದ್ರತೆಯಿತ್ತು; ಈ ರೋಷ ರೌದ್ರತೆಯು ಮುಂದೊಮ್ಮೆ ದಲಿತರನ್ನು ಆಯುಧ ಎತ್ತಿಕೊಳ್ಳುವಷ್ಟು ಹತಾಶರನ್ನಾಗಿ ಮಾಡುವ ಮೊದಲು ಈ ಮನುವಾದಿಗಳು ಎಚ್ಚೆತ್ತುಕೊಂಡು ಸಮಾಜದ ಸಂಪತ್ತಿನಲ್ಲಿ ದಲಿತರಿಗೆ ಸಿಗಬೇಕಾದ ನ್ಯಾಯವಾದ ಪಾಲು ಹಾಗೂ ಆಹಾರದ ಹಕ್ಕು ಕೊಟ್ಟರೆ ಉತ್ತಮ. ಇಲ್ಲದಿದ್ದರೆ ಸಶಸ್ತ್ರ ಬಂಡಾಯದ ಮೂಲಕ ಅವರ ತಮ್ಮ ನ್ಯಾಯವಾದ ಪಾಲನ್ನು ಪಡೆಯುವುದು ಖಂಡಿತ.

'ಚಕ್ರಂ ಸೊಳ್ಳೆ-ಬಿಲ್ಲೆ' ಮತ್ತು ಅವನ ಯುವ ಬ್ರಿಗೇಡ್ ದಲಿತರ ನಡಿಗೆಯಿಂದ ಅಶುದ್ಧವಾಗಿರುವ ಉಡುಪಿಯನ್ನು ಶುದ್ಧಗೊಳಿಸುತ್ತಾರಂತೆ ಹಾಗೂ ಅದಕ್ಕೆ 'ಕನಕನ ನಡೆ' ಎಂದು ಹೆಸರಿಡುತ್ತಾರಂತೆ. ಮೊಟ್ಟ ಮೊದಲು ಈ ಚಕ್ರಂ ಗಮನಿಸಬೇಕಾದುದೇನೆಂದರೆ ಕನಕದಾಸರ ಜಾತಿಯವರು ಅಂದರೆ ಕುರುಬರು ಹಾಗೂ ವಾಲ್ಮೀಕಿ ಜನಾಂಗದವರು ಹಲವು ಬಸ್ಸುಗಳಲ್ಲಿ ಬೆಳಗಾವಿ, ಬಾಗಲಕೋಟೆ ಮತ್ತು ಕಲಬುರ್ಗಿ ಜಿಲ್ಲೆಗಳಿಂದ ಉಡುಪಿಗೆ ಬಂದು ಚಲೋ ಉಡುಪಿ ಜಾಥಾದಲ್ಲಿ ಅಭಿಮಾನ ಹಾಗೂ ಸಂಭ್ರಮದಿಂದ ಪಾಲುಗೊಂಡಿದ್ದರು. ಹಾಗಾಗಿ ಮನುವಾದಿಗಳು ಈಗ ಆ ದಮನಿತ ಕುರುಬ ಜಾತಿಯ ಕನಕದಾಸರ ಹೆಸರನ್ನೇ ಉಡುಪಿ ಶುದ್ಧಿಯ ತಮ್ಮ ಕುಕೃತ್ಯಕ್ಕೆ ಇಡುವ ನೈತಿಕ ಅಧಿಕಾರ ಹೊಂದಿಲ್ಲ, ಬೇಕಾದರೆ ಅವರು ಮನುವಾದಿ ಮಧ್ವರಾಜ ಅಥವಾ ವಾದಿರಾಜ ಸ್ವಾಮಿಗಳ ಹೆಸರು ಉಪಯೋಗಿಸಲಿ. ಕಳೆದ ಜನವರಿಯಲ್ಲಿ ನಡೆದ ಉಡುಪಿ ಪರ್ಯಾಯದ ಸಮಯದಲ್ಲಿ ಉಡುಪಿಯ ತುಂಬೆಲ್ಲಾ ಹಾಕಿದ್ದ ಪೇಜಾವರರ ದೊಡ್ಡ ದೊಡ್ಡ ಅನಧಿಕೃತ ಫ್ಲೆಕ್ಸ್‌ಗಳು ಒಂಬತ್ತು ತಿಂಗಳ ನಂತರ ಇಂದಿಗೂ ಜಿಲ್ಲಾಡಳಿತ ತೆರವುಗೊಳಿಸಿಲ್ಲ, ಹಾಗಾಗಿ ಬಣ್ಣ ಮಾಸಿ ಹರಿದ ಈ ಪರ್ಯಾಯ ಫ್ಲೆಕ್ಸ್‌ಗಳು ಉಡುಪಿಯ ಅಂದ ಕೆಡಿಸಿಬಿಟ್ಟಿವೆ. ಆ ಫ್ಲೆಕ್ಸ್‌ಗಳಲ್ಲಿ ಪೇಜಾವರರ ಮುಖದ ಬಣ್ಣ ಮಾಸಿ ಅವರು ನಾಗಾ ಸಾಧುವಂತೆ ವಿಚಿತ್ರವಾಗಿ ಕಾಣುತ್ತಾರೆ! ಚಕ್ರಂಗಳು ಮೊದಲು ಈ ಬಣ್ಣಗೆಟ್ಟ ಫ್ಲೆಕ್ಸ್ ತೆಗೆದು ಉಡುಪಿಯನ್ನು ಅಂದಗೊಳಿಸಲಿ.

ಹಿಂದೊಮ್ಮೆ ಬಿಹಾರದಲ್ಲಿ ಬಾಬು ಜಗಜೀವನ್ ರಾಮ್ ಅವರು ಉದ್ಘಾಟಿಸಿದ ಮೂರ್ತಿಯೊಂದನ್ನು ನಂತರ ಮನುವಾದಿಗಳು ಗಂಗಾಜಲದಿಂದ ಶುದ್ಧೀಕರಣಗೊಳಿಸಿದಾಗ ಆ ಮನುವಾದಿಗಳ ಮೇಲೆ ಪೊಲೀಸರು ಜಾತಿ ನಿಂದನೆ ಕೇಸ್ ಜಡಿದಿದ್ದರು. ಈಗಲೂ ಚಕ್ರಂ ಸೊಳ್ಳೆಬಿಲ್ಲೆಯ ಉಡುಪಿ ಶುದ್ಧಿಯ ಕುಕೃತ್ಯಕ್ಕಾಗಿ ಅವನ ಮೇಲೆ ಜಾತಿನಿಂದನೆಯ ಪ್ರಕರಣ ಜಡಿಯಲು ಸಾಧ್ಯವೇ ಎಂದು ಚಲೋ ಉಡುಪಿ ಜಾಥಾಕ್ಕೆ ಬೆಂಬಲ ಕೊಟ್ಟ ವಕೀಲರು ಪರಿಶೀಲಿಸಿದರೆ ಉತ್ತಮ. ಇಲ್ಲದಿದ್ದರೆ ವಾಗ್ಮಿ ಪಿಗ್ಮಿ ಎಂದು ಕುಖ್ಯಾತರಾದ ಚಕ್ರಂಗಳ ವಿಷಕಾರಿ ಬುದ್ಧಿ ಮೇರೆ ಮೀರಬಹುದು.

*- ಆರ್.ಬಿ.ಶೇಣವ, ಮಂಗಳೂರು*

# ಉಡುಪಿ ಚಲೋ: ಸಿಡಿದೆದ್ದ ದಮನಿತರು

ಸಂಘ ಪರಿವಾರ ಆಯೋಜಿತ ಗಣೇಶೋತ್ಸವ ರಾಮನವಮಿ ದಸರಾ ಇಂತಹ ವೈದಿಕ ಬೀದಿ ಹಬ್ಬಗಳಲ್ಲಿ ದಲಿತ ಯುವಕರು ಈಗೀಗ ಹೆಚ್ಚು ಹೆಚ್ಚು ಭಾಗವಹಿಸುತ್ತಿರುವ ಕುರಿತು ಪ್ರಗತಿಪರರಲ್ಲಿ ಆತಂಕ ಹೆಚ್ಚುತ್ತಿದೆ. ಸಂಘ ಪರಿವಾರದ ತೆಕ್ಕೆಗೆ ಬೀಳುತ್ತಿರುವ ದಲಿತ ಯುವಕರಿಗೆ ಸತ್ಯ ತಿಳಿಸಿ ಹೊರತರುವ ಕೆಲಸ ಆಗಬೇಕು ಎಂಬುದೇ ಈ 'ಚಲೋ ಉಡುಪಿ' ಆಂದೋಲನದ ಉದ್ದೇಶಗಳಲ್ಲಿ ಒಂದು. ಮಂಗಳೂರಿನ ಉರ್ವಾ ಮಾರ್ಕೆಟ್ ಹತ್ತಿರವಿರುವ ನಗರಪಾಲಿಕೆಯ ಖಾಯಂ ಕರ್ಮಚಾರಿಗಳ ಕಾಲೋನಿಯಲ್ಲಿ ಹಲವು ದಲಿತ ಕರ್ಮಚಾರಿಗಳ ಮನೆಗಳಿದ್ದು ಈ ಕಾಲೋನಿಯ ಒಂದು ತುದಿಗೆ ನೂರಾರು ವರ್ಷ ಪುರಾತನ ಕೊರಗಜ್ಜನ ದೈವಸ್ಥಾನ ಇದ್ದರೆ ಇನ್ನೊಂದು ತುದಿಗೆ ಸಂಘ ಪರಿವಾರದವರು ದಲಿತರಿಗೆ ಹೊಸದಾಗಿ ಕಟ್ಟಿಸಿಕೊಟ್ಟಿರುವ ರಾಮಮಂದಿರವಿದೆ. ಈಗ ಇಲ್ಲಿಯ ನಿವಾಸಿಗಳಿಗೆ ತಮ್ಮ ಹಿರಿಯರು ನಂಬಿ ಪೂಜಿಸುತ್ತಿದ್ದ ಕಾರಣಿಕದ ಕೊರಗಜ್ಜ ದೈವಕ್ಕಿಂತ ಈ ವೈದಿಕ ರಾಮನೇ ಹೆಚ್ಚು ಪವಿತ್ರವಾಗಿ ಬಿಟ್ಟಿದ್ದಾನೆ. ಅಲ್ಲಿ ದಿನಾಲೂ ರಾಮಕೃಷ್ಣ ಭಜನೆ ನಡೆಯುತ್ತದೆ. ಮುಗ್ಧ ಶೂದ್ರ ತಪಸ್ವಿ ಶಂಭೂಕನನ್ನು ಕೇವಲ ಕೆಳಜಾತಿಯೆಂಬ ಕಾರಣಕ್ಕೆ ಕೊಂದ ಶ್ರೀರಾಮ, ಸೂತಪುತ್ರ ಕರ್ಣ ಹಾಗೂ ಏಕಲವ್ಯರನ್ನು ಮೋಸದಿಂದ ಕೊಲ್ಲಲು ಪಾಂಡವರಿಗೆ ಸಹಾಯ ಮಾಡಿದ ಶ್ರೀಕೃಷ್ಣ ಕ್ಷತ್ರಿಯರು ಎಂಬ ಸುಳ್ಳು ಆರೋಪ ಹೊರಿಸಿ ಕರಾವಳಿಯ ಬುಡಕಟ್ಟು ಜನಾಂಗದವರನ್ನು ಕೊಂದು ಅವರ ಭೂಮಿಯನ್ನು ಕಬಳಿಸಿದ ಭಾರ್ಗವ ಪರಶುರಾಮ, ಇಂತಹ ಕ್ರೂರ ವೈದಿಕ ಜಾತಿವಾದಿಗಳು ಇಂದು ದಲಿತರಿಗೆ ಹೆಚ್ಚು ಪ್ರೀತಿಯ ದೇವರಾಗಿದ್ದಾರೆ. ಹೀಗೆ ಸಂಘಿಗಳ ಹಿಂದುತ್ವ ಬ್ರೇನ್‌ವಾಶ್‌ಗೆ ಬಲಿಯಾದ ದಲಿತರನ್ನು ಮರಳಿ ಘರ್ ವಾಪ್ಸಿ ಮಾಡಲು ಉದ್ದೇಶಿಸಿರುವ ಸಂದರ್ಭವೇ 'ಚಲೋ ಉಡುಪಿ' ಜಾಥಾ. ಕೇಸರಿ ಬಣ್ಣ ಹೇಗೆ ಮನುವಾದ, ಮೌಢ್ಯ ಹಾಗೂ ಶೋಷಣೆಯ ಸಂಕೇತವಾಗಿದೆಯೋ ಅದೇ ಪ್ರಕಾರ ನೀಲಿ ಬಣ್ಣ ಶ್ರಮಿಕ ಶೋಷಿತ ದಮನಿತರು ತಮ್ಮ ಜನ್ಮಸಿದ್ಧ ಹಕ್ಕಿಗಾಗಿ ಸಿಡಿದೆದ್ದಿರುವ ಸ್ವಾಭಿಮಾನದ ಸಂಕೇತವಾಗಿದೆ. ಅದುವೇ ಉಡುಪಿಯಲ್ಲಿ ಭೋರ್ಗರೆದ ನೀಲಿ ಸಾಗರ.



ಯಾವ ದೇಶದಲ್ಲಿ ಶಾಲೆಗಿಂತ ದೇವಾಲಯಗಳ ಗಂಟೆ ಹೆಚ್ಚು ಬಾರಿಸುತ್ತದೆಯೋ ಆ ದೇಶದಲ್ಲಿ ಅಜ್ಞಾನ, ಮತ್ತು ಶೋಷಣೆಯಿರುತ್ತದೆ ಹಾಗೂ ಯಾವ ದೇಶದಲ್ಲಿ ದೇವಾಲಯಗಳಿಗಿಂತ ಶಾಲೆಗಳ ಗಂಟೆ ಹೆಚ್ಚು ಬಾರಿಸುತ್ತ ಆ ದೇಶದಲ್ಲಿ ಶ್ರೀಮಂತಿಕೆ, ಸಮಾನತೆ, ನೆಮ್ಮದಿಯಿರುತ್ತದೆ. ಈ ಮಾತನ್ನು ಹೇಳಿದ್ದು ಡಾ.ಬಿ.ಆರ್.ಅಂಬೇ ಇಂದಿಗೂ ಅಂಬೇಡ್ಕರರ ಈ ಮಾತು ಚಿರ ನೂತನವಾಗಿದೆ.

*- ವಿ.ಡಿ. ನಾಯ್ಕ್, ಮಂಗ*

# ಎಲ್ಲೆಡೆ ಕುತೂಹಲ ಕೆರಳಿಸಿದ 'ಉಡುಪಿ ಚಲೋ

ಉಡುಪಿ ಚಲೋ ಜಾಥಾ ಕೇವಲ ಕರ್ನಾಟಕದೊಳಗೆ ಮಾತ್ರವಲ್ಲ ಗುಜರಾತ್, ಮಹಾರಾಷ್ಟ್ರ, ತೆಲಂಗಾಣ ಜನರ ಆಸಕ್ತಿ ಕೆರಳಿಸಿದೆ. ದಲಿತ ದಮನಿತ ಶೋಷಿತ ವಂಚಿತ ಸಮುದಾ ಹಕ್ಕೊತ್ತಾಯಕ್ಕೆ ಈ ಜಾಥಾ ನಡೆದಿರುವುದು ನಿಜ. ಜತೆಗೆ ಎಲ್ಲಾ ಸಮುದಾಯಗಳ ನಡುವಿನ ಜಾತಿಗೋಡೆಗಳನ್ನು ಬೀಳಿಸುವ ಸಂದೇ ಈ ಜಾಥಾ ಆಗಿತ್ತು. ಕರಾವಳಿಯ ಮನುವಾದಿಗಳ ಹೆಡ್ ಆಫೀಸ್ ಉಡುಪಿಯಲ್ಲಿ ಈ ಜಾಥಾ ಸಮಾರೋಪಗೊಂಡಿರುವುದು ತುಂಬಾ ಆದರೆ ತುಳುನಾಡಿನವರಿಗೆ ಸಂಬಂಧಪಟ್ಟ ಒಂದು ಮುಖ್ಯ ವಿಷಯ ಬಂದ ಕರ್ನಾಟಕದ ಒಳನಾಡಿನ ಜನರಿಗೆ ಗೊತ್ತಾಗಬೇಕಿತ್ತು, ಅದೇ ಕರಾವಳಿಯ ಬ್ರಾಹ್ಮಣೇತರ ತುಳು ಭಾಷಿಕರಿಗೆ ಗೋತ್ರಗಳಿಲ್ಲ ಅಥವಾ ಜಾತಿಯವನು ಅನಿಸಿಕೊಳ್ಳಲು ಯಾವುದೇ ಉಪನಯನ-ದೀಕ್ಷೆ ವಿಧಿವಿಧಾ ಕೇವಲ ಹುಟ್ಟಿದ ಕುಟುಂಬದ ಆಧಾರದಲ್ಲಿ ಮಾತ್ರ ಜಾತಿ ನಿರ್ಧರಿಸಲಾ ಇದು ಯಾವಾಗಿನಿಂದ ಶುರುವಾಯಿತು ಎಂದು ತುಳುನಾಡಿನ ಇತಿಹಾಸಕಾ ಗೊತ್ತಿಲ್ಲ, ಯಾಕೆಂದರೆ ಮೂಲತಃ ತುಳುವರೆಲ್ಲಾ ಒಂದೇ ಜಾತಿಯವರಾ ಇದಕ್ಕೆ ಗಟ್ಟಿ ಪುರಾವೆಯೆಂದರೆ ಬ್ರಾಹ್ಮಣ ಹಾಗೂ ವಿಶ್ವಕರ್ಮರನ್ನು ಹೊರ ಬೇರೆಲ್ಲಾ ತುಳು ಭಾಷಿಕರಿಗೆ ಕೇವಲ ತಾಯಿಯ ಕಡೆಯಿಂದ ಬರುವ (ಬಳಿ) ಇರುವುದು. ಈ ಬರಿ/ಬಳಿ ಬ್ರಾಹ್ಮಣರ ಗೋತ್ರಕ್ಕೆ ಸಮನಾ ಧರ್ಮಸ್ಥಳ-ಸುಬ್ರಹ್ಮಣ್ಯ ಮುಂತಾದ ಕ್ಷೇತ್ರದಲ್ಲಿ ಪ್ರತಿಯೊಬ್ಬ ಭಕ್ತನಿಗೂ ಅ ಗೋತ್ರ ಕೇಳುತ್ತಾರೆ. ನಮಗೆ ಯಾವುದೇ ಗೋತ್ರವಿಲ್ಲ ಎಂದು ಭಕ್ತರು ಹೇ ಸಾರಾಸಗಟಾಗಿ ಎಲ್ಲಾ ಶೂದ್ರರನ್ನೂ ಕಶ್ಯಪ ಗೋತ್ರದವರು ಎಂದು ಪುರೋಹಿತರು ಮಂತ್ರ ಮುಗಿಸುತ್ತಾರೆ. ಎಲ್ಲಾ ಶೂದ್ರರದು ಕಶ್ಯಪ ಯಾಕೆ ಎಂದು ಭಕ್ತರು ಕೇಳಿದಾಗ ಯಾವುದೇ ಪುರೋಹಿತ ವಿವರಣೆ ಕೆ ಗೋಜಿಗೆ ಹೋಗುವುದಿಲ್ಲ).

ತುಳುನಾಡಿನ ಅತೀವ ಕುತೂಹಲಕಾರಿ ವಿಷಯವೆಂದರೆ ಮೇ ಬಂಟನಾಗಲಿ ಅಥವಾ ನಡುಜಾತಿಯ ಬಿಲ್ಲವ, ಮೊಗವೀರ, ಕುಲಾಲ, ಕೊಟ್ಟಾರಿ, ಜಾತಿಗಾಗಲೀ ಅಥವಾ ದಲಿತ ಸಮುದಾಯದ ಮುಂಡಾಳ, ಮ ಇವರಿಗಾಗಲಿ, ತಾಯಿಯ ಕಡೆಯಿಂದ ಬರುವ ಬರಿ/ಬಳಿಗಳ ಮೂಲ ಹೆಸ ಅಕ್ಷರಶಃ ಒಂದೇ ತೆರನಾಗಿವೆ. ಉದಾಹರಣೆಗೆ: ಸಾಲಿಯಾನ್, ಕೋ ಬಂಗೇರನ್, ಕುಂದರನ್, ಕಾಂಚನ್, ಪುತ್ರನ್, ಕರ್ಕೇರನ್, ತಿಂಗಳಾಯ, ಕರ್ಮರನ್, ಸುವರ್ಣ, ಪಾಂಗನ್, ಪಂಗ ಅಮಿನ್, ಮುಂತಾದ ಬರಿ/ಬಳಿಗಳು ಮೇಲ್ಜಾತಿ ಬಂಟರಲ್ಲೂ ಇದೆ, ದಲಿತರಾದ ಮುಂಡಾಲರಲ್ಲೂ ಇದೆ, ಮೊಗವೀರ ಕುಲಾಲರಲ್ಲೂ ಇದೆ. ಇದಕ್ಕೆ ಕಾರಣ ಮೂಲತಃ ತುಳು ಭಾಷಿಕರೆಲ್ಲಾ ಒಂದೇ ಮೂಲದವರು ಜಾತಿಯವರೇ ಆಗಿದ್ದರು. ವೈದಿಕರು ಇಲ್ಲಿಗೆ ಬಂದನಂತರ ಈ ಒಂದೇ ಜಾತಿ ವಿಘಟನೆಗೊಂಡು ವೃತ್ತಿ ಆ ಗುಂಪುಗಳಾದವು. ನಂತರ ಕ್ರಮೇಣ ಈ ವೃತ್ತಿ ಆಧರಿತ ಗುಂಪುಗಳೇ ಜಾತಿಗಳಾಗಿ ತಮ್ಮ ತಮ್ಮ ನಡುವೆ ಏರಿಸಿ ಕೊನೆಗೆ ಮೇಲು-ಕೀಳು ಎಂದು ವರ್ಗೀಕರಣಗೊಂಡವು. ಹಾಗಾಗಿ ಪ್ರಬಲ ಜಾತಿಗಳಾದ ಬಂಟ ಮೊಗವೀರರೇ ಆಗಲಿ ಅಥವಾ ದುರ್ಬಲ ಜಾತಿಗಳಾದ ಮುಂಡಾಲ, ಮಾಯಿಲ, ಪಾಣಾರ, ಪಂಬದ ಜಾತಿ ಆಗಲಿ, ಮೂಲದಲ್ಲಿ ಇವರೆಲ್ಲಾ ಒಂದೇ ಜಾತಿ ಆಗಿದ್ದರು. ಅದುವೇ ನಾಗಮೂಲದ ತುಳುವ ಜಾತಿ.

ಪ್ರತಿಭಟನಾ ಮೆರವಣಿಗೆಯಲ್ಲಿ ಡಾ. [illegible] ಕೆ.ನೀಲಾ ಮತ್ತು ಇತರ [illegible]



ಆದರೆ ಕೊರಗ ಜನಾಂಗದಲ್ಲಿ ಇಂತಹವೇ ಬರಿ/ಬಳಿಗಳು ಇಲ್ಲದಿರಲು ಕಾರಣ ತುಳುನಾಡಿನ ಈ ಪುರಾತನ ಮೂಲನಿವಾಸಿಗಳು ಪ್ರಕೃತಿಯ ಆರಾಧಕರಾಗಿದ್ದು ಯೋಗಿಗಳಾಗಿದ್ದರು. ಇಲ್ಲಿಯ ಪುರಾತನ ಋಷಿ ಮುನಿ ಕೊರಗರಾಗಿದ್ದರು. ಬಹುಶಃ ಅದಕ್ಕಾಗಿ ಕೊರಗರ ಮನ ನೋಯಿಸಬಾರದು ಎಂಬ ನಂಬಿಕೆ ಹೆಚ್ಚಿನ ಇತರ ತುಳ ಈಗಲೂ ಇದೆ. ಬ್ರಾಹ್ಮಣರೂ ದಸರೆಯ ಅವಧಿಯಲ್ಲಿ ಕೊರಗ ಮಹಿಳೆಯರನ್ನು ತಮ್ಮ ಮನೆಯ ಹಿತ್ತಲಿಗೆ "ಕನ್ಯಾ ಪೂಜೆ" ಮಾಡುತ್ತಾರೆ. ಇದಕ್ಕೆ ಕಾರಣ ಕೊರಗರಲ್ಲಿ ಅನುವಂಶಿಕವಾಗಿ ಬಂದಿರುವ ಪವಿತ್ರತೆಯಲ್ಲಿ ಸ್ವಲ್ಪ ತಮಗೆ ವರ್ಗಾಯಿಸಿಕೊಳ್ಳುವ ವೈದಿಕ ತಂತ್ರ ಇದೆಂದು ಹೇಳಲಾಗುತ್ತದೆ. ಅಜಲು ಪದ್ಧತಿಯೂ ಸುರುವಾಗಿದ್ದು ಕಾರಣಕ್ಕೆ ಅಂದರೆ ಮೇಲ್ಜಾತಿಯ ಮನೆಯಲ್ಲಿ ನಡೆಯುವ ಯಾವುದೇ ಕಾರ್ಯದಲ್ಲಿ ಪವಿತ್ರಾತ್ಮರಾದ ಕೊ ಮೊಟ್ಟಮೊದಲು ಊಟ ಬಡಿಸಿ ಅವರ ಆಶೀರ್ವಾದ ಗಳಿಸುವ ಸದುದ್ದೇಶ ಅದರ ಹಿಂದಿತ್ತು. ಆದರೆ ನ ಪೀಳಿಗೆಯವರು ಈ ಪದ್ಧತಿಯ ಮೂಲ ಸದುದ್ದೇಶ ಸರಿಯಾಗಿ ಅರ್ಥ ಮಾಡಿಕೊಳ್ಳದೇ ಕೊರಗರ ಊ ಉಗುರು-ಕೂದಲು ಹಾಕಿ ಕೊಡುವ ಹೀನಪದ್ಧತಿಯಾಗಿ ಕ್ರಮೇಣ ಪರಿವರ್ತಿಸಿದರು. ಹೀಗೆ ಒಂದು ಕಾ ತುಳುವ ಸಮಾಜದಲ್ಲಿ ಅತ್ಯಂತ ಶ್ರೇಷ್ಠರು ಪವಿತ್ರಾತ್ಮರು ಎಂದು ಪರಿಗಣಿತರಾಗಿದ್ದ ಕೊರಗರು ಇಂದು ನಿ ಅಸ್ಪೃಶ್ಯರು ಎಂದು ಪರಿಗಣಿತವಾಗಿರುವುದು ಕಾಲದ ವಿಡಂಬನೆ. ಕಾಲದ ಧೂಳಿನಲ್ಲಿ ಹುದುಗಿಹೋಗಿರುವ ಈ ಸೌಹಾರ್ದತೆಯ ಆಶ್ಚರ್ಯಕರ ಸತ್ಯಗಳು ಉಡುಪಿ ಚಲೋ ಜಾಥಾದ ಸಂದರ್ಭದಲ್ಲಿ ಎಲ್ಲಾ ಜನರಿಗೆ ತಿಳಿಯಬೆ ಕಾರಣ ಒಂದು ಕಾಲದಲ್ಲಿ ತುಳುವರೊಳಗೆ ಮೇಲು-ಕೀಳು ದಲಿತರು ಅಸ್ಪೃಶ್ಯರು ಎಂಬ ಗುಂಪುಗಳು ಇರಲೇ

*- ಕ್ಷಿತಿಜ್ ಕೆ ಹೆಗ್ಡೆ, ಮಂಗ*



ಯೋಗೇಶ್ ಮಾಸ್ಟರ್

## ಪುರಾಣದ ಹೂರಣ

# ರಕ್ತಬೀಜಾಸುರ

## ರಕ್ತವೆಂಬ ಹೆಣ್ಣು ಬೀಜವೆಂಬ ಗಂಡು

ಶ್ರೀಚಕ್ರರಾಜನಿಲಯ ಶ್ರೀ ಮ ತ್ರಿಪುರಸುಂದರೀ
ಶ್ರೀಶಿವಾ ಶಿವಶಕ್ತೈಕ್ಯರೂಪಿಣೀ ಲಲಿತಾಂಬಿಕಾ

ಲಲಿತಾ ಸಹಸ್ರನಾಮದ ಕೊನೆಯ ಭಾಗವಾದ ಈ ಸಾಲುಗಳು ಶಿವನೂ ಮತ್ತು ಶಕ್ತಿಯೂ ಒಂದಾಗಿರುವ ರೂಪವೇ ಲಲಿತಾಂಬಿಕೆ ಎಂದು ಘೋಷಿಸುತ್ತದೆ. ಪ್ರಕೃತಿ ಮತ್ತು ಪುರುಷರ ಅಂತಿಮ ಮಿಲನದ ಬಿಂದುವಾಗಿ ಇದು ವ್ಯಕ್ತವಾಗುತ್ತದೆ. ಇಡೀ ಲಲಿತಾ ಸಹಸ್ರನಾಮವೇ ಶಕ್ತಿಯ ಉಪಾಸನೆಯಾಗಿದೆ. ಜೊತೆಗೆ ತಂತ್ರಸಾಧನೆಗೆ ಬೇಕಾದ ಸೂತ್ರಗಳನ್ನು ನೀಡುತ್ತಾ ಬರುತ್ತದೆ.

ತಂತ್ರ ಸಾಧನೆಯಲ್ಲಿ ಶಿವ ಪ್ರಧಾನವಾದ ಶೈವ ಮತ್ತು ಶಕ್ತಿ ಪ್ರಧಾನವಾದ ಶಾಕ್ತ್ಯ ಎಂಬ ಎರಡು ಪರಂಪರೆಗಳನ್ನು ಮುಂಚೂಣಿಯಲ್ಲಿ ಗುರುತಿಸಬಹುದು. ಶಿವನೆಂಬ ಪುರುಷ ಪರಿಕಲ್ಪನೆಯಾಗಲಿ, ಶಕ್ತಿಯೆಂಬ ಸ್ತ್ರೀ ಪ್ರತಿಮೆಯಾಗಲಿ ಪರಿಪೂರ್ಣವಲ್ಲ ಎಂದೂ ಕೂಡ ಮುಂದೆ ಸಾಧಕರು ಮನಗಂಡರು. ಅಸುರಶಕ್ತಿ ಅಂದರೆ ಸುರರದಲ್ಲದ, ದೇವತೆಗಳಲ್ಲದ ನೈಸರ್ಗಿಕ ಶಕ್ತಿಯನ್ನು ಪಡೆಯಲು ಎರಡರ ಒಟ್ಟಾಗುವಿಕೆಯ ಅಗತ್ಯತೆಯನ್ನು ಮನಗಂಡರು. ಅವುಗಳನ್ನು ಹಲವು ರೀತಿಗಳಲ್ಲಿ ಪ್ರಸ್ತುತಪಡಿಸುತ್ತಲೇ ಬಂದರು.

ರಕ್ತಬೀಜಾಸುರ ಎಂಬ ರಾಕ್ಷಸನ ಬಗ್ಗೆ ಸ್ವಲ್ಪ ಗಮನ ಹರಿಸೋಣ.

ರಕ್ತವೆಂದರೆ ಹೆಣ್ಣಿನ ರೂಪಕ, ಬೀಜವೆಂದರೆ ಗಂಡಿನ ಗುಣರೂಪ. ಈ ಎರಡರ ಅಸುರನೆಂಬುವನು ಶಿವಶಕ್ತೈಕ್ಯರೂಪದ ತಂತ್ರ ಸಾಧಕನೇ? ಅಥವಾ ಅವನೇ ಒಂದು ಪ್ರತಿಮೆಯೇ? ಒಟ್ಟಾರೆ ಅಸುರರು ರಕ್ತ ಮತ್ತು ಬೀಜದ ಸಾಧಕರಾಗಿದ್ದರೆಂಬುದಂತೂ ಸತ್ಯ.

ದುರ್ಗಾ ಸಪ್ತಶತಿಯಲ್ಲಿ ದೈತ್ಯವಂಶಗಳ ಪರಂಪರೆಯ ಬಗ್ಗೆ ಉಲ್ಲೇಖಿಸುತ್ತಾರೆ.

ಕಾಲಕಾ ದೌರ್ಹೃದಾ ಮೌರ್ಯಾಃ ಕಾಲಿಕೇಯಾಸ್ತಥಾಸುರಾಃ

ಯುದ್ಧಾಯ ಸಜ್ಜಾ ನಿರ್ಯಾಂತು ಆಜ್ಞಯಾ ತ್ವರಿತಾ ಮಮ

ಕಾಲಕರು, ದೌರ್ಹೃದರು, ಮೌರ್ಯರು, ಕಾಲಿಕೇಯರು ಎಂಬ ಪ್ರಸಿದ್ಧ ವಂಶದವರಾದ ರಾಕ್ಷಸರೂ) ಯುದ್ಧಕ್ಕೆ ಸಿದ್ಧರಾಗಿ ನನ್ನ ಅಪ್ಪಣೆಯಂತೆ ಶೀಘ್ರವಾಗಿ ಹೊರಡಲಿ; ಎಂದು ಶುಂಭನು ಆಜ್ಞೆ ಮಾಡುತ್ತಾನೆ.

ಮುಂದೆ;

ಪಲಾಯನಪರಾನ್ ದೃಷ್ಟ್ವಾ ದೈತ್ಯಾನ್ಮಾತೃಗಣಾರ್ದಿತಾನ್

ಯೋದ್ಧುಮಭ್ಯಾಯಯೌ ಕ್ರುದ್ಧೋ ರಕ್ತಬೀಜೋ ಮಹಾಸುರಃ

ಮಾತೃಗಣದಿಂದ ನಾಶವಾಗುತ್ತಿದ್ದ ಮತ್ತು ಓಡಿಹೋಗುತ್ತಿದ್ದ ದೈತ್ಯರನ್ನು ನೋಡಿ ಕೋಪಗೊಂಡ ರಕ್ತಬೀಜನೆಂಬ ಮಹಾಸುರನು ಯುದ್ಧ ಮಾಡಲು ಎದುರು ಬಂದನು.

ಇವನ ಸಾಮರ್ಥ್ಯವು ಪುರಾಣದಲ್ಲಿ ಹೇಳುವುದನ್ನು ಗಮನಿಸಬೇಕು.

ಇವನ ಶರೀರದಿಂದ ಭೂಮಿಯಲ್ಲಿ ಒಂದು ಬಿಂದುವು ಬಿದ್ದರೆ ಭೂಮಿಯ ಆ ಜಾಗದಿಂದ ಅವನಷ್ಟೇ ಬಲಶಾಲಿಯಾದ ಮಹಾಸುರನೊಬ್ಬನು ಮೇಲೇಳುವನು.

ಇಂದ್ರಾಣಿಯಾಗಿ ದೇವಿಯು ಅವನನ್ನು ವಜ್ರಾಯುಧ ದಿಂದ ಹೊಡೆದಳು. ಅವನ ದೇಹದಿಂದ ರಕ್ತದ ಎಷ್ಟು ತೊಟ್ಟುಗಳು ಸುರಿದವೋ ಅಷ್ಟು ಜನ ರಾಕ್ಷಸರು ಅವನಷ್ಟೇ ವೀರ್ಯಶಕ್ತಿ, ಪ್ರಾಣಶಕ್ತಿ, ದೇಹಶಕ್ತಿ ಉಳ್ಳವರಾಗಿ ಹುಟ್ಟಿದರು. ಇಂದ್ರಾಣಿ, ವೈಷ್ಣವಿ, ಕೌಮಾರಿ, ಮಾಹೇಶ್ವರಿ- ಹೀಗೆ ಸಪ್ತ ಮಾತೃಕೆಯರೆಲ್ಲರ ವಿವಿಧ ರೂಪಗಳಿಂದ ದೇವಿಯು ಅವನನ್ನು ಹೊಡೆಯುತ್ತಿದ್ದಳು. ರಕ್ತಬೀಜನೂ ಹೊಡೆಯುತ್ತಿದ್ದನು. ಕೊನೆಗೆ ದೇವತೆಗಳು ಗಾಬರಿಯಿಂದ "ಹೇ ಚಾಮುಂಡೀ, ನಿನ್ನ ಬಾಯನ್ನು ವಿಸ್ತರಿಸು. ನೀನು ಉಗ್ರರಾದ ಅವರನ್ನು ತಿನ್ನುತ್ತಿದ್ದರೆ ಅಂಥ ಇತರ ರಾಕ್ಷಸರು ಹುಟ್ಟುವುದಿಲ್ಲ" ಎಂದು ಬೇಡಿಕೊಂಡರು. ಅವಳು ತನ್ನ ನಾಲಿಗೆಯನ್ನು ಚಾಚಿ ರಕ್ತಬೀಜನ ಹೊಡೆದು ಅವನ ರಕ್ತವನ್ನು ಹೀರಿ, ಭೂಮಿಗೆ ಬೀಳದಂತೆ ನೋಡಿಕೊಂಡಳು. ಈ ರೀತಿಯಲ್ಲಿ ಮಾತೃಗಣದ ದೇವಿಯರು ರಕ್ತಬೀಜಾಸುರನ ಕೊಂದರು.

ಸಾವರ್ಣಿಕ ಮನ್ವಂತರಕ್ಕೆ ಸೇರಿದ ಮಾರ್ಕಂಡೇಯ ಪುರಾಣದ ಈ ಕಥನಗಳನ್ನು ನೋಡುತ್ತಿದ್ದರೆ, ತಂತ್ರಸಾಧನೆಯ ವಿವಿಧ ಹಂತಗಳ ಪ್ರತಿಫಲನದ ಕಥೆಯೆಂದು ಅನಿಸುತ್ತದೆ. ಶಿವನ ಎದೆಯ ಮೇಲೆ ಕಾಲಿಟ್ಟು ಮುಂದುಹೋಗುವ ಕಾಳಿಕೆಯ ಪ್ರತಿಮೆಯೂ ಕೂಡ ಈ ಪ್ರಜ್ಞೆಯನ್ನು ಸಮರ್ಥಿಸುತ್ತದೆ.

ಮೊದಲು ಸ್ತ್ರೀ ಪ್ರಧಾನವಾಗಿದ್ದ ಸಾಧನಾ ವಿಷಯಗಳು ನಂತರ ಶಿವ ಪ್ರಾಧಾನ್ಯಕ್ಕೆ ಬಂದವು. ನಂತರ ಶಿವ ಮತ್ತು ಶಕ್ತಿಗಳೆರಡನ್ನೂ ಕೂಡ ಐಕ್ಯವಾಗಿಸಿದಂತಹ ಸಾಧನೆಗಳು ಕೂಡ ಬೆಳಕಿಗೆ ಬಂದವು. ಆದರೆ ಅದೆಲ್ಲವನ್ನೂ ಮತ್ತೆ ಮಾತೃ ಪ್ರಧಾನಕ್ಕೇ ಒಯ್ಯುವಂತಹ ಅನಿವಾರ್ಯತೆ ಏಕೆ ಬಂದಿತು? ಅದರಲ್ಲೂ ಯಾವ ಬ್ರಾಹ್ಮಣರಲ್ಲಿ ಹೆಣ್ಣಿಗೆ ಮಹತ್ವವಿರದೇ ತಮ್ಮಲ್ಲೇ ಹುಟ್ಟುವ ಮಗುವನ್ನೂ ತಮ್ಮ ವರ್ಣಗೌರವದಿಂದ ಹೊರಗಿಟ್ಟು ಶೂದ್ರ ಎಂದು ಕರೆಯುವ ಬ್ರಾಹ್ಮಣ್ಯದ ಪ್ರವೇಶದ ನಂತರ ಶೂದ್ರ ಸ್ತ್ರೀತತ್ವ ಹೇಗೆ ಮುಂದಾಯಿತು? ಅಧ್ಯಯನಕ್ಕೆ ಯೋಗ್ಯವಿಚಾರ. ಆದರೆ ಇದಕ್ಕೆ ಬರಿಯ ಆಧ್ಯಾತ್ಮಿಕ ವಿಶ್ಲೇಷಣೆಯಷ್ಟೇ ಸಾಲದು. ಸಾಂಸ್ಕೃತಿಕ ರಾಜಕೀಯ ಮತ್ತು ಸಾಮಾಜಿಕ ಜೀವನಕ್ರಮದ ಮೇಲೆ ಬೀರಿದ ಪರಿಣಾಮಗಳನ್ನೂ ಕೂಡ ಗಮನಿಸಬೇಕು.

### ಆಧ್ಯಾತ್ಮ ಚರಿತ್ರೆ

ನಮ್ಮ ದೇಶದಲ್ಲಿ ತಂತ್ರಸಾಧನೆಯು ಬೆಳೆದುಬಂದ ರೀತಿಯನ್ನು ಗಮನಿಸಿದರೆ ಆಧ್ಯಾತ್ಮಕ್ಕೂ ಚರಿತ್ರೆ ಎಂಬುದು ಇದೆ ಎಂಬುದನ್ನು ಮನಗಾಣಬಹುದು. ಅದರಲ್ಲೂ ಶಕ್ತಿಪ್ರಧಾನ, ಶಿವಪ್ರಧಾನ, ಬೌದ್ಧ, ಸಿದ್ಧ, ಜೈನ, ನಾಥ, ದತ್ತ, ಅವಧೂತ, ಅಷ್ಟೇಕೆ ಇಸ್ಲಾಂನಲ್ಲಿ ಮಾನ್ಯವೇ ಅಲ್ಲದಿದ್ದರೂ ತಂತ್ರಸಾಧನೆಯಲ್ಲಿ ಇಸ್ಲಾಂನ ಭಾಗವಹಿಸುವಿಕೆಯೂ ಕೂಡ ಇದೆ. ಹೀಗೆ ಅನೇಕಾನೇಕ ನೆಲೆಗಳಿಂದ ಇದುವರೆಗೂ ಬೆಳೆದುಬಂದಿರುವ ತಂತ್ರದ ಚರಿತ್ರೆಯು ಶಕ್ತಿ ಸಂಚಯದ ಸಾಧನೆಯ ವಿವಿಧ ಮಗ್ಗುಲುಗಳನ್ನು ಪರಿಚಯಿಸುತ್ತಾ ಆಯಾ ಕಾಲಗಳಲ್ಲಿ ಪ್ರಸ್ತುತವಾಗಿದ್ದ ಪರಿಕಲ್ಪನೆಗಳನ್ನು ನಮಗೆ ಪರಿಚಯಿಸುತ್ತದೆ.











ವಿವಿಧ ಸ್ಥಳಗಳು, ವಿವಿಧ ಹಿನ್ನೆಲೆಗಳು, ವಿವಿಧ ಪರಂಪರೆಗಳು; ಎಲ್ಲವೂ ವಿವಿಧ ತಂತ್ರಗಳನ್ನು ಕಾಣಿಕೆಗಳನ್ನಾಗಿ ನೀಡಿವೆ. ಆದರೆ ಇಷ್ಟೆಲ್ಲಾ ವೈವಿಧ್ಯತೆಗಳಿದ್ದರೂ ಎಲ್ಲರ ಮತ್ತು ಎಲ್ಲವ ಗಮನ ಮಾತ್ರ ಒಂದೇ. ಅದು ಪ್ರಜ್ಞೆ ಶಕ್ತಿ ಮುಕ್ತಿ ಐಕ್ಯ ಇವಷ್ಟೇ ಪ್ರಧಾನವಾಗಿದ್ದು ಇನ್ನೂ ಕೆಲವು ಬೇರೆ ಬೇರೆ ಪರಂಪರೆಗಳಲ್ಲಿ ಒಂದಷ್ಟು ಉಪಗಮ್ಯಗಳಾಗಿ ಕಾಣಬರುತ್ತದೆ. ಯೋಗಿಗಳು ಮತ್ತು ಸಿದ್ಧರು ವಿವಿಧ ಪರಿಕಲ್ಪನೆಗಳನ್ನು, ವಿವಿಧ ತಂತ್ರಗಳನ್ನು ಉಪಯೋಗಿಸಿಕೊಂಡು ಪ್ರಜ್ಞೆ, ಶಕ್ತಿ, ಮುಕ್ತಿ ಐಕ್ಯಗಳನ್ನು ಸಾಧಿಸಲು ಯತ್ನಿಸಿದ್ದಾರೆ. ಈ ನಾಲ್ಕರ ಅನುಭವವೇ ಅತ್ಯದ್ಭುತ.

### ಪ್ರಜ್ಞೆ

ಪ್ರಜ್ಞೆ ಎಂದರೆ ಅನೈಚ್ಛಿಕವಾಗಿರುವಂತಹ ಎಚ್ಚರಾವಸ್ಥೆ. ಅದು ನಿದ್ರೆಯಲ್ಲೂ ಎಚ್ಚರವಾಗಿರುವಂತಹ ಒಂದು ಅವಸ್ಥೆ. ಕತ್ತಲಾಗಿರಲಿ, ಬೆಳಕಿನಲ್ಲಿರಲಿ, ನೀರಿನಲ್ಲಿರಲಿ, ಬೆಟ್ಟದ ಮೇಲಿರಲಿ, ತಿನ್ನುತ್ತಿರಲಿ, ನಡೆಯುತ್ತಿರಲಿ, ಮೀಯುತ್ತಿರಲಿ, ಸಂಭೋಗದಲ್ಲಿರಲಿ, ಸಂಭಾಷಣೆಯಲ್ಲಿರಲಿ; ಎಲ್ಲಾ ಸಂದರ್ಭಗಳಲ್ಲಿಯೂ ಕೂಡ ಎಚ್ಚರದ ಸ್ಥಿತಿಯನ್ನು ಕಾಯ್ದುಕೊಂಡು ತನ್ನನ್ನೂ ಒಳಗೊಂಡಂತೆ ಇಡೀ ವಿದ್ಯಮಾನವನ್ನು ಎಚ್ಚರಿಕೆಯಿಂದ ಸಾಕ್ಷೀಕರಿಸುವಂತಹ ಒಂದು ಸ್ಥಿತಿ. ಇದನ್ನು ಮನಸ್ಥಿತಿ ಎಂದು ಹೇಳಬಹುದು. ಆದರೆ ಮನಸ್ಥಿತಿ ಎಂಬುದು ಕೆಳಸ್ತರದ ಭಾಗವಷ್ಟೇ ಆಗುತ್ತದೆ. ಪುರಾತನಕಾಲದಲ್ಲಿ ಈ ಪ್ರಜ್ಞೆಯು ಅರಣ್ಯಕರಿಗೆ, ಗಿರಿಜನರಿಗೆ, ಸಮುದ್ರತೀರ ವಾಸಿಗಳಿಗೆ ಬಹಳ ಸರ್ವೇಸಾಮಾನ್ಯವಾದಂತಹ ಸ್ಥಿತಿಯೇ ಆಗಿತ್ತು, ಬಹಳ ಸೂಕ್ಷ್ಮವಾಗಿ ಗಮನಿಸಿದರೆ ಅರಣ್ಯಕರು, ಗಿರಿಜನರು, ಸಮುದ್ರತೀರದ ಮೂಲನಿವಾಸಿಗಳು ಸಾಮಾನ್ಯವಾಗಿ ಎಲ್ಲಿಗೂ ವಲಸೆ ಹೋಗುತ್ತಿರಲಿಲ್ಲ, ಹೋದರೂ ಬಹಳ ಅಲ್ಪಪ್ರಮಾಣದಲ್ಲಿ ಆದಾಗುತ್ತಿದ್ದನ್ನು ಹಾಗಾಗಿ ತಾವಿರುವ ಪರಿಸರದ ಸಂಪೂರ್ಣ ತಿಳಿವಳಿಕೆ ಅವರಿಗಿರುತ್ತಿತ್ತು. ಎಲ್ಲಾ ಕಾಲದಲ್ಲೂ ಮತ್ತು ಎಲ್ಲಾ ಋತುಗಳಲ್ಲೂ ಅದರಲ್ಲಾಗುವ ಬದಲಾವಣೆಗಳನ್ನು ಸೂಕ್ಷ್ಮಸ್ತರದಲ್ಲಿ ತಿಳಿದುಕೊಳ್ಳಲು ಅವರಿಗೆ ಸಾಧ್ಯವಿರುತ್ತಿತ್ತು. ಒಂದು ರೀತಿಯಲ್ಲಿ ಪರಿಸರ ಮತ್ತು ವ್ಯಕ್ತಿ ಸೂಕ್ಷ್ಮವಾದ ಸಂವಹನದಲ್ಲಿಯೂ ಕೂಡ ತೊಡಗಿಕೊಳ್ಳುವಿಕೆಯಲ್ಲಿ ಸಾಧ್ಯವಿರುತ್ತಿತ್ತು. ಹಾಗೆಯೇ ಆ ಪರಿಸರದಲ್ಲಿ ಎಲ್ಲಾ ಅನುಕೂಲಕರ ಮತ್ತು ಅನಾನುಕೂಲಕರವಾದಂತಹ ಪರಿಸ್ಥಿತಿ ಅಥವಾ ಸಂಭವಗಳನ್ನು ಗುರುತಿಸಲು, ಮುಂದಾಗಿ ಕಾಣಲೂ ಕೂಡ ಸಾಧ್ಯವಿರುತ್ತಿತ್ತು. ಇಂತಹ ಪ್ರಜ್ಞಾವಂತಿಕೆಯು ಅವರಿಗೆ ಪರಿಸರ ಮತ್ತು ಸಹಜೀವಿಗಳ ಒಡನಾಟದಿಂದಲೇ ಸಿಗುತ್ತಿತ್ತು. ರಾತ್ರಿಯಾದರೂ ಕೂಡ ಗಾಢ ಕತ್ತಲಲ್ಲಿ ಅವರಿಗೆ ಇಡಬೇಕಾದ ಹೆಜ್ಜೆಗಳ ಬಗ್ಗೆ ಅರಿವಿರುತ್ತಿತ್ತು.

ಮಹಾಭಾರತದಲ್ಲಿ ರಾತ್ರಿಯಾದರೆ ರಾಕ್ಷಸರಿಗೆ ಶಕ್ತಿಯು ಹೆಚ್ಚುತ್ತದೆ ಎಂದು ಘಟೋತ್ಕಚನ ಬಗ್ಗೆ ಕೃಷ್ಣ ಹೇಳುತ್ತಾನೆ. ವಿಷಯವೆಂದರೆ ಶಕ್ತಿ ಹೆಚ್ಚುವುದೇನೂ ಇರುವುದಿಲ್ಲ.

ಹಗಲಿನಲ್ಲಿಯೂ, ರಾತ್ರಿಯಲ್ಲಿಯೂ ಅವರ ನೋಡುವ ಸಾಮರ್ಥ್ಯ ಮತ್ತು ಕೆಲಸ ಮಾಡುವ ಸಾಮರ್ಥ್ಯವೆಲ್ಲವೂ ಇದ್ದಂತೆಯೇ ಇರುತ್ತದೆ. ಪ್ರಕೃತಿಗೆ ಅನುಗುಣವಾಗಿ ನಡೆದುಕೊಳ್ಳುವ ಅವರಿಗೆ ಪ್ರಕೃತಿ ಸಹಜವಾದಂತಹ ಶಕ್ತಿ ಇರುತ್ತದೆ. ಉದಾಹರಣೆಗೆ ಹಗಲಿನಲ್ಲಿ ಬೆಳಕಿದ್ದು ರಾತ್ರಿಯಾದಂತೆ ಅವರು ಮತ್ತೆ ಬೆಳಕನ್ನು ಹಚ್ಚಿಕೊಂಡು ಅದರಲ್ಲಿ ಕೆಲಸ ಮಾಡುವವರಲ್ಲ, ಅವರ ಕಣ್ಣುಗಳು ಹಗಲಿನಲ್ಲಿ ಕಾಣುತ್ತಿದ್ದಂತೆ, ಸಂಜೆ ಹಾಗೆಯೇ ರಾತ್ರಿಯೂ ಕಾಣುವಂತೆ ಹೊಂದಿಕೊಳ್ಳುತ್ತದೆ. ಆದರೆ ಅರಣ್ಯಕರಲ್ಲದ ಗ್ರಾಮವಾಸಿಗಳು ಅಥವಾ ಪಟ್ಟಣವಾಸಿಗಳು ಸಂಜೆಯಾಗುತ್ತಿದ್ದಂತೆಯೇ ಹಗಲಿನಲ್ಲಿರುವಂತಹ ಬೆಳಕನ್ನೇ ತಮ್ಮ ಕಣ್ಣಿಗೆ ತಂದುಕೊಳ್ಳಲು ದೀಪದ ಅಥವಾ ದೊಂದಿಯ ಮೂಲಕ ಯತ್ನಿಸುತ್ತಾರೆ. ರಾತ್ರಿಯಲ್ಲಿ ಬೆಂಕಿ ಅಥವಾ ದೀಪ ಹಚ್ಚಿಕೊಂಡು ನೋಡುವುದು ಕೂಡ ಅನೈಸರ್ಗಿಕವೇ ಆಗಿರುತ್ತದೆ. ಆದರೆ ನಿಸರ್ಗ ಮೂಲಕ್ಕೇ ನಿಷ್ಠರಾಗಿದ್ದ ಅರಣ್ಯಕರಿಗೆ ಅಥವಾ ರಾಕ್ಷಸರಿಗೆ ಬೆಂಕಿಹಚ್ಚಿಕೊಳ್ಳುವಂತಹ ಪ್ರಮೇಯ ಒದಗುತ್ತಿರುತ್ತಿರಲಿಲ್ಲ. ಕತ್ತಲಿನಲ್ಲಿಯೇ ಕಾಣುವಂತಹ ಸಾಮರ್ಥ್ಯವನ್ನು ಅವರು ಕಾಪಾಡಿಕೊಂಡಿದ್ದರು. ನೈಸರ್ಗಿಕ ಪ್ರಜ್ಞೆಯ ಪರಮಾವಧಿ ಇದು.

ಆ ರಾಕ್ಷಸರು ತಮಗೆ ಎಂದಿಗೂ ತೊಂದರೆ ತಂದುಕೊಳ್ಳರು. ಇತರರಿಗೆ ತೊಂದರೆಯಾಗುವ ಸಂದರ್ಭದಲ್ಲಿ ಅಪಾಯವನ್ನು ಗ್ರಹಿಸಿ ರಕ್ಷಿಸಬಲ್ಲರು. ಹಸಿವಿನಿಂದ ಸಾಯರು. ನೀರಿಲ್ಲದೇ ದಾಹದಿಂದ ಒಣಗರು. ಹೊತ್ತುಹೊತ್ತಿಗೆ ಲೈಂಗಿಕವೇ ಮೊದಲಾಗಿ ಎಲ್ಲಾ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬಲ್ಲರು. ಅವರಿಗೆ ಅಧಿಕಾರದ ದಾಹ ಇರುತ್ತಿರಲಿಲ್ಲ, ಇಡೀ ಪರಿಸರದ ಬಗ್ಗೆ ಅವರಿಗೆ ಅಪಾರವಾದಂತಹ ಎಚ್ಚರಿಕೆ ಇರುತ್ತಿತ್ತು, ಅದರಲ್ಲಿ ಅವರ ಸರಳ ಜೀವನ, ಸರಸಮಯವಾದ ಇರುವಿಕೆ ಮತ್ತು ಸಹಜ ಬದುಕು.

ದೇವತೆಗಳ ಪ್ರವೇಶದಿಂದ ರಾಕ್ಷಸರು ಅವನ್ನು ಕಳೆದುಕೊಂಡರು. ಏಕೆಂದರೆ ಅವರೊಂದಿಗೆ ತಮ್ಮ ಅರಣ್ಯಗಳನ್ನು ಉಳಿಸಿಕೊಳ್ಳಲು ಅವರು ಹೋರಾಡಬೇಕಿತ್ತು, ತಮ್ಮ ನೆಲೆಗಳನ್ನು ಕಬಳಿಸುವ ಅವರೊಂದಿಗೆ ಹೋರಾಡಬೇಕಿತ್ತು, ಶತ್ರುವಿನ ಕಡೆಗೆ ಗಮನ ಹರಿದು ಬಡಿದಾಡಿಕೊಂಡಿರುವ ಬದುಕು ತಮ್ಮದಾದಾಗ ಅವರಲ್ಲೂ ಪ್ರಜ್ಞಾವಂತಿಕೆಯು ಕ್ಷೀಣಿಸತೊಡಗಿತ್ತು.

ಏಕೆಂದರೆ ನಿಸರ್ಗದ ಅಪಾಯಗಳನ್ನು ಮುಂಗಾಣಬಹುದು. ಅದರ ಅವಘಡಗಳನ್ನು ನಿವಾರಿಸಿಕೊಳ್ಳಬಹುದು. ಅವುಗಳೇನೇ ಆದರೂ ಪ್ರಕೃತಿಯ ಪ್ರಕ್ರಿಯೆಯಲ್ಲಿನ ಭಾಗವಾಗಿಯೇ ಇರುತ್ತದೆ. ಆದರೆ ಮನುಷ್ಯನ ದಾಳಿ ಆಕಸ್ಮಿಕ. ಕುತಂತ್ರದಿಂದ ಕೂಡಿರುವಂತದ್ದು. ಅವನ ಹಲ್ಲೆ ದಾಳಿಗಳಿಗೆ ಗೊತ್ತುಗುರಿಗಳಿರುವುದಿಲ್ಲ, ಅವನ ಮನಸ್ಸು ನಿಸರ್ಗಪ್ರೇರಿತವಲ್ಲ. ಇಂತಹ ದಾಳಿಗೆ ಪ್ರತಿರೋಧವನ್ನು ಒಡ್ಡುವಲ್ಲಿ ರಾಕ್ಷಸರು ದಿಕ್ಕೆಟ್ಟರು. ಆದರೂ ಅವರಿಗಿದ್ದ ಇತಿಹಾಸದ ಪರಿಚಯ ಅವರಿಗಿದ್ದ ಕಾರಣದಿಂದ ಅವರು ಹೇಗಾದರೂ ಕೂಡ ತಮ್ಮ ಹಿಂದಿನ ಪ್ರಜ್ಞೆ, ಶಕ್ತಿ, ಮುಕ್ತಿ ಐಕ್ಯಗಳನ್ನು ಪಡೆಯಲು ಕೆಲವು ತಂತ್ರಗಳನ್ನು ಬಳಸತೊಡಗಿದರು. ಪ್ರಜ್ಞೆ, ಮುಕ್ತಿ, ಐಕ್ಯಗಳಿಂದ ಶಕ್ತಿ ಸಂಪಾದನೆ. ಆದರೆ ಈ ಮೂರೂ ಇಲ್ಲದೇ ಅಗತ್ಯವಾಗಿರುವಂತಹ ಶಕ್ತಿಯೊಂದನ್ನೇ ಸಂಪಾದಿಸುವ ಧಾವಂತಕ್ಕೂ, ಅನಿವಾರ್ಯಕ್ಕೂ ರಾಕ್ಷಸರು ಬಿದ್ದವರಾಗಿದ್ದರು. ಹಾಗಾಗಿಯೇ ಅವರು ಮಾಡುವಂತಹ ತಪಸ್ಸುಗಳಲ್ಲಿ ಅಂತಹ ಶಕ್ತಿ ಬೇಕು, ಇಂತಹ ಶಕ್ತಿ ಬೇಕು, ಸಾವಿಲ್ಲದ ವರ ಬೇಕು ಇತ್ಯಾದಿಗಳನ್ನು ಕೋರುತ್ತಲಿದ್ದದ್ದು.

ಈ ತಪಸ್ಸು ಮಾಡುವಂತಹ ರಾಕ್ಷಸರು ಯಾರೆಂದರೆ ದೇವತೆಗಳೊಂದಿಗೆ ಹೊಡೆದಾಡಿಕೊಂಡಿದ್ದವರು. ಅವರಿಗೂ ಮುನ್ನ ಅವರ ಪೂರ್ವಿಕರು ಯಾವ ತಪಸ್ಸನ್ನೂ ಮಾಡುವ ಅನಿವಾರ್ಯತೆ ಇರಲಿಲ್ಲ, ಯಾವ ತಂತ್ರಸಾಧನೆಯನ್ನೂ ಮಾಡುವ ಅಗತ್ಯವಿರಲಿಲ್ಲ. ಅವರಿಗೆ ಹೆಸರಿಸಲು ಬರದಿದ್ದರೂ ಪ್ರಜ್ಞೆ ನೈಸರ್ಗಿಕವಾಗಿತ್ತು, ಮುಕ್ತಿಯನ್ನು ಹೊಂದುವುದೇನಲ್ಲ, ಮುಕ್ತವಾಗಿಯೇ ಇರುತ್ತಿದ್ದರು. ಐಕ್ಯವಾಗುವುದು ಅವರ ಗುರಿಯೇನಾಗಿರಲಿಲ್ಲ, ಪ್ರಕೃತಿಯ ಪ್ರತಿಯೊಂದು ಗುಣಗಳಲ್ಲಿ ತಾವು ಐಕ್ಯಭಾವದಿಂದ ಇರುತ್ತಿದ್ದರು. ಹಾಗಾಗಿಯೇ ಅವರು ಸಹಜವಾಗಿಯೇ ಶಕ್ತಿಯುಳ್ಳವರಾಗಿದ್ದರು. ಆದರೆ ಅನೈಸರ್ಗಿಕ ವಿಷಯಗಳ ತಲೆನೋವುಗಳಿಂದ ಕಾದಾಡುವ ಸಂದರ್ಭಗಳು ಒದಗಿದ್ದರಿಂದ ಪ್ರಕೃತಿದತ್ತವಾದ ಶಕ್ತಿಯಿಂದ ವಂಚಿತರಾದರು ಮತ್ತು ಅವುಗಳನ್ನು ಪುನರ್ಗಳಿಸಲು ತಂತ್ರಗಳನ್ನು ಹುಡುಕಿಕೊಳ್ಳಬೇಕಾಯ್ತು.

### ಪ್ರಜ್ಞೆಯು ಹೆಣ್ಣಿನ ರೂಪ


ಪ್ರಜ್ಞಾಪಾರಮಿತಾ ಸೇವ್ಯಾ ಸರ್ವಥಾ ಮುಕ್ತಿಕಾಂಕ್ಷಿಭಿಃ

ಲಲನಾ ರೂಪಮಾಸ್ಥಾಯ ಸರ್ವತ್ರೈವ ವ್ಯವಸ್ಥಿತಾ

ಪ್ರಕೃತಿಯ ಗಂಡುಹೆಣ್ಣು ಈ ಇಬ್ಬರಲ್ಲಿ ಹೆಚ್ಚುಪ್ರಜ್ಞೆಯಿಂದ ಅಥವಾ ಎಚ್ಚರಿಕೆಯಿಂದ ಇರುವಂತಹ ಸಂದರ್ಭಗಳು ಹೆಣ್ಣು ಜೀವಕ್ಕೇ ಒದಗುವುದು. ಸೃಷ್ಟಿಯ ಸಮಯದಲ್ಲಿ ಅಥವಾ ಮಕ್ಕಳನ್ನು ಹೆರುವ ಸಮಯದಲ್ಲಿ ಹೆತ್ತ ಹೆಣ್ಣು ಜೀವವು ಪ್ರಕೃತಿಯ ಅಡೆತಡೆಗಳನ್ನು, ಸಹಜೀವಿಗಳಿಂದ ಉಂಟಾಗುವ ತೊಂದರೆಗಳು ತಾನು ಜನ್ಮಕೊಟ್ಟ ಮರಿಗೆ ಅಥವಾ ಮಗುವಿಗೆ ತಾಕದಂತೆ ನೋಡಿಕೊಳ್ಳುವ ಅನಿವಾರ್ಯತೆ ಇರುತ್ತದೆ. ಇದು ಪ್ರಾಣಿ, ಪಕ್ಷಿಗಳ ವಿಷಯದಲ್ಲಾದರೂ, ಮನುಷ್ಯರ ವಿಷಯದಲ್ಲಾದರೂ ನಿಜವೇ. ಜೈವಿಕವಾಗಿ, ನೈಸರ್ಗಿಕವಾಗಿ ಹೆಣ್ಣು ಪ್ರಜ್ಞಾವಂತಿಕೆಯಿಂದ ಇರುವ ರೂಢಿಯಾಯಿತು. ಅದೇ ಮುಂದೆ ಪ್ರಜ್ಞೆಗೆ ಹೆಣ್ಣು ಪ್ರತಿಮೆಯೂ ಆಯಿತು. ಇದು ತಂತ್ರ ಸಾಧಕರಲ್ಲೂ ಕೂಡ ಗಮನೀಯವಾದ ವಿಷಯವೇ ಆಯಿತು. ಸ್ತ್ರೀಯನ್ನು ಮಹಾಮುದ್ರೆ ಎಂದು ಕರೆದರು. ಅವಳನ್ನು ಬೆರೆಯದ ಹೊರತು ತಮಗೆ ಪ್ರಜ್ಞೆಯಾಗಲಿ, ಮುಕ್ತಿಯಾಗಲಿ ಲಭಿಸುವುದಿಲ್ಲ ಎಂದು ತಿಳಿದರು.

ಸೈದ್ಧಾಂತಿಕವಾಗಿ ಒಂದಾದರು. ಆದರೆ ಸಾಮಾಜಿಕವಾಗಿ ಒಂದಾಗಿ ಬಾಳಲಿಲ್ಲ, ಸಾಂಸ್ಕೃತಿಕ ಭಿನ್ನತೆಗಳಿಂದಾಗಿ ತಂತ್ರ ಸಾಧನೆಯ ಪರಂಪರೆಗಳು ಕವಲೊಡೆದವು. ಅವು ಸಾಮಾನ್ಯ ಜೀವನದ ಮೇಲೂ ಪರಿಣಾಮ ಬೀರಿದವು.


# ಶೂದ್ರರು ಮತ್ತು ದಲಿತರು ಹಿಂದೂಗಳ




ಬ್ರಿಟಿಷರು ಕಾವೇರಿ ನೀರಿನ ವಿಷಯದಲ್ಲಿ ಮಾಡಿರುವ ಐತಿಹಾಸಿಕ ತಪ್ಪನ್ನೇ ಮುಂದುವರಿಸಲು ದೇಶದ ಸ್ವಾತಂತ್ರ್ಯದ ನಂತರವೂ ಸಂಚು ನಡೆದಿರುವಂತೆ ಬ್ರಿಟಿಷರು ಧರ್ಮದ ವರ್ಗೀಕರಣದ ವಿಷಯದಲ್ಲೂ ಮಾಡಿರುವ ಐತಿಹಾಸಿಕ ತಪ್ಪನ್ನೇ ಈಗಲೂ ಮುಂದುವರೆಸಲು ಹುನ್ನಾರು ನಡೆದಿದೆ. ಆದಿತ್ಯವಾರ ಉಡುಪಿಯಲ್ಲಿ ಸಮಾವೇಶಗೊಂಡ ಚಲೋ ಉಡುಪಿ ಜಾಥಾದ ಮುಖ್ಯ ಉದ್ದೇಶ ದಲಿತರ ಆಹಾರ ಕ್ರಮದ ಆಯ್ಕೆ ಹಾಗೂ ಭೂಮಿಯ ಒಡೆತನದ ಹಕ್ಕುಗಳಿಗಾಗಿ ಎಂಬುದು ನಿಜ. ಆದರೆ ಈ ಸಂದರ್ಭವನ್ನು ದಲಿತರು ಯಾವುದೇ ಧರ್ಮಕ್ಕೆ ಒಳಪಟ್ಟವರಲ್ಲ ಎಂಬುದನ್ನು ಘೋಷಿಸಲು ಸಹ ಬಳಸಬೇಕಿತ್ತು. ಬ್ರಿಟಿಷರು 250 ವರ್ಷಗಳ ಹಿಂದೆ ಭಾರತಕ್ಕೆ ಬಂದಾಗ ಅವರಿಗೆ ಇಲ್ಲಿ ಹತ್ತಾರು ಧರ್ಮ ಹಾಗೂ ಸಾವಿರಾರು ಜಾತಿ ಇರುವುದನ್ನು ಕಂಡು ವಿಪರೀತ ಆಶ್ಚರ್ಯವಾಯಿತಂತೆ. ಕಾರಣ ಬ್ರಿಟನ್ನಿನಲ್ಲಿ ಆಗ ಇದ್ದದ್ದು ಕೇವಲ ಕ್ರೈಸ್ತ ಧರ್ಮ ಒಂದೇ. ಅದರಲ್ಲಿ ಕೇವಲ ಪ್ರೊಟೆಸ್ಟಂಟ್ ಮತ್ತು ಕ್ಯಾಥೊಲಿಕ್ ಎಂಬ ಎರಡೇ ಪಂಥಗಳಿದ್ದವು. ಜತೆಗೆ ಸಣ್ಣ ಸಂಖ್ಯೆಯಲ್ಲಿ ಯಹೂದಿಗಳೂ ಇದ್ದರು. ಆದರೆ ಭಾರತದಲ್ಲಿ ಆಗ ಮುಸ್ಲಿಂ, ಕ್ರೈಸ್ತ, ಜೈನ, ಸಿಖ್, ಬೌದ್ಧ ಹಾಗೂ ವೈದಿಕ ಧರ್ಮಗಳಲ್ಲದೇ ಯಾವುದೇ ನಿರ್ದಿಷ್ಟ ಧರ್ಮವನ್ನು ಆಚರಿಸದ ಬಹುಸಂಖ್ಯಾತ ಜನರೂ ಇದ್ದರು. ಈಗ ಶೂದ್ರ ಹಾಗೂ ಪಂಚಮರೆಂದು ಕರೆಯುವ ಜನಾಂಗಗಳಿಗೆ ಆಗ ಯಾವುದೇ ನಿರ್ದಿಷ್ಟ ಧರ್ಮ ಇರಲಿಲ್ಲ. ಆದುದರಿಂದ ಅವರು ತಮ್ಮ ಬುಡಕಟ್ಟು ಜನಾಂಗಗಳ ಅವೈದಿಕ ದೇವರನ್ನು ಮುಖ್ಯವಾಗಿ ಪೂಜಿಸುತ್ತಿದ್ದರು, ಜತೆಗೆ ವೈದಿಕ ದೇವರನ್ನೂ ಪೂಜಿಸತೊಡಗಿದ್ದರು. ಹಾಗಾಗಿ ಆಗ ಬ್ರಿಟಿಷರು ಮುಸ್ಲಿಂ, ಕ್ರೈಸ್ತ, ಜೈನ, ಬೌದ್ಧ ಹಾಗೂ ಸಿಖ್ ಧರ್ಮೀಯರನ್ನು ಹೊರತುಪಡಿಸಿ ಉಳಿದ ಎಲ್ಲಾ ಸ್ಥಳೀಯ ಜನಾಂಗಗಳನ್ನು ಒಟ್ಟುಗೂಡಿಸಿ ಹಿಂದೂಗಳೆಂದು ತಪ್ಪಾಗಿ ವರ್ಗೀಕರಣ ಮಾಡಿದರು. ನಿಜವಾಗಿ ಆಗ ಶೂದ್ರರು ಹಾಗೂ ದಲಿತರು ತಮ್ಮ ಮೂಲ ಪ್ರಕೃತಿ ಪೂಜೆಯ ಜತೆಗೆ ಬೌದ್ಧ-ಜೈನ ಯಕ್ಷ ಯಕ್ಷಿಯರನ್ನೂ ತಮ್ಮ ದೇವರೆಂದು ನಂಬಿ ಪೂಜಿಸುತ್ತಿದ್ದರು. ಹಾಗಿರುವಾಗ ಅವರನ್ನು ಕೇವಲ ಹಿಂದೂ ಮಾತ್ರವಲ್ಲ ಬೌದ್ಧ-ಜೈನರೆಂದು ಸಹ ಕರೆಯಬೇಕಿತ್ತು ಅಲ್ಲವೇ? ಹಾಗಾಗಿ ಈ ಎಲ್ಲರನ್ನೂ ಕೇವಲ ವೈದಿಕ-ಹಿಂದೂ ಎಂದು ಬ್ರಿಟಿಷರು ಕರೆದಿದ್ದು ತಪ್ಪು ತಾನೇ? ಪ್ರಕೃತಿಯ ಪ್ರತಿರೂಪವಾಗಿ ಬುಡಕಟ್ಟು ದೇವರನ್ನು ನಂಬುವವನನ್ನೂ ವೈದಿಕ-ಹಿಂದೂ ಎಂದು ಕರೆದದ್ದು ಸರಿಯಲ್ಲ. ವೈದಿಕರು ಪ್ರಕೃತಿ ಪೂಜಕರಲ್ಲ, ಮೂಲತಃ ವೈದಿಕರು ಪ್ರಕೃತಿ ವಿನಾಶಕರು.

ಕರಾವಳಿಯಲ್ಲಿ ಮುಸ್ಲಿಮರು ಸುಬ್ರಮಣ್ಯ ದೇವಸ್ಥಾನದಲ್ಲಿ ಮಡೆಸ್ನಾನ ಮಾಡುತ್ತಾರೆ, ತುಳುವರ ನಾಗ-ಭೂತ-ದೈವಗಳನ್ನು ನಂಬುತ್ತಾರೆ. ಹಾಗಾದರೆ ಈ ಮುಸ್ಲಿಮರನ್ನು ಹಿಂದೂ ಎನ್ನಲಾದೀತೆ? ಅದರಂತೆ ಕ್ರೈಸ್ತರೂ ಮುಸ್ಲಿಂ ದರ್ಗಾಕ್ಕೆ ಹರಕೆ ಹೊರುತ್ತಾರೆ, ತುಳುವರ ಭೂತ-ನಾಗನಿಗೂ ಹರಕೆ ಹೊರುತ್ತಾರೆ. ಹಾಗಾದರೆ ಇಂತಹ ಕ್ರೈಸ್ತರನ್ನು ಹಿಂದೂ ಅಥವಾ ಮುಸ್ಲಿಂ ಎನ್ನಲಾದೀತೇ? ಅಂತೆಯೇ ಹಿಂದೂಗಳೂ ದರ್ಗಾಕ್ಕೆ ಅಥವಾ ಚರ್ಚುಗಳಿಗೆ ಹರಕೆ ಹೊರುತ್ತಾರೆ. ಆಗ ಈ ಹಿಂದೂಗಳನ್ನು ಮುಸ್ಲಿಂ ಅಥವಾ ಕ್ರೈಸ್ತ ಅನ್ನಬಹುದೇ? ಹಾಗಾಗಿ ಈಗ ದಲಿತರು ಹಾಗೂ ಶೂದ್ರರು ವಿವಿಧ ವೈದಿಕ ದೇವರನ್ನು ಪೂಜಿಸಿದ ಮಾತ್ರಕ್ಕೆ ಅವರನ್ನು ಹಿಂದೂಗಳು ಎಂದು ಬ್ರಿಟಿಷರು ವರ್ಗೀಕರಣ ಮಾಡಿದ್ದು ದೊಡ್ಡ ತಪ್ಪು, ಅದನ್ನು ಈಗ ಸರಿಪಡಿಸುವ ಕಾಲ ಬಂದಿದೆ.

ಬ್ರಾಹ್ಮಣರಿಗೆ ಉಪನಯನ ಇದೆ, ಲಿಂಗಾಯತರಿಗೆ ಲಿಂಗಧಾರಣೆ ಇದೆ, ಜೈನರಿಗೆ ಜಿನ ದೀಕ್ಷೆ ಇದೆ, ಕ್ರೈಸ್ತರಿಗೆ ಚರ್ಚಿನಲ್ಲಿ ದೃಢೀಕರಣ ಇದೆ, ಮುಸ್ಲಿಮರಿಗೆ ಸುನ್ನತ್ ಇದೆ, ಬೌದ್ಧರಿಗೂ ದೀಕ್ಷೆಯಿದೆ. ಸಿಖ್ಖರಿಗೆ ಕಡಗ ಕೃಪಾಣ ಪಗಡಿ ಧರಿಸುವ ಮತ್ತು ಗುರುಗ್ರಂಥದ ಶಪಥ ವಿಧಿಗಳಿವೆ. ಆದರೆ ಶೂದ್ರರಿಗೆ ಮತ್ತು ದಲಿತರಿಗೆ ಇಂತಹ ಯಾವುದೇ ವಿಧಿ ಅಥವಾ ದೀಕ್ಷೆಗಳಿಲ್ಲ, ಜನಿವಾರ ಶಿವದಾರಗಳಿಲ್ಲ,




ಹಾಗಾಗಿ ಅವರು ಯಾವುದೇ ಧರ್ಮಕ್ಕೆ ಸೇರಿದವರಲ್ಲವೇ ಅಲ್ಲ. ಬ್ರಿಟಿಷರು ರಿಲಿಜನ್ ಮತ್ತು ಕಾಸ್ಟ್ (ಧರ್ಮ ಮತ್ತು ಜಾತಿ) ಎಂಬ ಕಾಲಂ ಎಲ್ಲಾ ಫಾರ್ಮ್‌ಗಳಲ್ಲಿ ಸೃಷ್ಟಿಸಿದ್ದರಿಂದ ಆ ಕಾಲಂ ತುಂಬಿಸುವುದು ಕಡ್ಡಾಯವಾಗಿ ಎಲ್ಲಾ ಶೂದ್ರರು ಹಿಂದೂ ಎಂದು ಬರೆದು ನಂತರ ತಮ್ಮ ಜಾತಿ-ಉಪಜಾತಿ ಬರೆಯುವುದು ಅನಿವಾರ್ಯವಾಯಿತು. ಬ್ರಿಟಿಷರು ದಾಖಲೆ ಪತ್ರಗಳಲ್ಲಿ ಸೃಷ್ಟಿಸಿದ ಈ ರಿಲಿಜನ್/ಧರ್ಮ ಎಂಬ ಒಂದೇ ಒಂದು ಕಾಲಂ ಭಾರತೀಯ ಸಮಾಜವನ್ನು ಚೂರು ಚೂರು ಮಾಡಿ ತುಂಬಲಾರದ ನಷ್ಟ ಉಂಟುಮಾಡಿತು. ಹೀಗೆ ಬ್ರಿಟಿಷರು ಮಾಡಿದ ತಪ್ಪಿನಿಂದಾಗಿ ಶೂದ್ರರು ಮತ್ತು ದಲಿತರು ವಿನಾಕಾರಣ ಹಿಂದೂ ಎಂದು ಅನಿಸಿಕೊಳ್ಳಬೇಕಾಯಿತು.


ವೈದಿಕರು ಮಾತ್ರ ಅಗ್ನಿಸಾಕ್ಷಿ ಮದುವೆ ಆಗುವುದು. ಹಿಂದೆಲ್ಲಾ ಕೃಷಿಕ ಶೂದ್ರರು ಮೂಲತಃ ಭೂಮಿಸಾಕ್ಷಿಯಾಗಿ ಮದುವೆಯಾಗುತ್ತಿದ್ದರು. ಮುಂಬೈ ಹಾಗೂ ಗುಜರಾತಿನ ಪಾರ್ಸಿ ಜನಾಂಗದವರೂ ಅಗ್ನಿ ಮಾತ್ರ ಪೂಜಿಸುವುದು. ಕಾರಣ ವೈದಿಕರಂತೆ ಅವರೂ ಆರ್ಯ ಮೂಲದವರು. ಹಾಗಾಗಿ ಭಾರತದ ದ್ರಾವಿಡ ಮೂಲದ ಶೂದ್ರರನ್ನು ಮತ್ತು ದಲಿತರನ್ನು ಹಾಗೂ ಬುಡಕಟ್ಟು ಜನಾಂಗದವರನ್ನು ಹಿಂದೂ ಧರ್ಮದವರು ಎಂದು ವರ್ಗೀಕರಣ ಮಾಡುವುದು ಸರಿಯಲ್ಲ. ಬೆಂಗಳೂರಿನಲ್ಲಿರುವ ಎಲ್ಲರನ್ನೂ ಬೆಂಗಳೂರಿಗರು ಎಂದು ಕರೆಯಬಹುದೇ ವಿನಹ ಎಲ್ಲಾ ಬೆಂಗಳೂರಿಗರನ್ನು ಕನ್ನಡಿಗರು ಎಂದು ಕರೆಯುವುದು ದೊಡ್ಡ ತಪ್ಪು. ಅದೇ ಪ್ರಕಾರ ಎಲ್ಲಾ ಶೂದ್ರ-ದಲಿತರನ್ನು ಭಾರತೀಯರು ಎಂದು ಕರೆಯಬಹುದೇ ವಿನಹ ಹಿಂದೂಗಳೆಂದು ಕರೆಯುವುದೂ ದೊಡ್ಡ ತಪ್ಪು.

ಶೂದ್ರರು-ದಲಿತರು ಹಿಂದೂಗಳಲ್ಲ ಎಂದು ವರ್ಗೀಕರಣ ಮಾಡಿದರೆ, ನಂತರ ಅವರಲ್ಲಿ ಯಾರಾದರೂ ಕ್ರೈಸ್ತ ಮುಸ್ಲಿಂ ಬೌದ್ಧರಾಗಿ ಮತಾಂತರ ಹೊಂದಿದರೆ ಮೇಲ್ಜಾತಿಯವರು ಅವರ ಮನೆಗೆ ಹೋಗಿ ಬಲಾತ್ಕಾರದ ಮತಾಂತರ, ಆಮಿಷದ ಮತಾಂತರ ಅಥವಾ ಲವ್ ಜಿಹಾದ್ ಎಂದು ಹುಯಿಲೆಬ್ಬಿಸಲು ಸಾಧ್ಯವಿಲ್ಲ. ಹಿಂದೂವಲ್ಲದ ಯಾವನೇ ಒಬ್ಬ ತನಗೆ ಬೇಕಾದ ಜಾತಿಗೆ ಮತಾಂತರ ಹೊಂದಿದರೆ ಅದು ವೈದಿಕ-ಹಿಂದೂಗಳಿಗೆ ಸಂಬಂಧವಿಲ್ಲದ ವಿಷಯ ತಾನೇ? ಒಬ್ಬ ಕ್ರೈಸ್ತನು ಮುಸ್ಲಿಂನಾಗಿ ಮತಾಂತರ ಹೊಂದಿದರೆ ಅಥವಾ ಒಬ್ಬ ಮುಸ್ಲಿಮನು ಕ್ರೈಸ್ತನಾಗಿ ಅಥವಾ ಬೌದ್ಧನಾಗಿ ಮತಾಂತರ ಹೊಂದಿದರೆ ಆಗ ಹಿಂದೂಗಳು ಹುಯಿಲೆಬ್ಬಿಸುವುದಿಲ್ಲ. ಕಾರಣ ಅದು ತಮಗೆ ಸಂಬಂಧವಿಲ್ಲದ ವಿಷಯ ಎಂದು ಸವರ್ಣೀಯ ಹಿಂದೂಗಳು ಒಪ್ಪಿಕೊಳ್ಳುತ್ತಾರೆ. ಅಂತೆಯೇ ಯಾವುದೇ ಧರ್ಮಕ್ಕೆ ಒಳಪಡದ ದಲಿತ ಅಥವಾ ಶೂದ್ರರು ಮತಾಂತರವಾದರೆ ಸಂಘಿ ಪುಂಡರು ಹುಯಿಲೆಬ್ಬಿಸಲು ಆಸ್ಪದವೇ ಸಿಗಲಾರದು. ಅದಕ್ಕಾಗಿ ಇನ್ನು ಮುಂದಿನ ರಾಜ್ಯ ಮಟ್ಟದ ದಲಿತರ ಸಮಾವೇಶದಲ್ಲಿ ನವಬೌದ್ಧರನ್ನು ಹೊರತುಪಡಿಸಿ ಉಳಿದ ದಲಿತರು ತಾವು ಯಾವುದೇ ಧರ್ಮದವರಲ್ಲ, ಹಿಂದೂಗಳಂತೂ ಅಲ್ಲವೇ ಅಲ್ಲ ಎಂದು ಘೋಷಣೆ ಮಾಡಬೇಕು. ಅಂತೆಯೇ ಇನ್ನು ಮುಂದೆ ಎಲ್ಲಾ ದಲಿತರು ಶಾಲೆಯ ಸರ್ಟಿಫಿಕೇಟ್‌ಗಳಲ್ಲಿ ರಿಲಿಜನ್/ಧರ್ಮ ಎಂಬ ಕಾಲಂನಲ್ಲಿ "ಅಪ್ರಸ್ತುತ" (Not Applicable) ಎಂದು ಬರೆದು, ಕೇವಲ ಜಾತಿ ಕಾಲಂನಲ್ಲಿ ಮಾತ್ರ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಜನಾಂಗ ಎಂದು ಬರೆದರೆ ಮುಂದೆ ತಮಗೆ ಬೇಕಾದ ಧರ್ಮಕ್ಕೆ ಮತಾಂತರಗೊಳ್ಳುವ ನಿರ್ಧಾರ ಇವರು ಮಾಡಿದಾಗ ಸಂಘಿ ಪುಂಡರು ಬಂದು ಗಲಾಟೆ ಮಾಡಲು ಆಸ್ಪದವೇ ಇರಲಾರದು. ಈ ಬಗ್ಗೆ ದಲಿತ ನೇತಾರರು ದಿಟ್ಟ ನಿರ್ಧಾರ ಕೈಗೊಂಡು ಬ್ರಿಟಿಷರು ಮಾಡಿದ ತಪ್ಪು ಸರಿಪಡಿಸಲಿ ಹಾಗೂ ಮನುವಾದಿಗಳ ಹುನ್ನಾರ ವಿಫಲಗೊಳಿಸಲಿ.

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

## ಸರ್ಜಿಕಲ್ ಸ್ಟ್ರೈಕ್ ಮತ್ತು ಚೆಡ್ಡಿಗಳ ಲಾಭದ ಹುನ್ನಾರ

ಮೊನ್ನೆ ಪಾಕಿಸ್ತಾನದ ಉಗ್ರರ ನೆಲೆಯ ಮೇಲೆ ಸರ್ಜಿಕಲ್ ಸ್ಟ್ರೈಕ್ ಮಾಡಿದ 150 ಕಮಾಂಡೋಗಳಲ್ಲಿ ಒಬ್ಬನೂ ಜೈನ ಬನಿಯಾ ಅಥವಾ ಬ್ರಾಹ್ಮಣ ಯೋಧರು ಇರಲೇ ಇಲ್ಲ. ಆದರೆ ಅದರಲ್ಲಿ ಐದು ಮುಸ್ಲಿಂ ಯೋಧರು ಹಾಗೂ ಇಬ್ಬರು ಕ್ರೈಸ್ತ ಯೋಧರು ಇದ್ದರಂತೆ. ಈಗ ಹೇಳಿ ಯಾರು ಹೆಚ್ಚು ದೇಶ ಭಕ್ತರು? ಇಂತಹ ಸರ್ಜಿಕಲ್ ಸ್ಟ್ರೈಕ್‌ಗಳು ಬೇರೆ ಪ್ರಧಾನಮಂತ್ರಿಗಳ ಕಾಲದಲ್ಲೂ ಬಹಳಷ್ಟು ನಡೆದಿವೆ. ಆದರೆ ರಕ್ಷಣಾ ಗೌಪ್ಯತೆಯ ಕಾರಣಕ್ಕೆ ಅವುಗಳನ್ನು ಆಗಿನ ಸರಕಾರ ಬಹಿರಂಗಪಡಿಸಲಿಲ್ಲ. ಬಿಜೆಪಿ ಪಕ್ಷದವರೇ ಆದ ಅರುಣ್ ಶೌರಿಯವರೇ ತಮ್ಮ ಟ್ವೀಟ್‌ನಲ್ಲಿ ಡಾ.ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗಲೂ ಅರ್ಧ ಡಜನಿಗೂ ಹೆಚ್ಚು ಇಂತಹ ಸರ್ಜಿಕಲ್ ಸ್ಟ್ರೈಕ್‌ಗಳು ನಡೆದಿವೆ. ಆದರೆ ಘನವೆತ್ತ ಮನಮೋಹನ್ ಸಿಂಗರು ಅದನ್ನು ತನ್ನ ವೈಯಕ್ತಿಕ ವೈಭವೀಕರಣಕ್ಕೆ ಬಳಸಿಕೊಳ್ಳಲೇ ಇಲ್ಲ ಎಂದು



ಬರೆದಿದ್ದಾರೆ. ನಿವೃತ್ತ ಕರ್ನಲ್ ಬಿಕ್ರಂ ಸಿಂಗ್ ಇವರೂ ಮೊನ್ನೆ ಒಂದು ಪತ್ರಿಕಾಗೋಷ್ಠಿಯಲ್ಲಿ "1997 ರಿಂದ 2004 ರ ನಡುವೆ ತಾನೇ ಇಂತಹ ಎಂಟು ಸರ್ಜಿಕಲ್ ಸ್ಟ್ರೈಕ್ ತಂಡವನ್ನು ಮುನ್ನಡೆಸಿ ನೂರಾರು ಪಾಕ್ ಉಗ್ರವಾದಿಗಳನ್ನು ಹೊಡೆದುರುಳಿಸಿದ್ದು, ಆಗ ತಮ್ಮ ತಂಡ ಎಲ್‌ಓಸಿ ದಾಟಿ ಪಾಕಿಸ್ತಾನದ ಒಳಗೆ ಸುಮಾರು 50 ಕಿಮೀನಷ್ಟು ಹೊಕ್ಕಿತ್ತು, ಆದರೆ ಈಗಿನ ಸರ್ಜಿಕಲ್ ಸ್ಟ್ರೈಕ್ ಕೇವಲ ನಾಲ್ಕು ಕಿಮೀ ಅಷ್ಟೇ ಪಾಕಿಸ್ತಾನದ ಗಡಿಯೊಳಗೆ ಹೊಕ್ಕಿದ್ದು" ಎಂದು ಬಹಿರಂಗಪಡಿಸಿದ್ದಾರೆ.

ಪ್ರಧಾನ ಮಂತ್ರಿಗಳು ಪ್ರಮಾಣವಚನ ಸ್ವೀಕರಿಸುವಾಗ ತಾವು ದೇಶದ ಭದ್ರತೆಯ ವಿಷಯದಲ್ಲಿ ಸೇನಾಪಡೆಯ ಗೌಪ್ಯತೆಗಳನ್ನು ಸಂಪೂರ್ಣ ಕಾಪಾಡಿಕೊಳ್ಳುತ್ತೇವೆ ಹಾಗೂ ಸೇನಾಪಡೆಯನ್ನು ಅಥವಾ ಸೈನಿಕ ಕಾರ್ಯಾಚರಣೆಗಳನ್ನು ತಮ್ಮ ರಾಜಕೀಯ ಪ್ರಚಾರಕ್ಕೆ ಯಾವ ರೀತಿಯಲ್ಲೂ ಬಳಸಿಕೊಳ್ಳುವುದಿಲ್ಲ ಎಂದು ವಚನ ಕೊಡುತ್ತಾರೆ. ಆದರೆ ಈ ಬಾರಿ ಮೋದಿಯವರು ತಮ್ಮ ಪ್ರಮಾಣವಚನವನ್ನು ಸಂಪೂರ್ಣ ಮುರಿದು ತನ್ನ ವೈಯಕ್ತಿಕ ಪ್ರಚಾರದ ತೆವಲಿಗಾಗಿ ಈ ಸರ್ಜಿಕಲ್ ಸ್ಟ್ರೈಕನ್ನು ಬಳಸಿರುವುದು ಪ್ರಧಾನಿ ಹುದ್ದೆಯ ಘನತೆಗೆ ತಕ್ಕುದಾದುದು ಅಲ್ಲವೇ ಅಲ್ಲ. ಜತೆಗೆ ಪ್ರಚಾರದ ಗೀಳಿಗೆ ಬಲಿಯಾಗಿ ದೇಶದ ಭದ್ರತೆಯನ್ನೂ ಅಪಾಯಕ್ಕೆ ಒಡ್ಡುವ ಬಾಲಿಶತನ ಮೋದಿ ತೋರಿದ್ದಾರೆ.

ಬ್ರಿಟಿಷರು ತಕ್ಕಡಿ ಹಿಡಿದುಕೊಂಡು ಬಂದು ಇಡೀ ದೇಶವನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಂಡರು ನಿಜ, ಆದರೆ ಅವರು ತಮ್ಮವರನ್ನೇ ಎಂದೂ ಶೋಷಿಸಲಿಲ್ಲ. ಆದರೆ ಬ್ರಿಟಿಷರೇ ಹೇಳಿರುವಂತೆ ಅವರ ಕಾಲದಲ್ಲಿಯೇ ಭಾರತೀಯ ಲಾಭಬಡುಕ ಬನಿಯಾ-ಜೈನರು ತಮ್ಮ ತಕ್ಕಡಿಯನ್ನೇ ಅಸ್ತ್ರವನ್ನಾಗಿ ಮಾಡಿ ಇಡೀ ದೇ... ದರೋಡೆ ಮಾಡುತ್ತಿದ್ದರು. ಸ್ವಾತಂತ್ರ್ಯ ಸಿ... ವರ್ಷವಾದರೂ ಪರಿಸ್ಥಿತಿ ಬದಲಾಗಿಲ್ಲ, ಈಗಲೂ... ಬನಿಯಾ-ಜೈನರ ದರೋಡೆ ನಡೆಯುತ್ತಲೇ... ಬರಗಾಲವೇ ಬೀಳಲಿ, ನೆರೆಯೇ ಬರಲಿ ಅಥವಾ ಯ... ಆಗಲಿ, ತಕ್ಕಡಿ ಹಿಡಿದಿರುವ ಲಾಭಬಡುಕ ವ್ಯಾಪಾ... ಈ ಪರಿಸ್ಥಿತಿಯ ದುರ್ಲಾಭ ಪಡೆದು ಅಲ್ಲಿಯೂ... ಲಾಭ ಮಾತ್ರ ನೋಡಿಕೊಳ್ಳುತ್ತಾರೆ. ಷೇರು ಮಾರು... ಮಾರ್ಕೆಟ್‌ಗಳಂತೂ ಇಂತಹ ಸನ್ನಿವೇಶಕ್ಕೇ ಕಾದಿ... ಮೊನ್ನೆಯ ಸರ್ಜಿಕಲ್ ಸ್ಟ್ರೈಕ್ ನಡೆಸುವ ನಾಲ್ಕೈ... ಮುಂಚೆಯೇ ಈ ಬಗ್ಗೆ ಗುಪ್ತ ಮಾಹಿತಿ ಗು... ಹಾಗೂ ಮುಂಬಯಿಯ ಕೆಲವೇ ಕೆಲವು ಗು... ಜೈನ ಮತ್ತು ಬನಿಯಾ ಷೇರು ದಲ್ಲಾಳಿಗಳಿಗೆ ಸಿ... ರಾಜಕೀಯಕ್ಕೆ ಬರುವ ಮುನ್ನ ಅಮಿತ್ ಷಾ ಸಹ... ದಲ್ಲಾಳಿಯಾಗಿ ಇದ್ದವನೇ. ಅವನ ಮೂಲಕವೇ... ಜಾತಿಯ ಕೆಲವೇ ಶೇರ್ ಬ್ರೋಕರ್‌ಗಳಿಗೆ ಸ... ದಾಳಿ ನಡೆಯಲಿದೆ ಎಂಬ ಗುಪ್ತ ಮಾಹಿತಿ ಮುಂ... ಸಿಕ್ಕಿ ಅವರು ಭಾರಿ ಶಾರ್ಟ್ ಸೆಲ್ಲಿಂಗ್ (ಮುಂಗಡ ಬಿ... ಮಾಡಿದರು. ಸರ್ಜಿಕಲ್ ಸ್ಟ್ರೈಕ್ ಮುಗಿದನಂತರ ಎ... ಯುದ್ಧ ಭೀತಿಯಿಂದ ಶೇರ್ ಮಾರ್ಕೆಟ್ 500 ಪಾ... ಕುಸಿದಾಗ ಈ ಜೈನ ಬನಿಯಾಗಳು ತಮ್ಮ... ಸೆಲ್ಲಿಂಗನ್ನು ಚುಕ್ತಾ ಮಾಡಿ ಕೋಟ್ಯಾಂತರ ಲಾಭ... ಕೊಂಡರು ಎನ್ನಲಾಗುತ್ತಿದೆ. ಹೀಗೆ ಕೊನೆಗೆ ನಮ್ಮ ... ಪರಾಕ್ರಮ ಮತ್ತು ದೇಶಪ್ರೇಮ ಕೊನೆಗೆ ಲಾಭ... ಕೊಟ್ಟದ್ದು ಆವೇ ರಕ್ತ ಹೀರುವ ಗುಜ್ಜು ಮಾ... ಬನಿಯಾ-ಜೈನರಿಗೆ ಮಾತ್ರ. ಈಗ ಬಿಜೆಪಿ ... ಆರ್‌ಎಸ್‌ಎಸ್ ಇವು ಹೊರ ನೋಟಕ್ಕೆ ಬ... ಕೈಯಲ್ಲಿ ಇರುವಂತೆ ಕಾಣುತ್ತಿದ್ದರೂ, ನಿಜದಲ್ಲಿ... ಇರುವುದು ಕರಾಳ ಜೈನ ಬನಿಯಾ ವ್ಯಾಪ... ಮುಷ್ಟಿಯಲ್ಲಿ!


- ಜೆ. ರವಿಕಿರಣ, ಮೈ...


## ಅಮಿತ್ ಶಾನ ಷಡ್ಯಂತ್ರ ಸಫಲವಾಗಲಿಲ್ಲ

ಕಾವೇರಿ ವಿಷಯದಲ್ಲಿ ಕರ್ನಾಟಕದ ಸಂಸದರು ... ಮೋದಿಯವರನ್ನು ಭೇಟಿಯಾಗಿ ಕಾವೇರಿಯಲ್ಲಿ ... ಅಲ್ಪಸ್ವಲ್ಪ ನೀರನ್ನೂ ನಾವು ತಮಿಳುನಾಡಿಗೆ ಬಿಟ್ಟರೆ ... ಕಣಿವೆಯ ನಮ್ಮ ಜಲವಿದ್ಯುತ್ ಘಟಕಗಳೆಲ್ಲಾ ನ... ಬಂದ್ ಆಗಿ ಕರ್ನಾಟಕಕ್ಕೆ ಈ ವರ್ಷ ಭೀಕರ ... ಕ್ಷಾಮ ಉಂಟಾಗಲಿದೆ ಎಂದು ಹೇಳಿದಾಗ ಮೋದಿ... ಹೇಳಿದ್ದೇನು ಗೊತ್ತೇ? "ಉಡುಪಿಯಲ್ಲಿ ನಮ್ಮ ... ಅದಾನಿಯ ಮತ್ತು ಬಳ್ಳಾರಿಯಲ್ಲಿ ಜಿಂದಾಲ್ ... ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ ಸ್ಥಾವರಗಳ... ತಾನೇ. ಅವರಿಂದ ನೀವು ಸರಿಯಾದ ಬೆಲೆ ... ಬೇಕಾದಷ್ಟೂ ವಿದ್ಯುತ್ ಖರೀದಿಸಿದರೆ ನಿಮಗೆ ... ಸಮಸ್ಯೆ ಇರಲಾರದು. ಬೇಕಾದರೆ ನಾನೇ ಅದಾನಿ ... ಜಿಂದಾಲ್ ಜೊತೆ ನಿಮ್ಮ ಪರವಾಗಿ ಮಾತನಾಡು...

ಮೊನ್ನೆ ಸೆಪ್ಟೆಂಬರ್ 30ಕ್ಕೆ ಕಾವೇರಿ ಮೇಲ್ಮ... ವಿಚಾರಣೆಗೆ ಮುಂಚೆಯೇ ನ್ಯಾಯಮೂರ್ತಿ ಉ... ಲಲಿತ್ ತಮಿಳುನಾಡಿನ ವಕೀಲರನ್ನು ತನ್ನ ಚೇ... ಕರೆಸಿ ಜಯಲಲಿತಾರ ಆರೋಗ್ಯದ ಬಗ್ಗೆ ವಿ... ವಿಚಾರಿಸಿ ನಂತರವೇ ಕೋರ್ಟಿಗೆ ತೆರಳಿದ್ದಂತೆ. ... ಲಾದರೂ ಈ ಮರಾಠಿ ದೇಶಸ್ಥ ಬ್ರಾ... ನ್ಯಾಯಮೂರ್ತಿಯ ಆಸಕ್ತಿ ಯಾವ ದಿಕ್ಕಿಗೆ ಹರಿ... ಎಂದು ಕನ್ನಡಿಗರು ಅರ್ಥ ಮಾಡಿಕೊಳ್ಳಬಹುದು...

2014 ಕ್ಕೆ ಮೊದಲು ನಮ್ಮ ಬೆಳಗಾವಿ ಗಡಿ ... ವಿಷಯದಲ್ಲಿ ಮಹಾರಾಷ್ಟ್ರ ಸರಕಾರ ಸುಪ್ರೀಂಕೋ... ದಾವೆ ಹೂಡಿದಾಗ ಮೊದಲಿಗೆ ಮಹಾರಾಷ್ಟ್ರದ ...





ಹಾಗೂ ಕರ್ನಾಟಕದ ವಿರುದ್ಧವಾಗಿ ವಾದಿಸಿದ್ದು ಇದೇ ಮರಾಠಿಗ ಉದಯ್ ಲಲಿತ್. ಹೀಗಿರುವಾಗ ಕರ್ನಾಟಕದ ಬಗ್ಗೆ ಈ ಮರಾಠಿ ನ್ಯಾಯಮೂರ್ತಿಗೆ ಎಷ್ಟೊಂದು ಪೂರ್ವಾಗ್ರಹ ಇರಬಹುದು ಯೋಚಿಸಿ.

ಅದಕ್ಕೂ ಮೊದಲು ಗುಜರಾತಿನ ಸೊಹ್ರಾಬುದ್ದೀನ್ ಶೇಖ್ ಮತ್ತು ತುಳಸಿರಾಮ್ ಪ್ರಜಾಪತಿ ಇವರಿಬ್ಬರ ನಕಲಿ ಎನ್‌ಕೌಂಟರ್ ಪ್ರಕರಣದಲ್ಲಿ ಇದೇ ಉದಯ್ ಲಲಿತ್ ಅಮಿತ್ ಷಾ ಪರವಾಗಿ ನ್ಯಾಯಾಲಯದಲ್ಲಿ ವಾದ ಮಾಡಿದ್ದರು. ಮೇಲಾಗಿ ಉದಯ ಲಲಿತರ ತಂದೆ ಉಮೇಶ್ ಲಲಿತ್ ಇವರೂ ಆರ್‌ಎಸ್‌ಎಸ್‌ನಲ್ಲಿ ಸಂಘ ಪ್ರಚಾರಕ್ ಹುದ್ದೆಯನ್ನು ಕಳೆದ 40 ವರ್ಷದಿಂದ ನಿರ್ವಹಿಸುತ್ತಿದ್ದಾರೆ. ಹಾಗಾಗಿ ಅವರ ಆರ್‌ಎಸ್‌ಎಸ್ ಹಿನ್ನೆಲೆಗಾಗಿ ಮತ್ತು ಅಮಿತ್ ಶಾಗೆ ಮಾಡಿರುವ ಉಪಕಾರದ ಸ್ಮರಣೆಗಾಗಿ ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಕೂಡಲೇ ಉದಯ ಲಲಿತ್‌ರನ್ನು ಸುಪ್ರೀಂಕೋರ್ಟಿನ ನ್ಯಾಯಮೂರ್ತಿಯಾಗಿ ನೇರವಾಗಿ ನೇಮಿಸಲಾಯಿತು. ಇದರಿಂದ ಸುಪ್ರೀಂ ನ್ಯಾಯಾಧೀಶರಾಗುವಷ್ಟು ಹಿರಿತನ ಹಾಗೂ ಅರ್ಹತೆಯಿದ್ದ ಎಷ್ಟೋ ಪ್ರಾಮಾಣಿಕ ಹೈಕೋರ್ಟ್ ನ್ಯಾಯಾಧೀಶರು ಬೇಸರಗೊಂಡಿದ್ದರು. ಹೀಗೆ ಬಿಜೆಪಿಯಿಂದ ಇಷ್ಟೆಲ್ಲಾ ಲಾಭ ಪಡೆದಿರುವ ಈ ಉದಯ ಲಲಿತ್ ತನ್ನ ಋಣ ಸಂದಾಯ ಮಾಡಲು ನ್ಯಾಯಾಂಗನಿಂದನೆಯ ನೆಪದಲ್ಲಿ ಕರ್ನಾಟಕದ ಕಾಂಗ್ರೆಸ್ ಸರಕಾರವನ್ನು ಪತನಗೊಳಿಸಲು ಭೂಮಿಕೆ ತಯಾರು ಮಾಡಿಕೊಡದಿರಲು ಸಾಧ್ಯವೇ? ಆದರೆ ನಮ್ಮ ಮಾಜಿ ಪ್ರಧಾನಿ ದೇವೇಗೌಡರು ಸಿದ್ದರಾಮಯ್ಯರಿಗೆ ಗಟ್ಟಿ ಬೆಂಬಲ ಕೊಟ್ಟಿದ್ದರಿಂದಾಗಿ ಅಮಿತ್ ಶಾನ ಷಡ್ಯಂತ್ರ ಸಫಲವಾಗಲಿಲ್ಲ ಸದ್ಯ.

- ರಾಮಕೃಷ್ಣ ಕುಲಾಲ್, ಬೆಂಗಳೂರು

## ಜಾನಕಿಯಮ್ಮ ನೂರ್ಕಾಲ ಬಾಳಲಿ...

ಟಿವಿ ಯುಗ ಭಾರತವನ್ನಾವರಿಸುವ ಮೊದಲು ರೇಡಿಯೋ ಆಕಾಶವಾಣಿಗಳದ್ದೇ ದರ್ಬಾರು. ಆ ಕಾಲದ ಕನ್ನಡಿಗರಿಗೆ ಎಸ್. ಜಾನಕಿ ಎನ್ನುವುದೊಂದು ಆಪ್ತ ಹೆಸರು. ಎಲ್ಲರೂ ರೇಡಿಯೋಗೆ ಕಿವಿಗೊಡುವುದೇ ಹೆಚ್ಚಿದ್ದ ಕಾರಣ ಈಗಿನ ಟಿವಿಗಳಂತೆ ಆಗ ಕಣ್ಣಿಗೇನೂ ಅಂಥಾ ಕೆಲಸ ಇದ್ದಿರಲಿಲ್ಲ. ಅಂತಹ ಸಮಯದಲ್ಲಿ ರೇಡಿಯೋ ಇಲ್ಲಾ ಟೇಪ್ ರೆಕಾರ್ಡರ್ ಮೂಲಕ ಕರ್ನಾಟಕದ ಎಲ್ಲಾದರೂ ಒಂದೆಡೆ ಜಾನಕಿಯವರ ಹಾಡು ರಂಜಿಸುತಿದ್ದುತಹ ಕಾಲವದು. ವಾರ್ತಾ ವಾಚಕರು, ಸಿನಿಮಾ ಹಾಡುಗಾರರು ಜನರಿಗೆ ಎಷ್ಟೇ ಪರಿಚಿತರಿದ್ದರೂ ಅವರು ಎದುರಿಗೇ ಇದ್ದರೂ ಕೂಡ ಯಾರೂ ಅವರನ್ನು ಗುರುತಿಸುತ್ತಿರಲಿಲ್ಲ. ಯಾಕೆಂದರೆ, ಯಾರಿಗೂ ಅವರ ಮುಖಪರಿಚಯ ಇದ್ದಿರುತ್ತಿರಲಿಲ್ಲ. ಒಟ್ಟಾರೆ ಇವರುಗಳೆಲ್ಲ ಕೇವಲ ಧ್ವನಿಗಳ ಮೂಲಕವಷ್ಟೇ ಚಿರಪರಿಚಿತರು. ಆದರೆ ಈಗ ಕಾಲ ಬದಲಾಗಿದೆ. ಕೇವಲ ಎರಡು ಹಾಡು ಹಾಡಿದಾತನೂ ಕೂಡ ಭಯಂಕರ ಸೆಲೆಬ್ರಿಟಿ ಎನ್ನಿಸಿಕೊಳ್ಳುವ ಕಾಲ ಇವತ್ತಿನದು.

ಇಂದಿನ ಹುಚ್ಚು ಮಾಧ್ಯಮಗಳ ಎಡಬಿಡಂಗಿತನಕ್ಕೆ ಬಲಿಯಾಗಿ ಜಾನಕಿಯಮ್ಮನ ನಿಧನದ ವಾರ್ತೆ ಇತ್ತೀಚೆಗೆ ಹಬ್ಬಿತ್ತು. ಸುಂದರಿಯರಾದ ದಕ್ಷಿಣದ ನಾಕಿಯರನ್ನು ಬಿಟ್ಟರೆ ಕಮಲಹಾಸನ್‌ನಂತಹ ಅದ್ಭುತ ನಟನನ್ನು ಭಾರತೀಯ ಚಿತ್ರರಂಗ ಬಾಲಿವುಡ್ ಎಂದು ಕರೆಯಲ್ಪಡುವ ಹಿಂದಿ ಚಿತ್ರರಂಗ ಪಕ್ಕಕ್ಕಿಟ್ಟೇ ನೋಡಿತು. 'ಏಕ್ ದೂಜೆ ಕೇ ಲಿಯೇ', 'ಸಾಗರ್', 'ಹಮ್ ಆಪ್ ಕೆ ಹೈ ಕೌನ್'ನಲ್ಲಿ ಹಾಡಿದ ಎಲ್ಲಾ ಹಾಡುಗಳೂ ಸೂಪರ್ ಹಿಟ್‌ಗಳಾದರೂ ಎಸ್ಪಿಬಿ ಯಾಗಲೀ ಜೇಸುದಾಸರಾಗಲೀ ಹಿಂದಿಯಲ್ಲಿ ಉಳಿಯಲೇ ಇಲ್ಲ. ಲತಾ ಮಂಗೇಶ್ಕರ್ ಮತ್ತು ಆಶಾ ಬೋಂಸ್ಲೆ ಅವರು ಎಷ್ಟೇ ದೊಡ್ಡ ಗಾಯಕಿಯರಾದರೂ ಅವರಿಗೆ ಸಿಕ್ಕಂತಹ ಹಿಂದಿಚಿತ್ರರಂಗದಂತಹ ದೊಡ್ಡತನದ ಆಸರೆ ಜಾನಕಿಯವರಿಗೆ ದೊರೆಯಲಿಲ್ಲ. ಅವರಿಗೇನೂ ಕಡಿಮೆಯಿಲ್ಲದ ಜಾನಕಿಯಮ್ಮ ಒಂದುವೇಳೆ ಹಿಂದಿಭಾಷಿಕರಾಗಿದ್ದರೆ ಖಾಲ್ಕೆ ಭಾರತ ರತ್ನ ಎಲ್ಲಪ್ಪೂ ಹುಡುಕಿಕೊಂಡು ಅವರ ಬಳಿ ಬರುತಿತ್ತು.

- ರವಿ ಪುತ್ತೂರ, ದ.ಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಕಿರಿದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

# ನಾಗರಹಾವು ಸಿನಿಮಾದಲ್ಲಿ ನನ್ನದು ದ್ವಿಪಾತ್ರ: ರಮ್ಯಾ

**ಬರೋಬ್ಬರಿ ನಾಲ್ಕು ವರ್ಷಗಳಿಂದ ತಯಾರಾಗುತ್ತಿರುವ 'ನಾಗರಹಾವು' ಸಿನಿಮಾ ಈ ವಾರ ರಿಲೀಸ್ ಆಗುತ್ತಿದೆ. ರಮ್ಯಾ ಈ ಚಿತ್ರದಲ್ಲಿ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಸದ್ಯ ಸಿನಿಮಾರಂಗದಿಂದಲೇ ದೂರ ಆಗಿರುವ ಇವರು ಪಾತ್ರದ ಬಗ್ಗೆ ಮಾತಾಡಿದ್ದಾರೆ.**



ಎಲ್ಲವೂ ಅಂದುಕೊಂಡಂತೆ ಆಗಿದ್ದರೆ 'ನಾಗರಹಾವು' ಸಿನಿಮಾ ಎರಡ್ಮೂರು ವರ್ಷಗಳ ಹಿಂದೆಯೇ ತೆರೆ ಕಾಣಬೇಕಿತ್ತು, ತಾಂತ್ರಿಕ ಕಾರಣಗಳಿಂದಾಗಿ ಈಗ ಬಿಡುಗಡೆ ಆಗುತ್ತಿದೆ. ಈ ಸಿನಿಮಾದ ಮುಖ್ಯ ಪಾತ್ರದಲ್ಲಿ ದಿಗಂತ್ ಮತ್ತು ರಮ್ಯಾ ಕಾಣಿಸಿಕೊಂಡಿದ್ದಾರೆ. ಕ್ಲೈಮ್ಯಾಕ್ಸ್ ಸನ್ನಿವೇಶದಲ್ಲಿ ವಿಷ್ಣುವರ್ಧನ್ ಕೂಡ ಸಿಜಿಐ ತಂತ್ರಜ್ಞಾನದ ಮೂಲಕ ಪ್ರೇಕ್ಷಕರಿಗೆ ದರ್ಶನ ಕೊಡಲಿದ್ದಾರೆ. ಕನ್ನಡ, ತಮಿಳು ಮತ್ತು ತೆಲುಗಿನಲ್ಲಿ ಏಕಕಾಲಕ್ಕೆ ತೆರೆ ಕಾಣುತ್ತಿರುವ ಈ ಚಿತ್ರ ಮತ್ತು ಪಾತ್ರದ ಬಗ್ಗೆ ರಮ್ಯಾ ಮಾತಾಡಿದ್ದಾರೆ.

** 'ಆರ್ಯನ್' ಸಿನಿಮಾನೇ ನಿಮ್ಮ ಕೊನೆಯ ಚಿತ್ರ ಎಂದು ಪ್ರಚಾರ ಮಾಡಲಾಯಿತು. ಆದರೆ 'ನಾಗರಹಾವು' ಹೇಗೆ ತೂರಿ ಬಂತು?*

ಎಲ್ಲರಿಗೂ ಗೊತ್ತಿರುವಂತೆ ಈ ಸಿನಿಮಾ ನಿರ್ಮಾಣ ಶುರುವಾಗಿದ್ದು ನಾಲ್ಕು ವರ್ಷಗಳ ಹಿಂದೆ. ಹಲವು ತಾಂತ್ರಿಕ ತೊಂದರೆಗಳಿಂದಾಗಿ ಈಗ ರಿಲೀಸ್ ಆಗುತ್ತಿದೆ. ಹೊಸ ಹೊಸ ತಂತ್ರಜ್ಞಾನಗಳನ್ನು ಸಿನಿಮಾದಲ್ಲಿ ಅಳವಡಿಸಿಕೊಂಡಿದ್ದಾರೆ ನಿರ್ದೇಶಕರು. ಹೀಗಾಗಿ ತಡವಾಗಿದೆ. ಲೇಟಾಗಿದ್ದರೂ ಹೊಸ ಫೀಲ್ ಈ ಸಿನಿಮಾ ಕೊಡಲಿದೆ.

** ನೀವಿಲ್ಲಿ ಯಾವ ರೀತಿಯ ಪಾತ್ರವನ್ನು ನಿರ್ವಹಿಸುತ್ತಿದ್ದೀರಿ? ನಾಗಿಣಿಯ ಅವತಾರವಾ?*

ನಾನು ಈ ಸಿನಿಮಾದಲ್ಲಿ ಎರಡು ರೀತಿಯ ಪಾತ್ರವನ್ನು ನಿರ್ವಹಿಸಿದ್ದೇನೆ. ಒಂದು ಹದಿನೈದನೆಯ ಶತಮಾನದ ಹುಡುಗಿ. ಮತ್ತೊಂದು ಈಗಿನದ್ದು. ಎರಡೂ ಪಾತ್ರಗಳಿಗೂ ವಿಭಿನ್ನ ಹಿನ್ನೆಲೆಯಿದೆ. ಭಾವಗಳು ಕೂಡ ಬೇರೆ ಬೇರೆ. ಈಗಾಗಲೇ ರಿಲೀಸ್ ಆಗಿರುವ ಪ್ರೋಮೋದಲ್ಲಿ ಎರಡೂ ರೀತಿಯ ಪಾತ್ರಗಳನ್ನು ತೋರಿಸಿದ್ದಾರೆ. ಮುಗ್ಧ ಹೆಂಗಸಿನ ಪಾತ್ರದಷ್ಟೇ ನಾಗಿಣಿ ಅವತಾರದ ಕ್ಯಾರೆಕ್ಟರ್ ಅನ್ನು ಪ್ರೇಕ್ಷಕರು ಕುತೂಹಲದಿಂದ ವೀಕ್ಷಿಸಿದ್ದಾರೆ.

** ಯಾವ ಕಾರಣಕ್ಕಾಗಿ ಈ ಸಿನಿಮಾವನ್ನು ನೀವು ಒಪ್ಪಿಕೊಂಡಿರಿ?*

ಇದು ಕೋಡಿ ರಾಮಕೃಷ್ಣ ನಿರ್ದೇಶನದ ಚಿತ್ರ. ಅವರ ಬಹುತೇಕ ಚಿತ್ರಗಳು ಹಿಟ್ ಆಗಿವೆ. ಅದರಲ್ಲೂ 'ಅರುಂಧತಿ' ಚಿತ್ರವು ಬಾಕ್ಸ್ ಆಫೀಸ್‌ನಲ್ಲಿ ದಾಖಲೆಯನ್ನೇ ಕ್ರಿಯೇಟ್ ಮಾಡಿತ್ತು. ಇಂತಹ ನಿರ್ದೇಶಕರ ಜತೆ ಕೆಲಸ ಮಾಡುವುದು ನಮಗೂ ಹೆಮ್ಮೆಯ ಸಂಗತಿ. ಅಲ್ಲದೇ ನಿರ್ದೇಶಕರು ಹೇಳಿದ ಕತೆಯೂ ತುಂಬಾ ಚೆನ್ನಾಗಿತ್ತು. ಆ ಕಾರಣಕ್ಕಾಗಿ ಒಪ್ಪಿಕೊಂಡೆ.

** ಸಾಹಸಸಿಂಹ ವಿಷ್ಣುವರ್ಧನ್ ಅವರು ಕೂಡ ಈ ಸಿನಿಮಾದಲ್ಲಿ ಪಾತ್ರವಾಗಿದ್ದಾರೆ. ಆ ಕುರಿತು ಹೇಳಿ.*

ವಿಷ್ಣು ಸಾರ್ ಜತೆ ಕೆಲಸ ಮಾಡುವುದೆಂದರೆ ಅದೊಂದು ಗೌರವ. ನಮ್ಮನ್ನು ಅಗಲಿ ಅವರು ಐದಾರು ವರ್ಷಗಳೇ ಆಗಿವೆ. ಆದರೂ, ಸಿನಿಮಾ ರಂಗದ ಬಗೆಗಿನ ಅವರ ಪ್ರೀತಿಯು ನಾನಾರೂಪದಲ್ಲಿ ಪ್ರಕಟಗೊಳ್ಳುತ್ತಿದೆ. ವಿಭಿನ್ನ ತಂತ್ರಜ್ಞಾನದ ಮೂಲಕ ವಿಷ್ಣುವರ್ಧನ್ ಅವರು ಮತ್ತೆ ಅಭಿಮಾನಿಗಳನ್ನು ರಂಜಿಸಲಿದ್ದಾರೆ. ಅವರ ಸಿನಿಮಾದಲ್ಲಿ ನಾನು ನಟಿಸಿದ್ದೇನೆ ಅನ್ನುವುದು ನನಗೆ ಹೆಮ್ಮೆಯ ವಿಚಾರ.

** ಸಿನಿಮಾ ರಂಗದಿಂದ ದೂರ ಆಗಿದ್ದೀರಾ? ಅಥವಾ ಮತ್ತೆ ನಟಿಸುತ್ತೀರಾ?*


ಸದ್ಯ ರಾಜಕಾರಣದಲ್ಲಿ ಬ್ಯುಸಿ ಆಗಿದ್ದೇನೆ. ಆ ರಂಗದಲ್ಲಿ ಮಾಡಬೇಕಾದ ಕೆಲಸಗಳು ತುಂಬಾ ಇವೆ. ಹಾಗಾಗಿ ನಾನು ರಾಜಕಾಣದಲ್ಲೇ ಸಂಪೂರ್ಣ ಮುಳುಗಿಹೋಗಿದ್ದೇನೆ. ಅದರ ಜತೆಗೆ ದೂರದಿಂದಲೇ ಸಿನಿಮಾ ರಂಗವನ್ನೂ ವೀಕ್ಷಿಸುತ್ತಿದ್ದೇನೆ. ಹಾಗಂತ ದೂರ ಉಳಿದಿದ್ದೇನೆ ಅನ್ನುವುದೂ ತಪ್ಪಾಗುತ್ತದೆ.

** ಹೊಸ ಸಿನಿಮಾ ಏನಾದರೂ ಒಪ್ಪಿಕೊಂಡಿದ್ದೀರಾ?*

ಇಲ್ಲ, ಯಾವುದೇ ಸಿನಿಮಾವನ್ನು ಒಪ್ಪಿಕೊಂಡಿಲ್ಲ. ಸಮಯ ಸಿಕ್ಕಾಗ ಸಿನಿಮಾ ಸಂಬಂಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಸದ್ಯಕ್ಕೆ ಪಾತ್ರ ಮಾಡುವಷ್ಟು ಪುರುಸೊತ್ತು ಇಲ್ಲ.

** ಸಿನಿಮಾ ಮಾಡುವಂತೆ ಅಭಿಮಾನಿಗಳ ಒತ್ತಡ ಇದೆಯಾ?*

ಖಂಡಿತಾ ಒತ್ತಡವಿದೆ. ನಾನು ಎಲ್ಲಿಗೇ ಹೋಗಲಿ ಸಿನಿಮಾದ ಬಗ್ಗೆ ಮಾತಾಡುತ್ತಾರೆ. ರಾಜಕಾರಣದ ಜತೆಗೆ ಸಿನಿಮಾ ಮಾಡಬೇಕೆಂದು ಹೇಳುತ್ತಾರೆ. ಅವರಿಗೂ ನನ್ನ ಕೆಲಸಗಳ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದೇನೆ. ಈವರೆಗೂ ನಟಿಯಾಗಿ ಪ್ರೇಕ್ಷಕರನ್ನು ರಂಜಿಸಿದ್ದೇನೆ. ಈಗ ಸಮಾಜ ಸೇವೆಯತ್ತ ಮುಖ ಮಾಡಿದ್ದೇನೆ. ಎರಡೂ ಕ್ಷೇತ್ರಗಳು ನನಗಿಷ್ಟವಾದವುಗಳು. ■




## ಸರಕಾರಿ ಶಾಲೆ ಉಳಿಸುವ..

02 ◀◀

ಯೊಬ್ಬರಿದ್ದಾರೆ. ತೀರ್ಥಹಳ್ಳಿ ಕಸಾಪ ಅಧ್ಯಕ್ಷರೂ ಆಗಿದ್ದರು. ಶಾಲಾಶಿಕ್ಷಣದ ಸ್ಥಿತಿಗತಿಯ ಬಗ್ಗೆ ಅಪಾರ ಅನುಭವ ಮತ್ತು ತಿಳಿವಳಿಕೆ ಇವರಿಗಿದೆ. ಮಾತಿಗೆ ಕರೆದರೆ, ಅರ್ಧದಿನ ಬೇಕಾದರೂ ಇದರ ಕುರಿತು ಮಾತನಾಡುತ್ತಾರೆ. ಇವರಿಗೆ ಉತ್ತಮ ಶಿಕ್ಷಕರೆಂದು ರಾಷ್ಟ್ರ ಪ್ರಶಸ್ತಿಯೂ ಬಂದಿದೆ. ಅಂದರೆ, ಸಿಕ್ಕಾಪಟ್ಟೆ ಮಾತು ಮಾತ್ರ ಆಡುತ್ತಾರೆಂದು ನೀವು ಭಾವಿಸುವ ಸಾಧ್ಯತೆಯಿದೆ. ಅದರ ಬಗ್ಗೆ ಅವರದ್ದೇ ಮಾತು ಹೀಗಿದೆ. 'ನನ್ನ ಮಕ್ಕಳನ್ನು ಯಾವ ಶಾಲೆಗೆ ಸೇರಿಸಬಹುದೆಂಬ ಪ್ರಶ್ನೆ ನನ್ನ ಮುಂದೆಯೂ ಇತ್ತು. ನಾವಿರುವ ಜಾಗದ ಸರ್ಕಾರೀ ಶಾಲೆಗಳಲ್ಲಿ ಅತ್ಯುತ್ತಮ ಶಿಕ್ಷಣ ದೊರೆಯುತ್ತದೆಂದು ನನಗೇನೂ ಅನ್ನಿಸುವುದಿಲ್ಲ. ಆದರೆ, ನನ್ನ ಮಕ್ಕಳನ್ನು ನಾನು ಸರ್ಕಾರೀ ಶಾಲೆಗೇ ಸೇರಿಸಿದೆ. ಏಕೆಂದರೆ, ನಿಜವಾದ ಭಾರತ ಇರುವುದು ಈ ಶಾಲೆಗಳಲ್ಲೇ ಎಂಬುದು ನನ್ನ ಅಭಿಪ್ರಾಯ'.

ಸರ್ಕಾರೀ ಶಾಲೆ ಉಳಿಸಿಕೊಳ್ಳುವ ಹೋರಾಟದಲ್ಲಿ ನಮ್ಮೆಲ್ಲಾ ಅನುಭವಗಳೂ ಇಂತಹ ಸಕಾರಾತ್ಮಕ ಅನುಭವಗಳೇ ಎಂದು ಹೇಳಲಾಗದು. ಮೇಲೆ ಕಾಣಿಸಿರುವ ಎಲ್ಲಾ ಸಂದರ್ಭಗಳಲ್ಲೂ ಸಾಕಷ್ಟು ಜನರ ಶ್ರಮವಿದೆ. ಅವರ ಮುಂದೆ ಹಲವು ಜನ ಏನೇನೋ ಸಿನಿಕತನದ ಮಾತುಗಳನ್ನು ಆಡಿದ್ದಾರೆ, ಆಡಿಕೊಂಡಿದ್ದಾರೆ. ಅವರು ಹಿಂದೆಗೆದಿಲ್ಲ. ಈ ಸದ್ಯ ರಾಜ್ಯದಲ್ಲಿ ಸುಮಾರು 1000 ಶಾಲೆಗಳಲ್ಲಾದರೂ ಇಂತಹ ಪ್ರಯತ್ನಗಳು ನಡೆಯುತ್ತಲೇ ಇವೆ. ಎಲ್ಲವೂ ನಿರ್ದಿಷ್ಟ ಸಂಘಟನೆಯ ಬ್ಯಾನರ್ ಹಾಕಿಕೊಂಡೇ ನಡೆಯುತ್ತಿಲ್ಲ. ಎಲ್ಲವೂ ಪತ್ರಿಕೆಗಳಲ್ಲಿ ಸುದ್ದಿಯೂ ಆಗುತ್ತಿಲ್ಲ. ಈ ವಿದ್ಯಮಾನ ಇನ್ನೂ ವಿಸ್ತಾರವಾಗುತ್ತದೆ ಮತ್ತು ಮುಂದೊಂದು ದಿನ ಇದೇ ಸುಧಾರಣೆಯ ಕೆಲಸ ಹೋರಾಟವಾಗಿ ಸಿಡಿಯುತ್ತದೆ ಎಂಬುದು ನಮ್ಮ ನಂಬಿಕೆ. ನಾವೂ ನಮ್ಮೂರಲ್ಲಿ ಇಂತಹದೊಂದನ್ನು ಮಾಡಬೇಕೆಂದುಕೊಳ್ಳುವವರು, ಎಲ್ಲಿ ಇಂತಹದ್ದು ನಡೆದರೂ ನಾವೂ ಬೆಂಬಲ ಕೊಡಲು ಬಯಸುತ್ತೇವೆ ಎನ್ನುವವರು, ಈ ಪ್ರಕ್ರಿಯೆಯನ್ನು ರಾಜ್ಯಾದ್ಯಂತ ಸಂಯೋಜಿಸಲು ನಮ್ಮ ಕೈಲಾದ್ದನ್ನು ಮಾಡಲು ಆಸಕ್ತಿ ಇರುವವರು ಈ ಕೆಳಗಿನವರನ್ನು ಸಂಪರ್ಕಿಸಬಹುದು.

ಮುತ್ತುರಾಜ್ 7353770202, ವಲ್ಲಿಗೆ 8892939771, ಶ್ರೀಪಾದ್ ಭಟ್ 9880453799, ಕೆ.ಎಂ.ವಾಸು 9448554534, ಕವಿತಾ 8105579839, ರಾಮಕೃಷ್ಣಪ್ಪ 9901621982 ■


ಲಂಕೇಶ್ ಮೀಡಿಯಾದ ಗೈಡ್ ಪ್ರಕಾಶನದ ಕೊಡುಗೆ
PDO
ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಪಂಚಾಯತಿ ಕಾರ್ಯದರ್ಶಿ
ಸ್ಪರ್ಧಾತ್ಮಕ ಪರೀಕ್ಷಾ ಪುಸ್ತಕ
ಈಗ ಎಲೆಡೆ ಲಭ್ಯ
ಪ್ರತಿಗಳಿಗಾಗಿ: 080-26676427
9880302817

Registered No.RNP/KA/BGS/2036/2014-16 Posted at :Bangalore, PSO, Mysore Road BG-560026 Thursday R B P LANKESH, Kannada Weekly 26-10-2016 RNI No. KARKAN2005/1-

## ಜೆಂಡಾಗೆ ಜೈ ಅಂದ ಮೇಘನಾ

ಸುಂದರ್‌ರಾಜ್ ಮತ್ತು ಪ್ರಮೀಳಾ ಜೋಷಾಯ್ ಪುತ್ರಿ ಮೇಘನಾ ರಾಜ್ ಮತ್ತೊಂದು ದಿಗ್ಗಜರ್ ಪಾತ್ರ ನಿರ್ವಹಿಸಲಿದ್ದಾರೆ. 'ಜೆಂಡಾ' ಸಿನಿಮಾದಲ್ಲಿ ಇವರು ಪುಂಡರ ಗುಂಪಿನ ನಾಯಕಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ಇದು ನೈಜ ಘಟನೆಯನ್ನು ಆಧರಿಸಿ ತಯಾರಾಗುತ್ತಿರುವ ಸಿನಿಮಾ ಆಗಿದ್ದರಿಂದ ಪಾತ್ರದ ಬಗ್ಗೆ ಕುತೂಹಲ ಮೂಡಿದೆ.

ಅಂದಹಾಗೆ ಈ ಸಿನಿಮಾವನ್ನು ಮುಸ್ಸಂಜೆ ಮಹೇಶ್ ನಿರ್ದೇಶನ ಮಾಡುತ್ತಿದ್ದು, 1979-85 ಆಸುಪಾಸಿನಲ್ಲಿ ಮೈಸೂರು ಭಾಗದಲ್ಲಿ ನಡೆದ ಘಟನೆಯೊಂದನ್ನು ಆಧರಿಸಿದ ಸಿನಿಮಾ ಇದಾಗಿದೆ. ಆ ಘಟನೆಗೆ ಸಂಬಂಧಿಸಿದ ಕೆಲವು ವ್ಯಕ್ತಿಗಳು ಈಗ ಬದುಕಿಲ್ಲ, ಉಳಿದವರು ಘಟನೆ ನಡೆದ ಸ್ಥಳದಲ್ಲೇ ವಾಸವಾಗಿದ್ದಾರೆ. ಅದು ಒಂದು ಹೆಣ್ಣಿಗಾಗಿ ನಡೆದ ಘಟನೆ. ಅದನ್ನೇ ಸಿನಿಮಾ ಮಾಡುತ್ತಿದ್ದಾರಂತೆ ನಿರ್ದೇಶಕರು. ಐದು ಪುಂಡ ಹುಡುಗರು ಮತ್ತು ಒಬ್ಬಳು ಹುಡುಗಿ ನಡುವೆ ನಡೆಯುವ ಕತೆ ಸಿನಿಮಾದಲ್ಲಿದೆ. ಆ ಹುಡುಗಿಯಾಗಿ ಮೇಘನಾ ನಟಿಸಿದ್ದಾರೆ. ನಿರ್ದೇಶಕರೇ ಕತೆ, ಚಿತ್ರಕತೆ, ಸಂಭಾಷಣೆ ಬರೆದು ಆಕ್ಷನ್ ಕಟ್ ಹೇಳುತ್ತಿದ್ದಾರೆ. ಪ್ರೀತಿ, ಪೋಲಿ ಮತ್ತು ಪ್ರೇಮದ ಸುತ್ತ ಸಿನಿಮಾದ ಕತೆ ಹೆಣೆಯಲಾಗಿದೆ. ಪುಂಡರ ಗುಂಪಿನಲ್ಲಿ 'ಲೂಸ್' ಚಿತ್ರ ನಿರ್ದೇಶನ ಮಾಡಿದ್ದ ಅರುಣ್, ರಂಗಭೂಮಿ ನಟ ಕೃಷ್ಣ ಹಾಸ್ಯನಟ ರಾಜು ತಾಳಿಕೋಟೆ ಪುತ್ರ ಜ್ಯೂ.ತಾಳಿಕೋಟೆ, ಯುವರಾಜ್, ಅನಿರುದ್ಧ ಇದ್ದಾರೆ. ಇನ್ಸ್‌ಪೆಕ್ಟರ್ ಪಾತ್ರ ದಲ್ಲಿ ದೇವರಾಜ್ ಕಾಣಿಸಿಕೊಳ್ಳು ತ್ತಿದ್ದಾರೆ.



## ಸುಬ್ಬಲಕ್ಷ್ಮಿಯಾದ ಮಯೂರಿ

'ಅಶ್ವಿನಿ ನಕ್ಷತ್ರ' ಖ್ಯಾತಿಯ ಮಯೂರಿ ಸಾಲುಸಾಲು ಚಿತ್ರಗಳನ್ನು ಒಪ್ಪಿಕೊಳ್ಳುತ್ತಿದ್ದಾರೆ. ಮುಂದಿನ ವಾರವಷ್ಟೇ ಅವರ ನಟನೆಯ 'ನಟರಾಜ್ ಸರ್ವೀಸ್' ಸಿನಿಮಾ ರಿಲೀಸ್ ಆಗುತ್ತಿದೆ. ಈ ಬೆನ್ನಲ್ಲೇ ಮಯೂರಿ ಹೊಸಬರ ಮತ್ತೊಂದು ಚಿತ್ರಕ್ಕೆ ಸಹಿ ಮಾಡಿದ್ದಾರೆ. ಆ ಚಿತ್ರಕ್ಕೆ 'ಎಂಟಿವಿ ಸುಬ್ಬಲಕ್ಷ್ಮಿ' ಎಂದು ಹೆಸರಿಡಲಾಗಿದೆ.

ಉಪೇಂದ್ರ ನಟನೆಯ ಸಿನಿಮಾದ ಪಾಪ್ಯುಲರ್ ಸಾಂಗ್ ಅನ್ನು ತಮ್ಮ ಚಿತ್ರದ ಶೀರ್ಷಿಕೆಯನ್ನಾಗಿಟ್ಟುಕೊಂಡು ಸಿನಿಮಾ ಮಾಡುತ್ತಿದ್ದಾರೆ ಶಂಕರ್. ಇದು ನಿರ್ದೇಶಕರ ಚೊಚ್ಚಲು ಚಿತ್ರ. ಇದು ಮಹಿಳಾ ಕೇಂದ್ರಿತ ಸಿನಿಮಾ ಆಗಿದ್ದರೂ, ನಾಯಕನ ಪಾತ್ರಕ್ಕೂ ತನ್ನದೇ ಆದ ಮಹತ್ವವಿದೆಯಂತೆ. ಹಾಗಾಗಿ ಈ ಪಾತ್ರವನ್ನು 'ಫಸ್ಟ್‌ರ್ಯಾಂಕ್ ರಾಜು' ಖ್ಯಾತಿಯ ಗುರುನಂದನ್ ನಿರ್ವಹಿಸುತ್ತಿದ್ದಾರೆ. ಸುಬ್ಬಲಕ್ಷ್ಮಿಯನ್ನು ಒಲಿಸಿಕೊಳ್ಳುವ ಪಾತ್ರ ಇದಾಗಿದೆಯಂತೆ. ಇದು ಪಕ್ಕಾ ಕಾಮಿಡಿ ಸಿನಿಮಾವಾಗಿದ್ದು, ನಿರ್ದೇಶಕರೇ ಚಿತ್ರಕಥೆ ಬರೆದಿದ್ದಾರೆ. ತಮ್ಮ ಜೀವನದಲ್ಲಿ ಗಮನಿಸಿರುವ ವ್ಯಕ್ತಿಗಳ ಅನುಭವವನ್ನೇ ಸಿನಿಮಾವಾಗಿಸುತ್ತಿದ್ದಾರಂತೆ.

ಅ. 12 ರಿಂದ ಶೂಟಿಂಗ್ ಪ್ರಾರಂಭವಾಗಲಿದ್ದು ಅನೂಪ್ ಸೀಳೀನ್ ಅವರ ಸಂಗೀತದಲ್ಲಿ ಹಾಡುಗಳು ಮೂಡಿಬರಲಿವೆ. ಬೆಂಗಳೂರು ಸೇರಿದಂತೆ ಮತ್ತಿತರ ಸ್ಥಳಗಳಲ್ಲಿ ಶೂಟಿಂಗ್ ಮಾಡುವ ಪ್ಲಾನ್ ಮಾಡಿದ್ದಾರೆ ನಿರ್ದೇಶಕರು.

## ಮತ್ತೆ ಒಂದಾದ 'ರಣವಿಕ್ರಮ' ಜೋಡಿ

ಪುನೀತ್ ರಾಜ್‌ಕುಮಾರ್ ನಟನೆಯ 'ರಣವಿಕ್ರಮ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಅಂದುಕೊಂಡಷ್ಟು ಗೆಲುವು ಸಾಧಿಸಿರಲಿಲ್ಲ. ಹಾಗಾಗಿ ನಿರ್ದೇಶಕ ಪವನ್ ಒಡೆಯರ್‌ಗೆ ಪುನೀತ್ ಮತ್ತೆ ಕಾಲ್‌ಶೀಟ್ ಕೊಡುವುದಿಲ್ಲ ಅನ್ನುವ ಮಾತು ಹರಿದಾಡುತ್ತಿತ್ತು. ಹಾಗಾಗಿಯೇ ಪವನ್ ಸಣ್ಣಪುಟ್ಟ ಚಿತ್ರಗಳನ್ನು ನಿರ್ದೇಶನ ಮಾಡುತ್ತಿದ್ದಾರೆ ಅನ್ನುವ ಮಾತೂ ದಟ್ಟವಾಗಿತ್ತು. ಆ ಎಲ್ಲಾ ಮಾತುಗಳಿಗೂ ಗೋಲಿ ಹೊಡೆದಿದ್ದಾರೆ ನಿರ್ದೇಶಕರು. ಈಗ ಮತ್ತೆ ಪುನೀತ್ ಜತೆ ಅವರೊಂದು ಸಿನಿಮಾ ಮಾಡುತ್ತಿದ್ದಾರೆ. ಆ ಚಿತ್ರಕ್ಕೆ ಪುನೀತ್ ಕೂಡ ಗ್ರೀನ್‌ಸಿಗ್ನಲ್ ಕೊಟ್ಟಾಗಿದೆ. ಹೊಸ ರೀತಿಯ ಟೈಟಲ್ ಕೊಡುವಲ್ಲಿ ಫೇಮಸ್ ಆಗಿರುವ ಪವನ್, ತಮ್ಮ ಹೊಸ ಚಿತ್ರಕ್ಕೆ ಕ್ಯಾಚಿ ಶೀರ್ಷಿಕೆ ಇಟ್ಟಿದ್ದಾರೆ. ಇದೇ ಮೊದಲ ಬಾರಿಗೆ ಪುನೀತ್ ರಾಜ್‌ಕುಮಾರ್ ಆಂಜನೇಯನ ಭಕ್ತನಾಗಿ ಕಾಣಿಸಿಕೊಳ್ಳಲಿದ್ದಾರೆ. ಹಾಗಾಗಿ ಚಿತ್ರಕ್ಕೆ 'ವೀರ ಆಂಜನೇಯ ಪ್ರಸಾದ' ಎಂದು ನಾಮಕರಣ ಮಾಡ ಲಾಗಿದೆ. ತೆಲುಗಿನ 'ಪೋಟುಗದು' ಸಿನಿಮಾದ ನಿರ್ಮಾಪಕ ಶಿರಿಷಾ ಲಗಡಪತಿ ಚಿತ್ರವನ್ನು ನಿರ್ಮಾಣ ಮಾಡಲಿದ್ದಾರೆ. ಈ ಸಿನಿಮಾ ಮಾಡಲು ಪುನೀತ್ ಒಪ್ಪಿಕೊಂಡಿದ್ದರೂ, ಸದ್ಯಕ್ಕಿದು ಸೆಟ್ಟೇರುವುದಿಲ್ಲ. ಇನ್ನೂ ಪುನೀತ್ ಕೈಯಲ್ಲಿ ಎರಡು ಚಿತ್ರಗಳಿವೆ. ಅವುಗಳು ಮುಗಿದ ನಂತರವಷ್ಟೇ ಆಂಜನೇಯನ ಅವತಾರ ತಾಳಲಿದ್ದಾರೆ.

## ಆರ್ಮಿ ಕ್ಯಾಂಪಿನಲ್ಲಿ ಸುದಿ

'ಹೆಬ್ಬುಲಿ' ಸಿನಿಮಾದಲ್ಲಿ ಸುದೀಪ್ ಕಮಾಂಡರ್ ಪಾತ್ರದಲ್ಲಿ ಕಾಣಿಸಿಕೊಂಡಿರುವ ಗೊತ್ತೇ ಇದೆ. ಆ ಪಾತ್ರಕ್ಕಾಗಿ ಅವರು ತಯಾರಿಯನ್ನು ಮಾಡಿಕೊಂಡಿದ್ದಾರಂತೆ. ಆಫೀಸರ್ ಜತೆ ನಿರಂತರವಾಗಿ ಸಂಪರ್ಕ ಆರ್ಮಿಯಲ್ಲಿ ನಡೆಯುವ ಚಲನವಲನಗ ತಿಳಿದುಕೊಂಡಿದ್ದಾರಂತೆ. ಹಾಗಾಗಿ ಪಾತ್ರಕ್ಕೆ ತುಂಬಲು ಅವರಿಗೆ ಸಾಧ್ಯವಾಗಿದೆಯಂತೆ.

'ಹೆಬ್ಬುಲಿ' ಪಕ್ಕಾ ಆರ್ಮಿ ಬೇಸ್ಡ್ ಚಿ ಸುದೀಪ್ ದೇಶಕ್ಕೆ ಕಂಟಕವಾಗಿರೋ ಉಗ್ರರನ್ನು ರಕ್ಷಣೆ ಕೊಟ್ಟ ದೇಶಕ್ಕೇ ನುಗ್ಗಿ ಹೊಡೆಯುವ ಕ ಆಗಿ ನಟಿಸಿದ್ದಾರೆ. ಚಿತ್ರ ತಂಡವೇ ಹೇಳುವ ಈ ಪಾತ್ರ ಸುದೀಪ್ ಅವರಿಗೆ ಹೇಳಿ ಮಾಡಿಸಿ ಈಗಾಗಲೇ ಈ ಪಾತ್ರದಲ್ಲಿ ಸುದೀಪ್ ಅವರ ಗೆಟಪ್ಪುಗಳು ವೈರಲ್ ಆಗಿವೆ. ಇದೀಗ 'ಹೆಬ ಶೇಕಡಾ ತೊಂಬತ್ತರಷ್ಟು ಭಾಗದ ಚಿ ಸಂಪೂರ್ಣವಾಗಿದೆ. ಈ ಸುದೀರ್ಘ ಚಿತ್ರ ಹಂತದಲ್ಲಿ ಇಡೀ ಚಿತ್ರ ತಂಡವೇ ಹೆಜ್ಜೆಹೆಜ್ಜೆಗೂ ಚಿತ್ರಗಳನ್ನು ನೋಡುವಂತಾದದ್ದು ಕಾಶ್ಮೀರದಲ್ಲಿ ಹಂಗು ತೊರೆದು ಕಾಶ್ಮೀರದಲ್ಲಿ ಶೂಟ್ ಮಾಡಿ ಸಿನಿಮಾ ತಂಡ. ಸೈನಿಕರೂ ಚಿತ್ರತಂಡಕ್ಕೆ ಸಹಾಯ ಮಾಡಿದ್ದಾರಂತೆ. ಸಾಕಷ್ಟು ಕನ್ನಡದ ಯ ಅಲ್ಲಿದ್ದ ಕಾರಣ, ಸುದೀಪ್ ಜತೆ ಒಂದಷ್ಟು ಕಳೆದು ಸಂಭ್ರಮಿಸಿದ್ದಾರಂತೆ.

## ಡಬ್ಬಾ ಅಂದ್ರು ಸಂಜನಾ

ಕನ್ನಡ ಚಿತ್ರಗಳು ಡಬ್ಬಾ ಅನ್ನುವ ಮೂಲಕ ವಿವಾದವನ್ನು ಮೈಮೇಲೆ ಎಳೆದುಕೊಂಡಿದ್ದಾರೆ ಸಂಜನಾ ಗಿರ್ಲಾನಿ. ಕನ್ನಡ ಸಿನಿಮಾಗಳ ಮೂಲಕವೇ ನೆಲೆಕಂಡುಕೊಂಡಿರುವ ಹುಡುಗಿ, ಯಾಕೆ ಈ ರೀತಿ ಮಾತಾಡಿದರು ಅನ್ನುವುದಕ್ಕೆ ಉತ್ತರ ಇಲ್ಲ, ರಿಯಾಲಿಟಿ ಶೋಗಳನ್ನು ನಿರೂಪಿಸುವ ನಟರ ವಿರುದ್ಧ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು ಪ್ರತಿಭಟಿಸುತ್ತಿದೆ. ಪ್ರೈಮ್ ಟೈಮ್‌ನಲ್ಲೇ ರಿಯಾಲಿಟಿ ಶೋಗಳು ಪ್ರಸಾರ ಆಗುವುದರಿಂದ, ತಮ್ಮ ಚಿತ್ರಗಳನ್ನು ಯಾರೂ ನೋಡುತ್ತಿಲ್ಲ ಅನ್ನುವ ಅಳಲು ನಿರ್ಮಾಪಕರದ್ದು, ಅಲ್ಲದೇ ರಿಯಾಲಿಟಿ ಶೋನ ಶೂಟಿಂಗ್‌ನಲ್ಲೇ ನಟರು ಬಿಜಿ ಆಗುವುದರಿಂದ ಸಿನಿಮಾ ಮಾಡಲು ತಮಗೆ ಕಾಲ್‌ಶೀಟ್ ಸಿಗುತ್ತಿಲ್ಲ ಅನ್ನುವುದು ಉಳಿದ ನಿರ್ಮಾಪಕರ ದುಃಖ. ಈ ಎಲ್ಲಾ ಕಣ್ಣೀರಿನ ಕತೆಯನ್ನು ಆಲಿಸಿದ ವಾಣಿಜ್ಯ ಮಂಡಳಿಯ ಅಧ್ಯಕ್ಷ ಸಾರಾ ಗೋವಿಂದು ಮತ್ತು ಇತರ ಸದಸ್ಯರು, ರಿಯಾಲಿಟಿ ಶೋನಲ್ಲಿ ಭಾಗವಹಿಸುವ ನಟರ ವಿರುದ್ಧ ಗರಂ ಆಗಿದ್ದಾರೆ. ಚಾನೆಲ್‌ಗಳ ವಿರುದ್ಧ ಪ್ರತಿಭಟನೆಗೆ ನಿಂತಿದ್ದಾರೆ. ಈ ನಡೆಯೇ ಸಂಜನಾರನ್ನು ಕೆರಳಿಸಿದೆ. ಹಾಗಾಗಿ ಡಬ್ಬಾ ಸಿನಿಮಾ ಮಾಡುವುದನ್ನು ನಿರ್ಮಾಪಕರು ನಿಲ್ಲಿಸಲಿ ಎಂದು ಫರ್ಮಾನು ಹೊರಡಿಸಿಬಿಟ್ಟಿದ್ದಾರೆ. ಸಂಜನಾರ ಈ ಮಾತು ನಿರ್ಮಾಪಕರನ್ನು ಕೆರಳಿಸಿದೆ. ತಮ್ಮನ್ನು ಅವಮಾನ ಮಾಡಿದ ಸಂಜನಾರನ್ನು ಬ್ಯಾನ್ ಮಾಡಬೇಕೆಂದು ಕೆಲ ನಿರ್ಮಾಪಕರ ವಾಣಿಜ್ಯ ಮಂಡಳಿಗೆ ದೂರ ಕೊಟ್ಟಿದ್ದಾರೆ. ಗಂಡಹೆಂಡಿರ ಮಧ್ಯೆ ಕೂಸು ಬಡವಾಯ್ತು ಅನ್ನುವಂತೆ ಸಂಜನಾರ ಮೇಲೆ ಕ್ರಮ ತೆಗೆದುಕೊಳ್ಳುವ ಚರ್ಚೆ ಕೂಡ ನಡೆದಿದೆ.







ಲಂಕೇಶ್ ಬಳಗದ 'ಗೈಡ್' ಪಾಕ್ಷಿಕ
ಹೊಸ ಸಂಚಿಕೆ ಈಗ ಮಾರುಕಟ್ಟೆಯಲ್ಲಿ ಲಭ್ಯವಿದೆ

ಲಂಕೇಶ್ ಪ್ರಕಾಶನದ ಹೊಸ ಪುಸ್ತಕಗಳು





PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com